ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜುಲೈ 24, 2024

ಸಂಪುಟ : 51 ಸಂಚಿಕೆ : 71 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಇಡಿ ಅಧಿಕಾರಿಗಳ ಬಂಧಿಸಿ ಸಿಎಂ, ಸಚಿವರಿಂದ ಧರಣಿ



ಬೆಂಗಳೂರು, ಜು. 23 - ಮಹರ್ಷಿ ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆ ಹಗರಣಕ್ಕೆ ಸಂಬಂಧಿಸಿದಂತೆ ಇ.ಡಿ. ವಿರುದ್ಧವೇ ರಾಜ್ಯ ಸರ್ಕಾರ ತಿರುಗಿಬಿದ್ದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಂಪುಟ ಸಹೋದ್ಯೋಗಿಗಳು ಕೇಂದ್ರ ಸಂಸ್ಥೆಯ ತನಿಖಾಧಿಕಾರಿಗಳನ್ನು ಬಂಧಿಸುವಂತೆ ಇಂದಿಲ್ಲಿ ಧರಣಿ ನಡೆಸಿದರು.

ಹಗರಣ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಸಂಘರ್ಷಕ್ಕೆ ಎಡೆ ಮಾಡಿದ್ದು, ಸಿದ್ದರಾಮಯ್ಯ ಅವರು, ಪಶ್ಚಿಮ ಬಂಗಾಳ ಸರ್ಕಾರ ಸಿಬಿಐ ವಿರುದ್ಧ ಟೊಂಕ ಕಟ್ಟಿ ನಿಂತಂತೆ ಇ.ಡಿ. ವಿರುದ್ಧ ಸಿಡಿದೆದ್ದಿದ್ದಾರೆ.

ತನ್ನನ್ನೇ ಹಗರಣದಲ್ಲಿ ಸಿಲುಕಿಸಲು ಇ.ಡಿ. ಅಧಿಕಾರಿಗಳು ಸಂಚು ರೂಪಿಸುತ್ತಿದ್ದಾರೆ ಎಂದು ನೇರವಾಗಿ ಆರೋಪ ಮಾಡಿರುವುದಲ್ಲದೆ, ಕೇಂದ್ರದ ಕೈಗೊಂಬೆಯಾಗಿರುವ ತನಿಖಾಧಿಕಾರಿಗಳನ್ನು ಬಂಧಿಸಲು ಮುಂದಾಗಿದ್ದಾರೆ.

ಹಗರಣಕ್ಕೆ ಸಂಬಂಧಿಸಿದಂತೆ ನಿನ್ನೆ ರಾತ್ರಿ ನಡೆದ ಸಚಿವ ಸಂಪುಟ ಸಭೆಯಲ್ಲೂ ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿರುವ ಮುಖ್ಯಮಂತ್ರಿ ಅವರು, ತಮ್ಮನ್ನು, ಉಪಮುಖ್ಯಮಂತ್ರಿ ಹಾಗೂ ಕೆಲವು ಸಚಿವರನ್ನು ಕೇಂದ್ರ ಸರ್ಕಾರ ಹಗರಣದಲ್ಲಿ ಸಿಲುಕಿಸುವ ಪ್ರಯತ್ನ ನಡೆಸಿದೆ. ಬಿಜೆಪಿಯೇತರ ಆಡಳಿತದ ಕೆಲವು ಮುಖ್ಯಮಂತ್ರಿಗಳನ್ನು ಇ.ಡಿ. ಹೇಗೆ ಹಗರಣಗಳಲ್ಲಿ ಸಿಲುಕಿಸಿ ಜೈಲಿಗೆ ಕಳುಹಿಸಿತ್ತೋ, ಅದೇ ರೀತಿ ಕಾರ್ಯವನ್ನು ಕರ್ನಾಟಕದಲ್ಲೂ ಮಾಡುತ್ತಿದೆ (2ನೇ ಪುಟಕ್ಕೆ)

# ತೆರಿಗೆ ವಿನಾಯಿತಿ, ಉದ್ಯೋಗ ಸೃಷ್ಟಿ, ಮೂಲ ಸೌಲಭ್ಯ

## ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಬಿಹಾರ, ಆಂಧ್ರ ಪ್ರದೇಶಗಳಿಗೆ ಮಣೆ

ನವದೆಹಲಿ, ಜು. 23 - ಮಧ್ಯಮ ವರ್ಗಕ್ಕೆ ಆದಾಯ ತೆರಿಗೆ ವಿನಾಯಿತಿ, ಉದ್ಯೋಗ ಸೃಷ್ಟಿ ಯೋಜನೆಗಳಿಗೆ 2 ಲಕ್ಷ ಕೋಟಿ ರೂ. ಹಾಗೂ ಎನ್‌ಡಿಎ ಮಿತ್ರ ಪಕ್ಷಗಳ ಆಡಳಿತ ಇರುವ ರಾಜ್ಯಗಳಿಗೆ ಹೆಚ್ಚಿನ ಅನುದಾನ ನೀಡುವ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ್ದಾರೆ.

ಸತತ ಏಳನೇ ಬಾರಿ ಬಜೆಟ್ ಮಂಡಿಸಿರುವ ಸೀತಾರಾಮನ್, ಗ್ರಾಮೀಣ ಅಭಿವೃದ್ದಿ ಯೋಜನೆಗಳಿಗೆ 2.66 ಲಕ್ಷ ಕೋಟಿ ರೂ. ನೀಡಿದ್ದಾರೆ ಹಾಗೂ ದೀರ್ಘಾವಧಿ ಮೂಲಭೂತ ಸೌಲಭ್ಯ ಯೋಜನೆಗಳಿಗೆ 11.11 ಲಕ್ಷ ಕೋಟಿ ರೂ. ನೀಡುವ ಮೂಲಕ ಆರ್ಥಿಕ ಬೆಳವಣಿಗೆಗೆ ಒತ್ತು ನೀಡಿದ್ದಾರೆ.

ನವೋದ್ಯಮಗಳ ಎಲ್ಲಾ ವರ್ಗಗಳಿಗೆ ಏಂಜಲ್ ತೆರಿಗೆ ರದ್ದುಗೊಳಿಸಲಾಗಿದೆ. ಮೊಬೈಲ್ ಹಾಗೂ ಬಂಗಾರದ ಆಮದಿನ ಸುಂಕ ಇಳಿಸಲಾಗಿದೆ. ಬಂಡವಾಳ ಲಾಭ ತೆರಿಗೆ ಸರಳಗೊಳಿಸಲಾಗಿದೆ. ಆದರೆ ಷೇರುಗಳ ವಹಿವಾಟಿನ ತೆರಿಗೆ ಹೆಚ್ಚಿಸ ಲಾಗಿದೆ. ಷೇರುಗಳ ವಹಿವಾಟು ತೆರಿಗೆ ಹೆಚ್ಚಿಸಿರುವುದರಿಂದ ಷೇರುಪೇಟೆಯಲ್ಲಿ ಕುಸಿತವಾಗಿದೆ. ವಿಶ್ವ ಈಗ ನೀತಿಗಳ ಅನಿಶ್ಚಿತತೆಯಲ್ಲಿ (4ನೇ ಪುಟಕ್ಕೆ)




### ಉನ್ನತ ಶಿಕ್ಷಣಕ್ಕೆ ಸಾಲ, ಯುಜಿಸಿ ಅನುದಾನ ಕಡಿತ

ನವದೆಹಲಿ, ಜು. 23 - ಉನ್ನತ ಶಿಕ್ಷಣಕ್ಕಾಗಿ 10 ಲಕ್ಷ ರೂ.ಗಳ ಸಾಲದ ನೆರವು ನೀಡುವುದಾಗಿ ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಇದೇ ವೇಳೆ ಉನ್ನತ ಶಿಕ್ಷಣ ನಿಯಂತ್ರಕ ಯು.ಜಿ.ಸಿ.ಗೆ ನೀಡುವ ಅನುದಾನದಲ್ಲಿ ಶೇಕಡ 60ರ ಕಡಿತವಾಗಿದೆ.

ಪ್ರತಿಷ್ಠಿತ ವಾಣಿಜ್ಯ ಶಾಲೆಗಳಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ಗೆ (ಐ.ಐ.ಎಂ.) ನೀಡುವ ಅನುದಾನವನ್ನು ಸತತ ಎರಡನೇ ವರ್ಷ ಕಡಿತಗೊಳಿಸಲಾಗಿದೆ. ಶಾಲಾ ಶಿಕ್ಷಣಕ್ಕೆ ನೀಡುವ ಅನುದಾನವನ್ನು 535 ಕೋಟಿ ರೂ. ಹೆಚ್ಚಿಸಲಾಗಿದೆ. ಆದರೆ ಉನ್ನತ ಶಿಕ್ಷಣದ ಅನುದಾನವನ್ನು ಕಳೆದ ವರ್ಷದ ಪರಿಷ್ಕರಿಸಿದ ಅಂದಾಜಿಗೆ ಹೋಲಿಸಿದರೆ 9,600 ಕೋಟಿ ರೂ ಇಳಿಕೆ ಮಾಡಲಾಗಿದೆ.

ಒಟ್ಟಾರೆ ಶಿಕ್ಷಣ ವಲಯಕ್ಕೆ ಇರುವ ಅನುದಾನ 9,000 ಕೋಟಿ ರೂ ಕಡಿಮೆಯಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ಶಿಕ್ಷಣ ವಲಯಕ್ಕೆ 1.29 ಲಕ್ಷ ಕೋಟಿ ರೂ ಅನುದಾನ ನೀಡಲಾಗಿತ್ತು. ಈ ಬಾರಿ 1.20 ಲಕ್ಷ ಕೋಟಿ ರೂ ಅನುದಾನ (4ನೇ ಪುಟಕ್ಕೆ)

### ಬಜೆಟ್ ಮುಖ್ಯಾಂಶಗಳು

- ಹೊಸ ತೆರಿಗೆ ಪದ್ಧತಿಯಲ್ಲಿ ಡಿಡಕ್ಷನ್ ಪ್ರಮಾಣ 50,000 ಗಳಿಂದ 75,000 ರೂ.ಗಳಿಗೆ ಏರಿಕೆ
- ಹೊಸ ತೆರಿಗೆ ಪದ್ಧತಿಯಲ್ಲಿ ವೇತನದಾರರಿಗೆ 17,500 ರೂ.ಗಳ ವರೆಗಿನ ಆದಾಯ ತೆರಿಗೆ ಉಳಿತಾಯ
- ಮೊಬೈಲ್ ಫೋನ್, ಪಿಸಿಬಿಎ (ಪ್ರಿಂಟೆಡ್ ಸರ್ಕೀಟ್ ಬೋರ್ಡ್ ಅಸೆಂಬ್ಲಿ) ಹಾಗೂ ಮೊಬೈಲ್ ಚಾರ್ಜರ್ ಸುಂಕ ಶೇ. 15 ಕ್ಕೆ ಇಳಿಕೆ.
- ಬಂಗಾರ ಹಾಗೂ ಬೆಳ್ಳಿ ಮೇಲಿನ ಸುಂಕ ಶೇ. 6 ಹಾಗೂ ಪ್ಲಾಟಿನಂ ಸುಂಕ ಶೇ. 6.4 ಕ್ಕೆ ಇಳಿಕೆ
- ಶೇರು ಹಾಗೂ ಸೆಕ್ಯೂರಿಟಿಗಳ ಮಾರಾಟದ ಮೇಲಿನ ತೆರಿಗೆ ಹೆಚ್ಚಳ
- ಎಲ್ಲಾ ವರ್ಗದ ನವೋದ್ಯಮಗಳ ಮೇಲಿನ ಏಂಜಲ್ ಟ್ಯಾಕ್ಸ್ ರದ್ದು
- ವಿದೇಶಿ ಕಂಪನಿಗಳ ಕಾರ್ಪೊರೇಟ್ ತೆರಿಗೆ ಶೇ. 40 ರಿಂದ 35 ಕ್ಕೆ ಇಳಿಕೆ
- ಕೆಲ ಹಣಕಾಸು ಆಸ್ತಿಗಳಲ್ಲಿ ಅಲ್ಪಾವಧಿ ಲಾಭದ ಮೇಲಿನ ತೆರಿಗೆ ಶೇ. 20ಕ್ಕೆ ಹೆಚ್ಚಳ
- ಎಲ್ಲಾ ಹಣಕಾಸು ಹಾಗೂ ಹಣಕಾಸೇತರ ಆಸ್ತಿಗಳಲ್ಲಿ ದೀರ್ಘಾವಧಿ ಲಾಭಕ್ಕೆ ಶೇ.12.5 ರ ತೆರಿಗೆ
- ಇ-ಕಾಮರ್ಸ್ ನಿರ್ವಾಹಕರ ಟಿಡಿಎಸ್ ತೆರಿಗೆ ಶೇ. ಒಂದರಿಂದ ಶೇ. 0.1 ಕ್ಕೆ (4ನೇ ಪುಟಕ್ಕೆ)

## ಬಂಗಾರ, ಮೊಬೈಲ್, ಕ್ಯಾನ್ಸರ್ ಔಷಧಿಗಳ ತೆರಿಗೆ ಇಳಿಕೆ

ನವದೆಹಲಿ, ಜು. 23 - ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಂಗಾರ, ಬೆಳ್ಳಿ ಹಾಗೂ ಇತರೆ ಅಮೂಲ್ಯ ಲೋಹಗಳ ಆಮದು ಮೇಲಿನ ತೆರಿಗೆ ತಗ್ಗಿಸಿದ್ದಾರೆ. ಮೊಬೈಲ್ ಹಾಗೂ ಕ್ಯಾನ್ಸರ್‌ಗೆ ಸಂಬಂಧಿಸಿದ ಔಷಧಗಳ ಬೆಲೆಯನ್ನು ಕಡಿಮೆ ಮಾಡಲಾಗಿದೆ.

ಆದರೆ, ಆಮದು ಮಾಡಿಕೊಳ್ಳುವ ತೋಟದ ಕೊಡೆಗಳು ಹಾಗೂ ಪ್ರಯೋಗಾಲಯದ ರಾಸಾಯನಿಕಗಳ ಮೇಲಿನ ತೆರಿಗೆ ಹೆಚ್ಚಿಸಲಾಗಿದೆ.

ಬಂಗಾರ ಹಾಗೂ ಬೆಳ್ಳಿ ಆಮದು ತೆರಿಗೆಯನ್ನು ಶೇ.6 ಮತ್ತು ಪ್ಲಾಟಿನಮ್ ತೆರಿಗೆ ಶೇ.6.4 ಕ್ಕೆ ಇಳಿಸಲಾಗಿದೆ. ದೇಶದ ಆಭರಣ ಮಾರುಕಟ್ಟೆಯ ಮೌಲ್ಯವರ್ಧನೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಔಷಧಿಗಳಾದ ಟ್ರಾಸ್ಟುಜುಮಾಬ್ ಡೆರುಕ್ಸಟೆಕಾನ್, ಒಸಿಮೆರ್ಟಿನಿಬ್ ಹಾಗೂ ಡುರ್ವಲುಮಾಬ್ ಮೇಲಿನ ತೆರಿಗೆಯನ್ನು ಸಂಪೂರ್ಣ (4ನೇ ಪುಟಕ್ಕೆ)

## ದೂಡಾ ಅಧ್ಯಕ್ಷರಾಗಿ ದಿನೇಶ್ ಕೆ.ಶೆಟ್ಟಿ ?



ದಾವಣಗೆರೆ, ಜು.23- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ. ಈ (4ನೇ ಪುಟಕ್ಕೆ)

# ನೀಟ್ ಮರು ಪರೀಕ್ಷೆ ಅಗತ್ಯವಿಲ್ಲ : ಸುಪ್ರೀಂ ಕೋರ್ಟ್

### ಪರೀಕ್ಷೆ ಪವಿತ್ರತೆಗೆ ವ್ಯವಸ್ಥಿತ ಧಕ್ಕೆಯಾಗಿಲ್ಲ

ನವದೆಹಲಿ, ಜು. 23 - ವೈದ್ಯಕೀಯ ಪ್ರವೇಶಕ್ಕೆ ನಡೆಸಲಾದ ನೀಟ್ - ಯುಜಿ ಪರೀಕ್ಷೆಯನ್ನು ರದ್ದುಗೊಳಿಸಬೇಕೆಂಬ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದ್ದು, ಈ ಪರೀಕ್ಷೆಯಲ್ಲಿ ವ್ಯವಸ್ಥಿತ ಲೋಪ ಉಂಟಾಗಿರುವ ಯಾವುದೇ ಸಾಕ್ಷಿ ಕಂಡುಬಂದಿಲ್ಲ ಹೇಳಿದೆ.

ಮಧ್ಯಂತರ ತೀರ್ಪು ನೀಡಿರುವ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ, ಪರೀಕ್ಷೆಯ ಪವಿತ್ರತೆಗೆ ವ್ಯವಸ್ಥಿತ ಧಕ್ಕೆಯಾಗಿದೆ ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಹೇಳಿದೆ.

ಕಳೆದ ಮೇ 5 ರಂದು ನೀಟ್ ಪರೀಕ್ಷೆ ನಡೆಸಲಾಗಿತ್ತು. 23 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಕಾರಣ ಮರು ಪರೀಕ್ಷೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳನ್ನು ದಾಖಲಿಸಲಾಗಿತ್ತು. ವಿಚಾರಣೆ ನಂತರ ತೀರ್ಪು ನೀಡಿರುವ ನ್ಯಾಯಾಲಯ, ಮರು ಪರೀಕ್ಷೆಗೆ ಆದೇಶಿಸುವುದರಿಂದ ಈಗಾಗಲೇ ಪರೀಕ್ಷೆಗೆ ಹಾಜರಾಗಿರುವ 24 ಲಕ್ಷ ವಿದ್ಯಾರ್ಥಿಗಳ ಮೇಲೆ ಪರಿಣಾಮವಾಗಲಿದೆ ಹೇಳಿದೆ.

ಮರು ಪರೀಕ್ಷೆಯಿಂದ ಪ್ರವೇಶ ವೇಳಾಪಟ್ಟಿಗೆ ಸಮಸ್ಯೆಯಾಗುತ್ತದೆ. ಇದರಿಂದ ವೈದ್ಯಕೀಯ ಶಿಕ್ಷಣದ ಮೇಲೆ ಸರಣಿ ಪರಿಣಾಮಗಳಾಗುತ್ತವೆ. ಅರ್ಹ ವೈದ್ಯಕೀಯ ವೃತ್ತಿಪರರ ಲಭ್ಯತೆಯ ಮೇಲೆ ಪರಿಣಾಮ ಆಗುತ್ತದೆ ಹಾಗೂ ಮೀಸಲು ಸೀಟುಗಳನ್ನು ಪಡೆದ ಹಿಂದುಳಿದ ವರ್ಗಗಳ ಮೇಲೆ ಪರಿಣಾಮವಾಗುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

ಅಕ್ರಮಗಳು ವ್ಯಾಪಕವಾಗಿದ್ದರೆ ಹಾಗೂ ಇಡೀ ಪರೀಕ್ಷೆಯ ಪಾವಿತ್ರ್ಯತೆಯ ಮೇಲೆ (2ನೇ ಪುಟಕ್ಕೆ)

## ರಾಜ್ಯದ ಯಾವ ಬೇಡಿಕೆಗೂ ಮನ್ನಣೆ ನೀಡದ ಬಜೆಟ್



ಬೆಂಗಳೂರು, ಜು. 23 - ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯದ ಯಾವುದೇ ಬೇಡಿಕೆಗಳಿಗೂ ಮನ್ನಣೆ ನೀಡದೆ ಅತ್ಯಂತ ನಿರಾಶಾ ದಾಯಕ ಬಜೆಟ್ ಮಂಡಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿರ್ಮಲಾ ಸೀತಾರಾಮನ್ ಅವರು ರಾಜ್ಯದ ಹಿತವನ್ನು ಸಂಪೂರ್ಣ ವಾಗಿ ನಿರ್ಲಕ್ಷಿಸುವ ಮೂಲಕ ರಾಜ್ಯದ ಜನತೆಯ ಕೈಗೆ ಚೊಂಬು ಕೊಟ್ಟಿದ್ದಾರೆ. ಪ್ರಧಾನ ಮಂತ್ರಿಗಳು ತನ್ನ ಅಧಿಕಾರ ಉಳಿಸಿಕೊಳ್ಳುವ ಉದ್ದೇಶದಿಂದ ಆಂಧ್ರ ಪ್ರದೇಶ ಮತ್ತು ಬಿಹಾರ ರಾಜ್ಯ ಗಳಿಗೆ ವಿಶೇಷ ಅನುದಾನ ಒದಗಿಸಿದ್ದು, ಇತರೆ ರಾಜ್ಯಗಳನ್ನು ಕಡೆಗಣಿಸಿದ್ದಾರೆ ಎಂದರು.

ಬಜೆಟ್ ಪೂರ್ವ ಸಭೆಯಲ್ಲಿ ರಾಜ್ಯ ಸರ್ಕಾರ ಹಲವಾರು ಮನವಿಗಳನ್ನು ಮುಂದುವರೆಸಿತ್ತು. ಆದರೆ ಯಾವುದೇ ಬೇಡಿಕೆ ಗಳಿಗೂ ಕೇಂದ್ರ ಹಣಕಾಸು ಸಚಿವರು ಸ್ಪಂದಿಸಿಲ್ಲ.

ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಅನುದಾನ ಒದಗಿಸುವುದಾಗಿ ಹಿಂದಿನ ಬಜೆಟ್‌ನಲ್ಲಿ ನಿರ್ಮಲಾ ಸೀತಾರಾಮನ್ ಅವರು ಘೋಷಿಸಿದ್ದರು. ಆದರೆ ಈ ಯೋಜನೆಗೆ ನಯಾ ಪೈಸೆ ಒದಗಿಸಿಲ್ಲ. ಈ ಆಯವ್ಯಯದಲ್ಲಿ ಒದಗಿಸುವಂತೆ ಕೋರಲಾಗಿತ್ತು ಎಂದು (5ನೇ ಪುಟಕ್ಕೆ)

## ರಾಜ್ಯಕ್ಕೆ ಚೊಂಬು ಕೊಟ್ಟ ಕೇಂದ್ರ ಎಸ್ಸೆಸ್-ಎಸ್ಸೆಸ್ಸೆಂ ಬಜೆಟ್ ಟೀಕೆ





ದಾವಣಗೆರೆ, ಜು.23- ಕೇಂದ್ರ ಸರ್ಕಾರ ಇಂದು ಪ್ರಥಮ ಬಜೆಟ್‌ನಲ್ಲಿ ರಾಜ್ಯಕ್ಕೆ ಏನನ್ನೂ ನೀಡದೇ ರಾಜ್ಯದ ಜನತೆಗೆ ದ್ರೋಹ ಬಗೆದಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಶಾಸಕ ಶಾಮನೂರು ಶಿವಶಂಕರಪ್ಪ ಟೀಕಿಸಿದ್ದಾರೆ.

ಬಜೆಟ್‌ನಲ್ಲಿ ಕರ್ನಾಟಕಕ್ಕೆ ಚೊಂಬು ಕೊಟ್ಟಿದ್ದಾರೆ, ಕರ್ನಾಟಕಕ್ಕೆ ಪಂಗನಾಮ ಹಾಕಿದ್ದಾರೆ. ಆಂಧ್ರಪ್ರದೇಶ-ಬಿಹಾರ ರಾಜ್ಯಗಳಿಗೆ ವಿಶೇಷ ಅನುದಾನ ಕೊಟ್ಟಿದ್ದಾರೆ, ಬೇರೆ ರಾಜ್ಯಗಳಿಗೆ ಯಾವುದೇ ಕೊಡುಗೆ ನೀಡಿಲ್ಲ. ಏಕೆಂದರೆ ನರೇಂದ್ರ ಮೋದಿ ಪ್ರಧಾನಿಯಾಗಿ ಉಳಿಯಬೇಕೆಂದರೆ ಆ (4ನೇ ಪುಟಕ್ಕೆ)

## ಕರ್ನಾಟಕಕ್ಕೆ ಹೂರಣವಿಲ್ಲದ ಹೋಳಿಗೆ ನೀಡಿದ ಕೇಂದ್ರ



ದಾವಣಗೆರೆ, ಜು. 23- ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಹೂರಣವಿಲ್ಲದ ಹೋಳಿಗೆ ನೀಡಿದೆ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಕೇಂದ್ರ ಬಜೆಟ್ ಕುರಿತು ಟೀಕಿಸಿದ್ದಾರೆ.

ದೇಶದ 28 ರಾಜ್ಯಗಳ ಪೈಕಿ ಕೆಲವೇ ರಾಜ್ಯಗಳಿಗೆ ಸೀಮಿತವಾದ ಬಜೆಟ್ ಇದಾಗಿದೆ. ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರ ಕಳೆದ 10 ಬಾರಿಯೂ ಕರ್ನಾಟಕ ರಾಜ್ಯಕ್ಕೆ ತೋರಿದ ಮಲತಾಯಿ ಧೋರಣೆಯನ್ನು 11ನೇ ಬಜೆಟ್‌ನಲ್ಲಿಯೂ ಮುಂದುವರೆಸಿದೆ ಎಂದು ಹೇಳಿದ್ದಾರೆ. ರಾಜ್ಯದ ಯಾವುದೇ ನೀರಾವರಿ ಯೋಜನೆಗಳಿಗೆ ಹಾಗೂ ಎ.ಐ.ಐ.ಎಂ.ಎಸ್. ಅನುದಾನ ತರುವಲ್ಲಿ ರಾಜ್ಯದಿಂದ ಆಯ್ಕೆಗೊಂಡ ಕೇಂದ್ರದ ಸಚಿವರುಗಳು ವಿಫಲರಾಗಿದ್ದಾರೆ. ಪ್ರತೀ ವರ್ಷಕ್ಕೆ 2 ಕೋಟಿ ಉದ್ಯೋಗ (2ನೇ ಪುಟಕ್ಕೆ)

## ಅಭಿವೃದ್ಧಿ ಭಾರತದ ಸಂಕಲ್ಪಕ್ಕೆ ಪೂರಕವಾಗಿರುವ ಬಜೆಟ್



ದಾವಣಗೆರೆ, ಜು. 23- ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಹೂರಣವಿಲ್ಲದ ಹೋಳಿಗೆ ನೀಡಿದ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಕೇಂದ್ರ ಬಜೆಟ್ ಕುರಿತು ಟೀಕಿಸಿದ್ದಾರೆ.

ದೇಶದ 28 ರಾಜ್ಯಗಳ ಪೈಕಿ ಕೆಲವೇ ರಾಜ್ಯಗಳಿಗೆ ಸೀಮಿತವಾದ ಬಜೆಟ್ ಇದಾಗಿದೆ. ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರ ಕಳೆದ 10 ಬಾರಿಯೂ ಕರ್ನಾಟಕ ರಾಜ್ಯಕ್ಕೆ ತೋರಿದ ಮಲತಾಯಿ ಧೋರಣೆಯನ್ನು 11 ನೇ ಬಜೆಟ್‌ನಲ್ಲಿಯೂ ಮುಂದುವರೆಸಿದೆ ಎಂದು ಹೇಳಿದ್ದಾರೆ. ರಾಜ್ಯದ ಯಾವುದೇ ನೀರಾವರಿ ಯೋಜನೆಗಳಿಗೆ ಹಾಗೂ ಎ.ಐ.ಐ.ಎಂ.ಎಸ್. ಅನುದಾನ ತರುವಲ್ಲಿ ರಾಜ್ಯದಿಂದ ಆಯ್ಕೆಗೊಂಡ ಕೇಂದ್ರದ ಸಚಿವರುಗಳು ವಿಫಲರಾಗಿದ್ದಾರೆ.

ಪ್ರತೀ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಎನ್ನುತ್ತಿದ್ದ (5ನೇ ಪುಟಕ್ಕೆ)

## ಇ.ಡಿ. ಅಧಿಕಾರಿಗಳ ವಿರುದ್ಧದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ

ಬೆಂಗಳೂರು, ಜು. 23 - ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮದ ತನಿಖೆ ವೇಳೆ ಅಧಿಕಾರಿಯೊಬ್ಬರಿಗೆ ಒತ್ತಡ ಹೇರಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.)ದ ಅಧಿಕಾರಿಗಳ ವಿರುದ್ಧ ದಾಖಲಾಗಿದ್ದ ಎಫ್.ಐ.ಆರ್.ಗೆ ಹೈಕೋರ್ಟ್ ತಡೆ ನೀಡಿದೆ.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮದ ತನಿಖೆಯ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ಹೇಳುವಂತೆ ಒತ್ತಡ ಹೇರಿರುವ ಆರೋಪದ ಮೇಲೆ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು.

ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಬಿ.ಕಲ್ಲೇಶ್ ಅವರು ಪೊಲೀಸರಲ್ಲಿ ದೂರು ನೀಡಿ, ಮುರಳಿ ಕಣ್ಣನ್ ಹಾಗೂ ಮಿತ್ತಲ್ ಎಂಬ ಅಧಿಕಾರಿಗಳು ತಮ್ಮ ಮೇಲೆ ಒತ್ತಡ ಹೇರಿದ್ದಾರೆ ಎಂದಿದ್ದರು. ನಂತರ ಅಧಿಕಾರಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿತ್ತು. ಇದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯದ ಇಬ್ಬರು ಅಧಿಕಾರಿಗಳು (2ನೇ ಪುಟಕ್ಕೆ)

## ಬಂಗಾರದ ಬೆಲೆ 3,340 ರೂ. ಇಳಿಕೆ

ನವದೆಹಲಿ, ಜು. 23 - ಬಂಗಾರ ಹಾಗೂ ಬೆಳ್ಳಿಯ ಮೇಲಿನ ತೆರಿಗೆಯನ್ನು ಕೇಂದ್ರ ಸರ್ಕಾರ ಶೇಕಡ 6ಕ್ಕೆ ಇಳಿಸಿದ ನಂತರ, ಬಂಗಾ ರದ ಬೆಲೆಯಲ್ಲಿ 3,350 ರೂ.ಗಳ ಕುಸಿತವಾಗಿದೆ. ಬಂಗಾರದ ಬೆಲೆ 10 ಗ್ರಾಂಗಳಿಗೆ ಈಗ 72,300ರೂ. ಹಂತಕ್ಕೆ ಇಳಿಕೆ ಯಾಗಿದೆ. ಬೆಳ್ಳಿ ಬೆಲೆ ಸಹ ಕೆಜಿಗೆ 3,500 ರೂಪಾಯಿ ಇಳಿಕೆಯಾಗಿದ್ದು 87,500 ರೂ. ಗಳಿಗೆ ತಲುಪಿದೆ.

## ಈ ವರ್ಷವೂ ಜನಗಣತಿ ಅಸಾಧ್ಯ

ನವದೆಹಲಿ, ಜು. 23 - ಜನಗಣತಿಗಾಗಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ 1,309 ಕೋಟಿ ರೂ.ಗಳನ್ನು ನೀಡುವುದಾಗಿ ತಿಳಿಸಿದೆ. 2021 - 22 ರಲ್ಲಿ ಜನಗಣತಿಗಾಗಿ 3,768 ಕೋಟಿ ರೂ. ನೀಡಲಾಗಿತ್ತು. ಈ ಬಾರಿ ಅತಿ ಕಡಿಮೆ ಅನುದಾನ ನೀಡಿರುವ ಕಾರಣ, 2024 ರಲ್ಲೂ ಜನಗಣತಿ ನಡೆಯುವುದು ಅನುಮಾನವಾಗಿದೆ.

2019 ರಲ್ಲಿ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ (2ನೇ ಪುಟಕ್ಕೆ)

# ಶೀಘ್ರ ಕಾಡಾ ಸಭೆ: ಸಚಿವ ಎಸ್ಸೆಸ್ಸೆಂ ಭರವಸೆ

## ಜಿಲ್ಲಾಧಿಕಾರಿಗಳೊಂದಿಗೆ ಸಭೆ, ರೈತರ ಪ್ರತಿಭಟನೆ ತಾತ್ಕಾಲಿಕ ಮುಂದೂಡಿಕೆ



ದಾವಣಗೆರೆ, ಜು.23- ಭದ್ರಾ ಜಲಾಶಯದಿಂದ ಅಚ್ಚುಕಟ್ಟುದಾರರಿಗೆ ಮಳೆಗಾಲದ ಬೆಳೆಗೆ ನೀರು ಹರಿಸಬೇಕು ಮತ್ತು ಜಲಾಶಯದ ದುರಸ್ತಿ ಕೈಗೊಳ್ಳಬೇಕೆಂದು ಹೆದ್ದಾರಿ ಬಂದ್ ಗೆ ಕರೆ ಕೊಟ್ಟಿದ್ದ ರೈತ ಮುಖಂಡರೊಂದಿಗೆ ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಒಂದೆರಡು ದಿನಗಳಲ್ಲಿ ಕಾಡಾ ಸಭೆ ಕರೆಯಲು ನಿರ್ಣಯಿಸಲಾಗುತ್ತದೆ ಎಂದು ದೂರವಾಣಿಯಲ್ಲಿ ನೀಡಿದ ಭರವಸೆ ಮೇರೆಗೆ ರೈತ ಮುಖಂಡರು ಉದ್ದೇಶಿಸಿದ್ದ ಪ್ರತಿಭಟನೆ ಮುಂದೂಡಿದ್ದಾರೆ.

ಜುಲೈ 23 ರಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅಧ್ಯಕ್ಷತೆಯಲ್ಲಿ ಜಿಲ್ಲಾಡಳಿತ ಭವನದಲ್ಲಿ ರೈತ ಮುಖಂಡರೊಂದಿಗೆ ಸಮಾಲೋಚನಾ ಸಭೆ ನಡೆಯಿತು. ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ನೇತೃತ್ವದಲ್ಲಿ ಭದ್ರಾ ಜಲಾಶಯದ ಅಗತ್ಯ ದುರಸ್ಥಿಗೆ ಅನುದಾನ ಬಿಡುಗಡೆ ಮತ್ತು ಕಾಲುವೆಗಳ ದುರಸ್ತಿ ಸೇರಿದಂತೆ ಮಳೆಗಾಲದ ಬೆಳೆಗೆ ನೀರು ಹರಿಸಬೇಕೆಂಬ (2ನೇ ಪುಟಕ್ಕೆ)

### ಹೆದ್ದಾರಿ ಬಂದ್ ತಾತ್ಕಾಲಿಕ ಮುಂದೂಡಿಕೆ: ಎಸ್‌ಎಆರ್

ದಾವಣಗೆರೆ, ಜು. 23- ಭದ್ರಾ ಜಲಾಶಯ ದುರಸ್ತಿ ಅನುದಾನ ಬಿಡುಗಡೆ, ಕೂಡಲೇ ನಾಲೆಗಳಿಗೆ ನೀರು ಹರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ನಾಳೆ ದಿನಾಂಕ 24 ರಂದು ಬಾಡಾ ಕ್ರಾಸ್ ಬಳಿ ಹೆದ್ದಾರಿ ಬಂದ್ ಚಳವಳಿಯನ್ನು ಜಿಲ್ಲಾಧಿಕಾರಿಗಳ ಭರವಸೆ ಮೇರೆಗೆ ತಾತ್ಕಾಲಿಕವಾಗಿ (2ನೇ ಪುಟಕ್ಕೆ)

## ಮಲೆನಾಡಿನಲ್ಲಿ ಮತ್ತೆ ಮಳೆ : ತುಂಗಾ ಹೆಚ್ಚಳ, ಭದ್ರಾ ಇಳಿಕೆ

ಶಿವಮೊಗ್ಗ, ಜು.23- ಮಲೆನಾಡಿನಲ್ಲಿ ಕಳೆದೆರೆಡು ದಿನಗಳಿಂದ ಬಿಡುವು ನೀಡಿದ್ದ ಮುಂಗಾರು ಮಳೆ ಆರಂಭವಾಗಿದ್ದು, ತುಂಗಾ ನದಿಯಲ್ಲಿ ನೀರಿನ ಹರಿವು ಮಂಗಳ ವಾರ ಮತ್ತೆ ಏರಿಕೆಯಾಗಿದ್ದರೆ, ಭದ್ರಾ ಹರಿವು ಇಳಿಕೆ ಆಗಿದೆ. ಗಾಜನೂರಿನ ತುಂಗಾ ಜಲಾಶಯಕ್ಕೆ ಮಂಗಳವಾರ ಬೆಳಗ್ಗೆ 28 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಸಂಜೆ 38 ಸಾವಿರ ಕ್ಯೂಸೆಕ್ಸ್‌ಗೆ ಏರಿಕೆ ಕಂಡಿದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದ್ದು, ನದಿಯಲ್ಲಿ ನೀರಿನ ಹರಿವು ಮತ್ತೆ ಹೆಚ್ಚಾಗಿದೆ.

**ಭದ್ರಾ ಒಳ ಹರಿವು ಇಳಿಕೆ :** ಭದ್ರಾ ಜಲಾಶಯಕ್ಕೆ ಸೋಮವಾರ 25 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಸೋಮವಾರ ಮಂಗಳವಾರ 20 ಸಾವಿರ ಕ್ಯೂಸೆಕ್ಸ್‌ಗೆ ಇಳಿದಿದೆ. ಸೋಮವಾರ ಸಂಜೆ ಜಲಾಶಯದ ನೀರಿನ ಮಟ್ಟ 169 ಅಡಿ ದಾಟಿದ್ದು, ಕಳೆದ ವರ್ಷಕ್ಕಿಂತ 24 ಅಡಿ ನೀರು ಹೆಚ್ಚು ಸಂಗ್ರಹವಾಗಿದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 145 ಅಡಿ ನೀರಿತ್ತು. ಜಲಾಶಯದ ಗರಿಷ್ಟ ಮಟ್ಟ 186 ಅಡಿಗಳಾಗಿದ್ದು, ಜಲಾಶಯ ಭರ್ತಿಗೆ 17 ಅಡಿ ಮಾತ್ರ ಬಾಕಿ ಇದೆ.

### ಎಲೆಬೇತೂರು ನಾಗರಾಜ್ ಹೆಚ್.ಎಂ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ

**ಶ್ರೀ ನಾಗರಾಜ್ ಹೆಚ್.ಎಂ**

ಇವರು ದಿನಾಂಕ 23.7.2024ರ ಮಂಗಳವಾರ ಸಂಜೆ 5.09ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಸಹೋದರರು, ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.7.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಎಲೆಬೇತೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗದವರು, ಮೊ : 96322 25115

# ತುಂಗಭದ್ರಾ ನದಿಯಲ್ಲಿ ಪ್ರವಾಹ ನಿರೀಕ್ಷೆ

## ಹೊನ್ನಾಳಿಯ ರಾಜ್‌ಘಾಟ್‌ನಲ್ಲಿ ಅಣಕು ರಕ್ಷಣಾ ಕಾರ್ಯ, ಮಳೆ, ಪ್ರವಾಹ ಎದುರಿಸಲು ಸನ್ನದ್ದವಾಗಿರಲು ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಸಭೆ



ಹೊನ್ನಾಳಿ, ಜು. 23 - ಮಲೆನಾಡಿನ ಭಾಗದಲ್ಲಿ ಸಾಕಷ್ಟು ಮಳೆಯಾಗುತ್ತಿರುವುದರಿಂದ ತುಂಗಭದ್ರಾ ನದಿಯಲ್ಲಿ ಹೆಚ್ಚು ನೀರು ಬರಬಹುದೆಂದು ಅಂದಾಜಿಸಿ ನದಿ ಪ್ರವಾಹದಿಂದ ಮುಳುಗಡೆಯಾಗುವ ಪ್ರದೇಶದಲ್ಲಿ ಜನ, ಜಾನುವಾರುಗಳ ರಕ್ಷಣೆಗಾಗಿ ಎನ್.ಡಿ. ಆರ್.ಎಫ್, ಎಸ್.ಡಿ.ಆರ್.ಎಫ್ ಮತ್ತು ತುರ್ತು ಸೇವಾ ಉಪಕರಣಗಳನ್ನು ಸನ್ನದ್ದವಾಗಿಸಲು ಅಣಕು ರಕ್ಷಣಾ ಕಾರ್ಯ ಹಾಗೂ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಕೃತಿ ವಿಕೋಪದಿಂದ ಉಂಟಾಗುವ ಪರಿಸ್ಥಿತಿ ಎದುರಿಸಲು ಸಿದ್ದತೆಗಾಗಿ ಸಭೆ ನಡೆಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ. ಎಂ.ಗಂಗಾಧರಸ್ವಾಮಿ ತಿಳಿಸಿದರು.

ಅವರು ಮಂಗಳವಾರ ಹೊನ್ನಾಳಿಯ ರಾಜಘಾಟ್ ಬಳಿ ರಕ್ಷಣಾ ಕಾರ್ಯದ ಅಣಕು ಪ್ರದರ್ಶನ ವೀಕ್ಷಣೆ ಮಾಡಿ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಜಿಲ್ಲೆಯಲ್ಲಿ 2024 ರ ಜನವರಿಯಿಂದ ಜುಲೈ 23 ರ ವರೆಗೆ 263 ಮಿ.ಮೀ ವಾಡಿಕೆಗೆ 371 ಮಿ.ಮೀ ಮಳೆಯಾಗಿದೆ. ಆದರೆ ಮಲೆನಾಡಿನ ಭಾಗದಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ತುಂಗಾ ನದಿಯಿಂದ ನೀರು ಬರುತ್ತಿದ್ದು ಜುಲೈ 20 ರಂದು 96 ಸಾವಿರ ಕ್ಯೂಸೆಕ್ಸ್ ವರೆಗೆ ನದಿಯ ಮಟ್ಟ ತಲುಪಿತ್ತು. ಜುಲೈ 23 ರಂದು 33686 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದು ಭದ್ರಾ ಜಲಾಶಯದಲ್ಲಿ 168.2 ಅಡಿ ನೀರಿನ ಮಟ್ಟ ಇದ್ದು ಇದು ಭರ್ತಿಯಾಗಲು ಇನ್ನೂ 19.8 ಅಡಿ ನೀರು ಬರಬೇಕಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚು ಮಳೆಯಾಗಬಹುದಾಗಿದ್ದು ಭದ್ರಾ ಜಲಾಶಯ ಭರ್ತಿಯಾದಲ್ಲಿ ನದಿಯಲ್ಲಿ ಹೆಚ್ಚಿನ ನೀರಿನ ಹರಿವು ಉಂಟಾಗಲಿದೆ. ಇದರಿಂದ ಕೆಲವು ಕಡೆ ಜನರಿಗೆ ಸಮಸ್ಯೆಯಾಗಲಿದೆ ಎಂದರು.

ಹೊನ್ನಾಳಿಯ ರಾಜ್‌ಘಾಟ್ ಹಾಗೂ ಬಂಬೂ ಬಜಾರ್ ಬಳಿ 28 ಕುಟುಂಬಗಳ 125 ಜನರಿಗೆ ಕಾಳಜಿ ಕೇಂದ್ರವನ್ನು ಅಂಬೇಡ್ಕರ್ ಭವನದಲ್ಲಿ ಪ್ರಾರಂಭಿಸಲು, ಹರಿಹರದ ಗಂಗಾನಗರ ಮತ್ತು ಬೆಂಕಿ ನಗರದಲ್ಲಿ 16 ಕುಟುಂಬಗಳ 64 ಜನರಿಗಾಗಿ ಎಪಿಎಂಸಿ ಭವನದಲ್ಲಿ ಮತ್ತು ತೀವ್ರ ಮಳೆಯಿಂದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ತೊಂದರೆಯಾಗುವ ಗ್ರಾಮಗಳ ಕುಟುಂಬಗಳನ್ನು ಗುರುತಿಸಿ ಮುಂಜಾಗ್ರತೆಯಾಗಿ ಎಲ್ಲೆಲ್ಲಿ ಕಾಳಜಿ ಕೇಂದ್ರಗಳನ್ನು ತಾತ್ಕಾಲಿಕವಾಗಿ ತೆರೆಯಬಹುದೆಂದು ಗುರುತು ಮಾಡಲಾಗಿದೆ ಎಂದರು.

**ತುರ್ತು ಪರಿಹಾರ:** ಮಳೆಯಿಂದ ಮನೆ ಹಾನಿಯಾದಲ್ಲಿ ಪೂರ್ಣ ಹಾನಿಯಾದರೆ ರೂ.1.20 ಲಕ್ಷ, ಹಾನಿ, ಭಾಗಶಃ ಹಾನಿಯಾದಲ್ಲಿ 6 ಸಾವಿರ ಮತ್ತು 4500 ಮತ್ತು ತುರ್ತು ಪರಿಹಾರವಾಗಿ ರೂ.2500 ಗಳ ಪರಿಹಾರ ನೀಡಲಾಗುತ್ತದೆ. ಇಲ್ಲಿಯವರೆಗೆ 91 ಮನೆಗಳಿಗೆ ಭಾಗಶಃ ಹಾಗೂ 3 ಮನೆಗಳಿಗೆ ಪೂರ್ಣ ಹಾನಿ ಪರಿಹಾರ ವಿತರಣೆ ಮಾಡಲಾಗಿದೆ. ಮಳೆಯಿಂದ ಬೆಳೆಗಳಿಗೆ ಹಾನಿಯಾದಲ್ಲಿ ತಕ್ಷಣವೇ ಕಂದಾಯ ಇಲಾಖೆ ಹಾಗೂ ಕೃಷಿ, ತೋಟಗಾರಿಕೆ ಇಲಾಖೆಗಳಿಂದ ಜಂಟಿ ಸಮೀಕ್ಷೆ ನಡೆಸಿ, ನಷ್ಟದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂದರು.

**ಶಾಲೆ, ಅಂಗನವಾಡಿ ಸೋರುವಿಕೆ ತಡೆಗೆ ಕ್ರಮ;** ಮಳೆಯಿಂದ ಶಾಲಾ ಮತ್ತು ಅಂಗನವಾಡಿ ಕೇಂದ್ರಗಳ ಛಾವಣಿ ಸೋರುತ್ತಿದ್ದಲ್ಲಿ, ತಾತ್ಕಾಲಿಕವಾಗಿ ಪ್ಲಾಸ್ಟಿಕ್ ಹೊದಿಕೆಯನ್ನು ಅಳವಡಿಸಲು ಸೂಚನೆ ನೀಡಲಾಗಿದೆ. ಕಟ್ಟಡಗಳು ಶಿಥಿಲವಾಗಿದ್ದಲ್ಲಿ ಮಳೆ ಬಂದಾಗ ತಾತ್ಕಾಲಿಕವಾಗಿ ಬೇರೆಡೆ ಸ್ಥಳಾಂತರ ಅಥವಾ ತಕ್ಷಣ ದುರಸ್ತಿಗೆ ಕ್ರಮ ವಹಿಸಲು ಸೂಚನೆ ನೀಡಲಾಗಿದೆ ಎಂದರು.

**ಆರೋಗ್ಯ, ನೈರ್ಮಲ್ಯಕ್ಕೆ ಸೂಚನೆ;** ಮಳೆಯಿಂದ ಹೊಸ ನೀರು ಬರಬಹುದು, ಇಂತಹ ಸಂದರ್ಭದಲ್ಲಿ ಶುದ್ದ ಕುಡಿಯುವ ನೀರು ಅಥವಾ ಕಾಯಿಸಿದ ನೀರನ್ನು ಮಾತ್ರ ಬಳಕೆ ಮಾಡಬೇಕು. ಮತ್ತು ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿದ್ದು ಮಳೆ ನೀರು ನಿಲ್ಲದಂತೆ ಎಚ್ಚರವಹಿಸಬೇಕು. ಆರೋಗ್ಯ ಇಲಾಖೆಯಿಂದ ಆಸ್ಪತ್ರೆಗಳಲ್ಲಿ ಔಷಧ ದಾಸ್ತಾನಿಟ್ಟು ಜನರಿಗೆ ಸಕಾಲದಲ್ಲಿ ಚಿಕಿತ್ಸೆ ನೀಡಲು ತಿಳಿಸಿ, ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳಿಂದ ಸ್ವಚ್ಚತೆ ಕಾಪಾಡಲು ಮತ್ತು ಜನರಿಗೆ ಜಾಗೃತಿ ಮೂಡಿಸಲು ತಿಳಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ತಹಶೀಲ್ದಾರ್ ಪಟ್ಟರಾಜೇಗೌಡ, ಉಪವಿಭಾಗಾಧಿಕಾರಿ ಅಭಿಷೇಕ್, ನ್ಯಾಮತಿ ತಹಶೀಲ್ದಾರ್ ಗೋವಿಂದಪ್ಪ, ಜಗಳೂರು ತಹಶೀಲ್ದಾರ್ ಸೈಯ್ಯದ್ ಖಾನ್, ಹೊನ್ನಾಳಿ ಇಒ ಹೆಚ್ ರಾಘವೇಂದ್ರ, ಗ್ರೇಡ್ 2 ತಹಶೀಲ್ದಾರ್ ಸುರೇಶ್ ನಾಯಕ್, ಉಪತಹಶೀಲ್ದಾರ್ ಚಂದ್ರಪ್ಪ, ಕೆಇಬಿ ಜಯಪ್ಪ ,ಡಿಎಚ್‌ಒ ಷಣ್ಮುಖಪ್ಪ, ಟಿಹೆಚ್‌ಒ ಗಿರೀಶ್, ಕೃಷಿ ಸಹಾಯಕ ನಿರ್ದೇಶಕಿ ಪ್ರತಿಮಾ, ತೋಟಗಾರಿಕಾ ಹಿರಿಯ ಸಹಾಯಕ ನಿರ್ದೇಶಕಿ ರೇಖಾ, ಸಿಡಿಪಿಒ ಜ್ಯೋತಿ ,ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಹೆಚ್‌ಎಲ್ ಉಮಾ, ಪುರಸಭೆ ಮುಖ್ಯ ಅಧಿಕಾರಿ ಲೀಲಾವತಿ, ಗ್ರಾಮೀಣ ಕುಡಿಯುವ ನೀರು ಇಲಾಖೆಯ ಎಡ್ಬ್ಲಿ ಸೋಮಲಾ ನಾಯ್ಕ್, ಪಿಡಿಒ ಕಣ್ಣಪ್ಪ, ಸಿಡಿಪಿಒ ನವೀನ್ ಕುಮಾರ್, ಬಿಸಿಎಂ ಇಲಾಖೆ ಮೃತ್ಯುಂಜಯ, ಆರ್ ಎಫ್ ಷಣ್ಮುಖ, ಕಿಶೋರ್ ನಾಯಕ್, ಜಿಲ್ಲಾ ಪಂಚಾಯತ್ ಎಡ್ಬ್ಲಿ ಮೋತಿಲಾಲ್, ಇಂಜಿನಿಯರ್ ಮಂಜುನಾಥ್ ಸೇರಿದಂತೆ ತಾಲ್ಲೂಕಿನ ಅಧಿಕಾರಿಗಳು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಇಡಿ ಅಧಿಕಾರಿಗಳ ಬಂಧಿಸಿ ಸಿಎಂ, ಸಚಿವರಿಂದ ಧರಣಿ

**(1ನೇ ಪುಟದಿಂದ)** ಎಂದು ಹೇಳಿದರು. ಕೇಂದ್ರದ ಕೈಗೊಂಬೆಯಾಗಿರುವ ಇ.ಡಿ. ಮತ್ತು ಸಿಬಿಐ ವಿರುದ್ಧ ನಾನು ಹೋರಾಟ ಮಾಡುತ್ತೇನೆ, ಬುದ್ಧಿ ಕಲಿಸುತ್ತೇನೆ ಎಂದು ಶಪಥ ಮಾಡಿದ ಬೆನ್ನಲ್ಲೇ ಮುಖ್ಯಮಂತ್ರಿ ರಾಷ್ಟ್ರದ ಗಮನ ಸೆಳೆಯಲು ಧರಣಿ ನಡೆಸಿದರು.

ಧರಣಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು, ಮಹರ್ಷಿ ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆ ಹಗರಣ ಕುರಿತ ಎಸ್‌ಐಟಿ ತನಿಖೆ ಮುಗಿದಿದೆ, ಇ.ಡಿ., ಸಿಬಿಐ ಏನೇ ಇರಲಿ ಕಾನೂನಿನ ಹೋರಾಟಕ್ಕೆ ಸಿದ್ಧ ಎಂದರು.

ರಾಜಕೀಯ ಸೇಡು, ದ್ವೇಷದ ನಡೆಯನ್ನು ಕಾಂಗ್ರೆಸ್ ಸರ್ಕಾರ ತೀವ್ರವಾಗಿ ಖಂಡಿಸುತ್ತದೆ, ಪ್ರಜಾಪ್ರಭುತ್ವಕ್ಕೆ ಮಾರಕವಾದ ನಡೆಯಿದು. ಕಾನೂನುಬಾಹಿರವಾಗಿ ತನಿಖೆ ಮಾಡುವಂತಿಲ್ಲ. ಕಾಂಗ್ರೆಸ್ ವರಿಷ್ಠರೊಂದಿಗೆ ಚರ್ಚಿಸಿದ್ದು ಇ.ಡಿ. ದುರುಪಯೋಗ ವಿಷಯವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಹೇಳಿದರು.

ಹಗರಣದಲ್ಲಿನ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಯಾರೇ ತಪ್ಪು ಮಾಡಿದ್ದರೂ ಮುಲಾಜಿಗೆ ಒಳಗಾಗುವುದಿಲ್ಲ, ಯಾರನ್ನೂ ರಕ್ಷಣೆ ಮಾಡುವುದಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆ ಕೊಟ್ಟೇ ಕೊಡುತ್ತೇವೆ. ಉಪ್ಪು ತಿಂದವರು ನೀರು ಕುಡಿಯಲೇಬೇಕು ಎಂದರು.

ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿಯೂ ಪ್ರಸ್ತಾಪಿಸಲಿದ್ದೇವೆ, ಸದನದ ಹೊರಗೆ ಹೋರಾಟ ಕುರಿತು ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಕುರಿತು ಮೂರು ತನಿಖಾ ಸಂಸ್ಥೆಗಳು ವಿಚಾರಣೆ ನಡೆಸುತ್ತಿವೆ. ಎಸ್.ಐ.ಟಿ.ಯನ್ನು ಮೇ 31ರಂದು ರಚಿಸಲಾಗಿದೆ, ಜೂನ್ 3ರಂದು ಬ್ಯಾಂಕ್ ವತಿಯಿಂದ ಸಿಬಿಐಗೆ ದೂರು ನೀಡಲಾಗಿದೆ. ಜಾರಿ ನಿರ್ದೇಶನಾಲಯ ಸ್ವಯಂ ಪ್ರೇರಣೆಯಿಂದ ತನಿಖೆ ಮಾಡುತ್ತಿದೆ.

ಒಂದೇ ಹಗರಣದಲ್ಲಿ ಮೂರು ತನಿಖಾ ಸಂಸ್ಥೆಗಳು ವಿಚಾರಣೆ ಮಾಡುತ್ತಿರುವುದು ವಿಶೇಷ. ಮೂರು ತನಿಖಾ ಸಂಸ್ಥೆಗಳು ಒಂದೇ ಪ್ರಕರಣದ ಬಗ್ಗೆ ತನಿಖೆ ಮಾಡುವುದು ಈವರೆಗೆ ನನ್ನ ಅನುಭವಕ್ಕೆ ಬಂದಿರಲಿಲ್ಲ ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ನಡೆದಿಲ್ಲ ಎಂಬುದಾಗಿ ನಾವು ಹೇಳಿಲ್ಲ. ವಿರೋಧ ಪಕ್ಷದವರು ಪದೇ ಪದೇ 187.33 ಕೋಟಿ ರೂ.ಗಳ ದುರುಪಯೋಗವಾಗಿದೆ ಎಂದು ಆರೋಪಿಸುತ್ತಿದ್ದಾರೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಿಂದ ತೆಲಂಗಾಣಕ್ಕೆ ಹೋಗಿರುವುದು ಕೇವಲ 89.63 ಕೋಟಿ ರೂ. ಮಾತ್ರ. ಎಸ್‌ಐಟಿ ರಚನೆ ನಂತರ ತ್ವರಿತ ತನಿಖೆ ನಡೆಸಲಾಗುತ್ತಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಈಗಾಗಲೇ 12 ಮಂದಿಯನ್ನು ಬಂಧಿಸಿದ್ದು, ಹಣ ಹಂಚಿಕೊಂಡಿದ್ದ ಮೊತ್ತದಲ್ಲಿ ಇದುವರೆಗೆ 34 ಕೋಟಿ ರೂ. ವಶಪಡಿಸಿಕೊಳ್ಳಲಾಗಿದೆ. ಫಸ್ಟ್ ಫೈನಾನ್ಸ್ ಕೋ ಆಪರೇಟಿವ್ ಬ್ಯಾಂಕ್, ರತ್ನಾಕರ ಬ್ಯಾಂಕ್ ಸೇರಿದಂತೆ ಒಟ್ಟು 85.25 ಕೋಟಿ ರೂ. ಹಿಂಪಡೆದು, ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಒಟ್ಟು ಅಕ್ರಮವಾಗಿರುವುದು 85.63 ಕೋಟಿ ರೂ. ಮಾತ್ರ. ಎಸ್‌ಐಟಿ ಶೇ.95ರಷ್ಟು ತನಿಖೆ ಪೂರ್ಣಗೊಳಿಸಿದೆ ಎಂದರು.

ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ, ಹೆಚ್ಚುವರಿ ನಿರ್ದೇಶಕ ಕಲ್ಲೇಶ್ ಹೇಳಿಕೆ ಕೊಟ್ಟಿದ್ದರೂ, ಮುಖ್ಯಮಂತ್ರಿ ಹಾಗೂ ಇತರೆ ಸಚಿವರ ಹೆಸರುಗಳನ್ನು ಬರೆದು ಕೊಡುವಂತೆ ಒತ್ತಾಯ ಮಾಡಲಾಗುತ್ತಿದೆ.

ಕಲ್ಲೇಶ್ ಅವರನ್ನು ಹೆದರಿಸಿ, ಬೆದರಿಸಿ, ಜೀವ ಭಯ ಉಂಟು ಮಾಡಿ ಅನಗತ್ಯವಾಗಿ ನನ್ನ ಹೆಸರು ಹೇಳುವಂತೆ ಜಾರಿ ನಿರ್ದೇನಾಲಯದ ತನಿಖಾಧಿಕಾರಿಗಳು ಬೆದರಿಸಿದ್ದಾರೆ. ಕಾನೂನಿನಡಿ ನನ್ನ ಮೇಲೆ ಆರೋಪ ಬರುವಂತೆ ಒತ್ತಾಯಿಸಿದ್ದಾರೆ. ಕಲ್ಲೇಶ್ ದೂರು ನೀಡಿ ಪ್ರಕರಣ ದಾಖಲಾಗಿದೆ. ದೂರಿನಲ್ಲಿ ಏನೇನು ನಡೆಯಿತು ಎಂಬುದನ್ನು ವಿವರಿಸಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದರು.

ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ವಾಮ ಮಾರ್ಗ ಅನುಸರಿಸುತ್ತಿದೆ, ಮುಖ್ಯಮಂತ್ರಿಯನ್ನು ಗುರಿಯಾಗಿಸಿಕೊಂಡು ನನ್ನ ಮತ್ತು ಸರ್ಕಾರದ ವರ್ಚಸ್ಸು ಹಾಳು ಮಾಡುವ ಯತ್ನ ನಡೆದಿದೆ. ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿರುದ್ಧ ಇದೆ ಎಂಬುದಾಗಿ ರಾಜ್ಯದ ಜನತೆ ಮುಂದೆ ಬಿಂಬಿಸಲು ಹೊರಟಿದ್ದಾರೆ. ಸರ್ಕಾರ ಎಂದಿಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ದುರ್ಬಲ ವರ್ಗ, ಬಡವರು, ರೈತರು, ಕಾರ್ಮಿಕರ ಪರವಾಗಿದೆ ಎಂದೂ ಅವರು ಹೇಳಿದರು. ಹೇಗಾದರೂ ಮಾಡಿ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇರಬಾರದೆಂಬ ಉದ್ದೇಶದಿಂದ ವಾಮ ಮಾರ್ಗ ಅನುಸರಿಸುತ್ತಿದ್ದಾರೆ. ಆರ್ಥಿಕ ಇಲಾಖೆಯಾಗಲೀ, ಮುಖ್ಯಮಂತ್ರಿಯಾಗಲೀ ಈ ಹಗರಣಕ್ಕೆ ಸಂಬಂಧಪಟ್ಟಿಲ್ಲ, ಹಗರಣ ನಡೆದಿರುವುದಕ್ಕೆ ತನಿಖೆ ಮಾಡಿಸುತ್ತಿದ್ದೇವೆ ಎಂದರು.

## ಇ.ಡಿ. ಅಧಿಕಾರಿಗಳ ವಿರುದ್ಧದ ಎಫ್.ಐ.ಆರ್.ಗೆ ಹೈಕೋರ್ಟ್ ತಡೆ

**(1ನೇ ಪುಟದಿಂದ)** ಹೈಕೋರ್ಟ್ ಮೊರೆ ಹೋಗಿದ್ದರು.

ಜಾರಿ ನಿರ್ದೇಶನಾಲಯದ ಪರವಾಗಿ ಹೈಕೋರ್ಟ್‌ನಲ್ಲಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ಅರವಿಂದ ಕಾಮತ್, ಅಧಿಕಾರಿಗಳು ನಮ್ಮ ಕರ್ತವ್ಯ ನಿರ್ವಹಿಸುತ್ತಿರುವಾಗ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ನಾಗಪ್ರಸನ್ನ, ಕರ್ತವ್ಯದಲ್ಲಿ ತೊಡಗಿರುವವರ ವಿರುದ್ಧ ಕಾನೂನು ದುರ್ಬಳಕೆಯಾಗುವ ಸಾಧ್ಯತೆ ಇದೆ ಹೇಳಿದರು. ಅಧಿಕಾರಿಗಳ ವಿರುದ್ಧದ ಎಫ್‌ಐಆರ್ ತಡೆಯಲು ಆದೇಶ ಹೊರಡಿಸಿದರು.

ಅಧಿಕಾರಿಗಳ ವಿರುದ್ಧ ಈ ರೀತಿಯ ಅವಕಾಶ ನೀಡುವುದರಿಂದ, ಅಧಿಕಾರಿಗಳು ಕರ್ತವ್ಯ ನಿರ್ವಹಿಸುವುದಕ್ಕೆ ಅಡ್ಡಿ ಉಂಟಾಗುತ್ತದೆ. ಒಂದು ರೀತಿ ಸಿನಿಮೀಯ ಪರಿಸ್ಥಿತಿ ಯನ್ನು ಸೃಷ್ಟಿಸಲಾಗಿದೆ. ಇದರಿಂದ ಹಲವಾರು ಸಮಸ್ಯೆಗಳಾಗ ಬಹುದು ಎಂದು ನ್ಯಾಯಮೂರ್ತಿ ಎಚ್ಚರಿಸಿದರು. ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಆಗಸ್ಟ್ 21ಕ್ಕೆ ನಿಗದಿಪಡಿಸಿದೆ.

## ಕರ್ನಾಟಕಕ್ಕೆ ಹೂರಣವಿಲ್ಲದ ಹೋಳಿಗೆ ನೀಡಿದ ಕೇಂದ್ರ : ಡಾ. ಪ್ರಭಾ

**(1ನೇ ಪುಟದಿಂದ)** ಸೃಷ್ಠಿ ಎನ್ನುತ್ತಿದ್ದ ಕೇಂದ್ರ ಸರ್ಕಾರ, ಈಗ ಕೇವಲ 0.75 ಕೋಟಿ ಉದ್ಯೋಗ ಸೃಷ್ಠಿ ಮಾಡುತ್ತೇವೆ ಎನ್ನುವ ಮೂಲಕ ಅಭಿವೃದ್ಧಿಯಂತೆ ಉದ್ಯೋಗ ಸೃಷ್ಠಿಯಲ್ಲೂ ಹಿನ್ನಡೆಯತ್ತ ಸಾಗುತ್ತಿದೆ. ಹೊಸದಾಗಿ 100 ನಗರಗಳಲ್ಲಿ ಕೈಗಾರಿಕಾ ಪಾರ್ಕ್‌ಗೆ ಉತ್ತೇಜನ ನೀಡುತ್ತೇವೆ ಎನ್ನುವ ಯೋಜನೆ ಈಗಾಗಲೇ ವಿಫಲವಾಗಿರುವ 100 ಸ್ಮಾರ್ಟ್ ಸಿಟಿ ಯೋಜನೆಯ ದಾರಿ ಹಿಡಿಯದಿರಲಿ ಎಂದವರು ಹೇಳಿದ್ದಾರೆ. ಕರ್ನಾಟಕದಲ್ಲಿರುವ ಕೆಲವು ರಾಜ್ಯ ಹೆದ್ದಾರಿಗಳನ್ನು ಉನ್ನತೀಕರಿಸಿ, ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವುದನ್ನು ಕೇಂದ್ರ ಸರ್ಕಾರ ಮರೆತಿದೆ.

ರಾಜ್ಯಗಳ ಜಿ.ಎಸ್.ಟಿ. ಪಾಲನ್ನು ಬೇಡಿಕೆಗೆ ಅನುಗುಣವಾಗಿ ನೀಡುವುದರ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸಿಲ್ಲ. ಶಿಕ್ಷಣ ಮತ್ತು ಆರೋಗ್ಯದತ್ತ ಗಮನ ಹರಿಸಿಲ್ಲ. ಮಕ್ಕಳ ಕಾಳಜಿ, ಗ್ರಾಮೀಣ ನಿರುದ್ಯೋಗ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಣದ ಬಗ್ಗೆ ನಿರ್ಲಕ್ಷ್ಯ ತೋರಲಾಗಿದೆ.

ಕೃಷಿ ವಲಯದ ಅನುದಾನವನ್ನು ಕಳೆದ 5 ವರ್ಷಗಳಲ್ಲಿ 4.97% ನಿಂದ 2.74%ಗೆ ಇಳಿಸಿರುವುದು ರೈತರ ಬಗ್ಗೆ ಎನ್.ಡಿ.ಎ. ಸರ್ಕಾರಕ್ಕೆ ಕಾಳಜಿ ಇಲ್ಲದಿರುವುದು ತೋರುತ್ತದೆ. ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಹೇಳಿದ್ದು ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ ಎಂದು ಡಾ.ಪ್ರಭಾ ಟೀಕಿಸಿದ್ದಾರೆ.

## ನೀಟ್ ಮರು ಪರೀಕ್ಷೆ ಅಗತ್ಯವಿಲ್ಲ : ಸುಪ್ರೀಂ ಕೋರ್ಟ್

**(1ನೇ ಪುಟದಿಂದ)** ಪರಿಣಾಮವಾಗಿದ್ದರೆ ಮಾತ್ರ ಪರೀಕ್ಷೆ ರದ್ದುಗೊಳಿಸಬಹುದು ಎಂದು ನ್ಯಾಯಾಲಯ ಹೇಳಿದೆ.

ಹಜಾರಿಬಾಗ್ ಹಾಗೂ ಪಾಟ್ನಾಗಳಲ್ಲಿ ಪತ್ರಿಕೆ ಸೋರಿಕೆಯಾಗಿದೆ ಎಂಬುದು ವಾಸ್ತವ. 155 ವಿದ್ಯಾರ್ಥಿಗಳು ಈ ಕೇಂದ್ರದಲ್ಲಿ ವಂಚನೆಯ ಲಾಭ ಪಡೆದಿದ್ದಾರೆ ಎಂಬುದು ತನಿಖೆಯಿಂದ ಕಂಡುಬಂದಿದೆ. ಈ ಕಳಂಕಿತ ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿ ಗುರುತಿಸಬಹುದು. ಹೀಗಾಗಿ ಮರು ಪರೀಕ್ಷೆಯೊಂದೇ ಆಯ್ಕೆ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಪ್ರತಿಕ್ರಿಯೆ ನೀಡಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಎರಡು ದಿನಗಳಲ್ಲಿ ವೈದ್ಯಕೀಯ ಪ್ರವೇಶ ಪರೀಕ್ಷೆಯ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸತ್ಯಕ್ಕೆ ಜಯವಾಗಿದೆ. ಪರೀಕ್ಷೆಯಲ್ಲಿ ದೊಡ್ಡಮಟ್ಟದ ಸೋರಿಕೆ ಆಗಿಲ್ಲ ಎಂದು ಸರ್ಕಾರ ಹೇಳುತ್ತಲೇ ಬಂದಿತ್ತು. ಸುಪ್ರೀಂ ಕೋರ್ಟ್ ಈ ನಿಲುವನ್ನು ಎತ್ತಿ ಹಿಡಿದಿದೆ ಎಂದು ಹೇಳಿದರು.

## ಫಾದರ್ ಅಂಥೋಣಿ ಪೀಟರ್ ನಿಧನ



ಹರಿಹರ, ಜು. 23 - ನಗರದ ಆರೋಗ್ಯ ಮಾತೆ ಚರ್ಚ್ ಫಾದರ್ ಆಗಿ ಕರ್ತವ್ಯ ನಿರ್ವಹಿಸಿ ಇತ್ತೀಚಿಗೆ ಶಿಕಾರಿಪುರ ನಗರದ ಚರ್ಚ್‌ಗೆ ವರ್ಗಾವಣೆ ಆಗಿದ್ದ ಫಾದರ್ ಅಂಥೋಣಿ ಪೀಟರ್ ಸವಳಂಗ ಹತ್ತಿರ ಚಿನ್ನಕಟ್ಟಿಯ ಬಳಿ ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದಾರೆ.

## ರಸ್ತೆ ದುರಸ್ತಿಗೆ ಕರವೇ - ಆಟೋ ಚಾಲಕರ ಪ್ರತಿಭಟನೆ



**ಹರಿಹರ**

ಹರಿಹರ, ಜು.23- ನಗರದ ಹೈಸ್ಕೂಲ್ ಬಡಾವಣೆ 15 ಹಾಗೂ 21ನೇ ವಾರ್ಡ್ ಮಧ್ಯದಲ್ಲಿ ಹಾದು ಹೋಗಿರುವ ರಾಜ ಕಾಲುವೆ ರಸ್ತೆ ದುರಸ್ತಿ, ಸೇತುವೆ ತಡೆಗೋಡೆ ನಿರ್ಮಾಣ, ಮತ್ತು ಚರಂಡಿ ದುರಸ್ತಿ ಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಮತ್ತು ಆಟೋ ಮಾಲೀಕರ ಮತ್ತು ಚಾಲಕರ ಸಂಘಟನೆ ವತಿಯಿಂದ ರಸ್ತೆಗೆ ಬೈಕ್, ಆಟೋ ಅಡ್ಡ ನಿಲ್ಲಿಸಿ ಇಂದು ಪ್ರತಿಭಟನೆ ನಡೆಸಲಾಯಿತು.


ಈ ವೇಳೆ ರಕ್ಷಣಾ ವೇದಿಕೆಯ ಮುಖಂಡರಾದ ರಮೇಶ್ ಮಾನೆ, ಪ್ರೀತಂ ಬಾಬು, ಆಟೋ ಚಾಲಕರ ಸಂಘದ ಗೌರವಾಧ್ಯಕ್ಷ ಸಿದ್ದಲಿಂಗ ಸ್ವಾಮಿ ಮಾತನಾಡಿ, ರಾಜ ಕಾಲುವೆ ರಸ್ತೆ ಸಂಪೂರ್ಣ ಹಾಳಾಗಿದೆ. ಅನೇಕ ಕಡೆಗಳಲ್ಲಿ ಗುಂಡಿಗಳು ಇದ್ದು, ಅಪಘಾತ ಸಂಭವಿಸುತ್ತಿವೆ. ಅಲ್ಲದೇ ರಾಜ ಕಾಲುವೆಯ ದೊಡ್ಡ ಚರಂಡಿಯಲ್ಲಿ ಕಸ ಕಟ್ಟಿಕೊಂಡು ನೀರು ಮುಂದಕ್ಕೆ ಸರಾಗವಾಗಿ ಹೋಗದೇ ಇರೋದರಿಂದ ಚರಂಡಿ ಗಬ್ಬೆದ್ದು ನಾರುತ್ತಿದೆ ಮತ್ತು ಸೊಳ್ಳೆಗಳು ದಿನದಿಂದ ದಿನಕ್ಕೆ ಹೆಚ್ಚಾಗಿ, ಇದರಿಂದ ಸಾಂಕ್ರಾಮಿಕ ರೋಗಗಳು ಉಲ್ಬಣಗೊಳ್ಳುತ್ತಿವೆ ಮತ್ತು ಸೇತುವೆ ಮೇಲೆ ಅರ್ಧಕ್ಕೆ ಮಾತ್ರ ತಡೆಗೋಡೆ ನಿರ್ಮಾಣ ಮಾಡಿರುವುದರಿಂದ ರಸ್ತೆಯ ಪಕ್ಕದಲ್ಲಿ ಓಡಾಡುವ ಸಾರ್ವಜನಿಕರು ಮತ್ತು ಸೇತುವೆ ಪಕ್ಕದಲ್ಲಿ ಅಂಗನವಾಡಿ ಕೇಂದ್ರ ಇರುವುದರಿಂದ ಮಕ್ಕಳು ಆಟ ಆಡುವ ಸಮಯದಲ್ಲಿ ಚರಂಡಿಗೆ ಬಿದ್ದರೆ ಭಾರೀ ಅನಾಹುತ ಸಂಭವಿಸುವ ಸಾಧ್ಯತೆ ಹೆಚ್ಚು ಇರುತ್ತದೆ ಎಂದು ದೂರಿದರು.

ಅಲ್ಲದೇ ಇಲ್ಲಿನ ರಸ್ತೆ ದುರಸ್ತಿ ಮತ್ತು ಸೇತುವೆ ತಡೆಗೋಡೆ ನಿರ್ಮಾಣ ಮಾಡಲಾಗಿದೆ ಎಂದು ಈ ಹಿಂದೆ ಮೂರು ಬಾರಿ ಬೋಗಸ್ ಬಿಲ್ ಪಾಸ್ ಮಾಡಲಾಗಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಬೆಂಗಳೂರಿನ ಲೋಕಾಯುಕ್ತ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಹೋಗಿದ್ದಾರೆ. ಈ ಬೋಗಸ್ ಬಿಲ್ ಪಡೆದಿರುವುದರ ಬಗ್ಗೆ ಕೂಡಲೇ ತನಿಖೆ ನಡೆಸಬೇಕು ಎಂದು ಅವರು ಆಗ್ರಹಿಸಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ರಸ್ತೆ ದುರಸ್ತಿ, ಸೇತುವೆ ನಿರ್ಮಾಣಕ್ಕೆ ಮೂರು ಬಾರಿ ಬೋಗಸ್ ಬಿಲ್ ಮಾಡಲಾಗಿದೆ ಎಂಬುದರ ದಾಖಲೆಗಳನ್ನು ಪರಿಶೀಲನೆ ನಡೆಸುವುದಾಗಿ ತಿಳಿಸಿದರು.

ಎಇಇ ತಿಪ್ಪೇಸ್ವಾಮಿ ಮಾತನಾಡಿದರು. ಈ ಸಂದರ್ಭದಲ್ಲಿ ಸಮಾಜ ಸೇವಕ ಸನಾವುಲಾ ಸಾಬ್, ಕಾಂಗ್ರೆಸ್ ಮುಖಂಡ ನಸ್ರುಲ್ಲಾ, ಚಂದ್ರಪ್ಪ ಮೇದಾರ್, ರಾಜು ಆಟೋ, ಅಲಿ ಅಕ್ಬರ್, ಸಿರಾಜ್, ರಮೇಶ್, ಗಂಗಾಧರ್ ಇತರರು ಹಾಜರಿದ್ದರು.

## ಬಿ. ಕಲಪನಹಳ್ಳಿ ಶರಣ ಬಸಪ್ಪಜ್ಜರ ಪುಣ್ಯಾರಾಧನೆ



ದಾವಣಗೆರೆ, ಜು. 23 - ತಾಲ್ಲೂಕಿನ ಬಿ. ಕಲಪನಹಳ್ಳಿಯಲ್ಲಿ ನಾಡಿದ್ದು ದಿನಾಂಕ 25ನೇ ಗುರುವಾರ ಶರಣ ಬಸಪ್ಪಜ್ಜರ 92ನೇ ಪುಣ್ಯಾರಾಧನೆ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಿಗ್ಗೆ 6.30ಕ್ಕೆ ವಚಾನಭಿಷೇಕ ಹಾಗೂ ಮಧಾಹ್ನ 12.30ರಿಂದ ಪ್ರಸಾದದ ವ್ಯವಸ್ಥೆ ಇರುತ್ತದೆ.

## ಈ ವರ್ಷವೂ ಜನಗಣತಿ ಅಸಾಧ್ಯ

**(1ನೇ ಪುಟದಿಂದ)** ಜನಗಣತಿಗಾಗಿ 8,754 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್.ಪಿ.ಆರ್) ರೂಪಿಸಲು 341 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜು ಮಾಡಲಾಗಿತ್ತು.

2020ರಲ್ಲಿ ನಡೆಯಬೇಕಿದ್ದ ಎನ್.ಪಿ.ಆರ್. ಅನ್ನು ಕೊರೊನಾ ಕಾರಣದಿಂದ ಮುಂದೂಡಲಾಗಿತ್ತು. ಜನಗಣತಿಯನ್ನೂ ಸಹ ತಡೆಯಲಾಗಿದ್ದು, ಹೊಸ ವೇಳಾಪಟ್ಟಿಯನ್ನು ಕೇಂದ್ರ ಸರ್ಕಾರ ಇದುವರೆಗೂ ಪ್ರಕಟಿಸಿಲ್ಲ.

ಲೋಕಸಭಾ ಚುನಾವಣೆ ನಡೆಯುವ ಕಾರಣ, 2024 ರಲ್ಲಿ ಜನಗಣತಿ ಸಾಧ್ಯವಾಗದು ಎಂದು ಅಧಿಕಾರಿಗಳು ಹೇಳಿದ್ದರು.

ಜನಗಣತಿ ಹಾಗೂ ಎನ್.ಪಿ.ಆರ್. ಕೈಗೊಳ್ಳಲು ಸರ್ಕಾರಕ್ಕೆ ಒಟ್ಟಾರೆ 12,000 ಕೋಟಿ ರೂ. ಅಗತ್ಯವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

### ಹಿರೇಹಾಲಿವಾಣ ಗೌಡ್ರು ರೇಣುಕಮ್ಮ ನಿಧನ



ಹರಿಹರ ತಾಲ್ಲೂಕು ಹಿರೇಹಾಲಿವಾಣ ವಾಸಿ ಗೌಡ್ರು ರೇಣುಕಮ್ಮ ಕೋಂ ಜಲಧರ ಇವರು ದಿ. 23.07.2024ರ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.07.2024ರ ಬುಧವಾರ ಬೆಳಿಗ್ಗೆ 10.30ಕ್ಕೆ ಹಿರೇಹಾಲಿವಾಣದಲ್ಲಿ ನೆರವೇರಿಸಲಾಗುವುದು.

## ಇಂಗಳಗೊಂದಿ : ನದಿಯಲ್ಲಿ ಬಿದ್ದು ಸಾವನ್ನಪ್ಪಿದ ಜಯಪ್ಪ ಕುಟುಂಬಕ್ಕೆ ನೆರವು

ಮಲೇಬೆನ್ನೂರು, ಜು.23- ಎಮ್ಮೆ ಮೈ ತೊಳೆಯುತ್ತಿರುವಾಗ ಯುವಕನೋರ್ವ ಕಾಲು ಜಾರಿ ಬಿದ್ದು ತುಂಗಭದ್ರಾ ನದಿಯಲ್ಲಿ ಸಾವನ್ನಪ್ಪಿದ ಘಟನೆ ಶನಿವಾರ ಇಂಗಳಗೊಂದಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶ್ರೀಮತಿ ವಿಮಲಮ್ಮನವರ ಮಗ ಜಯಪ್ಪ (35 ವರ್ಷ) ಮೃತಪಟ್ಟ ಯುವಕನಾಗಿದ್ದಾನೆ.

ದುಡಿಯುವ ಮಗನನ್ನು ಕಳೆದುಕೊಂಡು ಕಂಗಾಲಾಗಿರುವ ಮೃತ ಜಯಪ್ಪ ನವರ ತಾಯಿಗೆ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಸಾಂತ್ವನ ಹೇಳಿ ವೈಯಕ್ತಿಕ ನೆರವು ನೀಡಿದರು.



ಅಲ್ಲದೆ, ಸರ್ಕಾರದಿಂದಲೂ ಅಗತ್ಯ ನೆರವು ಕೊಡಿಸುವ ಭರವಸೆ ನೀಡಿದ್ದಾರೆ.

### ಚಿರಸ್ಮರಣೆ



**ಶ್ರೀಮತಿ ಮಠದ ಕೊಟ್ರಮ್ಮ ಹಾಲಯ್ಯ, ಬಸಾಪುರ**
(1913-2010)

*ನೀವು ಲಿಂಗೈಕ್ಯರಾಗಿ*
*ಹದಿನಾಲ್ಕು ವರ್ಷಗಳು ಕಳೆದವು,*
*ನೀವು ಕಟ್ಟಿಕೊಟ್ಟ ಸೂರಿನಡಿಯಲ್ಲಿ,*
*ನೀವು ಬೆಳಗಿಸಿಟ್ಟು*
*ಹೋದ ದೀಪದಡಿಯಲ್ಲಿ, ನೀವು ಕಟ್ಟಿಟ್ಟು ಹೋದ*
*ಬುತ್ತಿಯನ್ನುಣ್ಣುತ್ತಾ, ನಿಮ್ಮ ಸ್ಮರಣೆಯಲ್ಲಿರುವ...*

- ✦ ಶ್ರೀಮತಿ ಗುರುಸಿದ್ದಮ್ಮ ಶಿವಮೂರ್ತಯ್ಯ
- ✦ ಶ್ರೀಮತಿ ಅನ್ನಪೂರ್ಣ ವಾಮದೇವಯ್ಯ
- ✦ ಶ್ರೀಮತಿ ಕಮಲಮ್ಮ ಶ್ರೀ ಬಿ.ಎಂ. ಕೊಟ್ರಯ್ಯ
- ✦ ಶ್ರೀ ಬಾ.ಮ. ಬಸವರಾಜಯ್ಯ

ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಬಂಧು-ಬಾಂಧವರು.

## ಮಕ್ಕಳಿಲ್ಲದ ಕೊರಗಿನಿಂದ ದಂಪತಿ ಆತ್ಮಹತ್ಯೆ

ದಾವಣಗೆರೆ, ಜು.23- ಮಕ್ಕಳಿಲ್ಲದ ಕೊರಗಿನಿಂದ ದಂಪತಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಜಿಲ್ಲೆಯ ನ್ಯಾಮತಿ ತಾಲ್ಲೂಕು ಮಲ್ಲಿಗೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಭಟ್ಟೋವಿಳ್ ಷಣ್ಮುಖಪ್ಪ (65) ಹಾಗೂ ಇಂದ್ರಮ್ಮ (50) ಆತ್ಮಹತ್ಯೆಗೆ ಶರಣಾಗಿರುವ ದಂಪತಿ.

ದಂಪತಿಗೆ ಮದುವೆಯಾಗಿ 30 ವರ್ಷ ಕಳೆದಿದ್ದು, ಮಕ್ಕಳಾಗಿಲ್ಲವೆಂದು ಮಾನಸಿಕವಾಗಿ ಕುಗ್ಗಿದ್ದರು. ಅಷ್ಟೇ ಅಲ್ಲದೇ ಕೆಲ ದಿನಗಳ ಹಿಂದೆ ಷಣ್ಮುಖಪ್ಪ ಹಾಗೂ ಇಂದ್ರಮ್ಮ ಅನಾರೋಗ್ಯದಿಂದ ಬಳಲುತ್ತಿದ್ದರು. ತಮ್ಮ ಆರೈಕೆ ಮಾಡುವವರು ಯಾರೂ ಇಲ್ಲ ಎಂದು ಬೇಸರದಲ್ಲಿದ್ದರು ಎಂದು ತಿಳಿದುಬಂದಿದೆ.

ಆತ್ಮಹತ್ಯೆಗೆ ಯತ್ನಿಸಿ ತೀವ್ರ ಅಸ್ವಸ್ಥಗೊಂಡಿದ್ದ ದಂಪತಿಯನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸಾಗಿಸಲಾಗಿತ್ತು. ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಪತಿ ಷಣ್ಮುಖಪ್ಪ ಭಾನುವಾರ ಸಾವನ್ನಪ್ಪಿದರೆ, ಚಿಕಿತ್ಸೆ ಫಲಿಸದೇ ಸೋಮವಾರ ಬೆಳಗ್ಗೆ ಪತ್ನಿ ಸಾವನ್ನಪ್ಪಿದ್ದಾರೆ. ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೊಮಾರನಹಳ್ಳಿಯಲ್ಲಿ ಮಳೆಗೆ ಗೋಡೆ ಕುಸಿದು ಮನೆ ಕುಸಿತ

ಮಲೇಬೆನ್ನೂರು, ಜು.23- ಸತತ ಮಳೆಯಿಂದಾಗಿ ಕೊಮಾರನಹಳ್ಳಿ ತಾಂಡದ ಸೀತಾಬಾಯಿ ಈಶ್ವರನಾಯ್ಕ ಅವರ ಇಬ್ಬರು ಮಕ್ಕಳ ವಾಸದ ಮನೆಗಳು ಗೋಡೆ ಕುಸಿದು ಬಿದ್ದಿರುವ ಘಟನೆ ಮಂಗಳವಾರ ಬೆಳಗಿನ ಜಾವ ನಡೆದಿದೆ. ಈ ವೇಳೆ 2 ಮನೆಗಳಲ್ಲೂ ಒಟ್ಟು 6 ಜನ ಮಲಗಿದ್ದರು ಎನ್ನಲಾಗಿದೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವ ಜೀವ ಹಾನಿ ಆಗಿಲ್ಲ ಎಂದು ಸ್ಥಳಕ್ಕೆ ಭೇಟಿ ನೀಡಿ ಪರಿಶಿಲೀಸಿದ ಗ್ರಾಮಲೆಕ್ಕಾಧಿಕಾರಿ ಅಣ್ಣಪ್ಪ, ಗ್ರಾಮದ ಜಿ. ಮಂಜುನಾಥ್ ಪಟೇಲ್, ಮಡಿವಾಳರ ಬಸವರಾಜ್ ತಿಳಿಸಿದ್ದಾರೆ.

# ಶೀಘ್ರ ಕಾಡಾ ಸಭೆ : ಸಚಿವ ಎಸ್ಸೆಸ್ಸೆಂ ಭರವಸೆ

**(1ನೇ ಪುಟದಿಂದ)** ಬೇಡಿಕೆಗಳನ್ನಿಟ್ಟು ಹೆದ್ದಾರಿ ಬಂದ್ ಕರೆ ಕೊಟ್ಟಿದ್ದರು.

ಅಧಿವೇಶನ ನಡೆಯುತ್ತಿದ್ದು, ಸಚಿವರು ಸೇರಿದಂತೆ, ಜನಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗಿಯಾಗಿದ್ದಾರೆ. ಜಿಲ್ಲೆಯ ಹಿತದೃಷ್ಟಿಯಿಂದ ನಿಮ್ಮ ಬೇಡಿಕೆಗಳನ್ನು ಉಸ್ತುವಾರಿ ಸಚಿವರ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತಂದು ರೈತರ ಎಲ್ಲಾ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುವುದಾಗಿ ಜಿಲ್ಲಾಧಿಕಾರಿಯವರು ಭರವಸೆ ನೀಡಿದರು.

ಆದರೂ ಒಪ್ಪದ ಮುಖಂಡರು ಪಟ್ಟು ಹಿಡಿದಾಗ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ದೂರವಾಣಿಯಲ್ಲಿ ಸಮಾಲೋಚಿಸಿದಾಗ ಜುಲೈ 24 ರಂದು ಉಪಮುಖ್ಯಮಂತ್ರಿಗಳು ಎಲ್ಲಾ ನೀರಾವರಿ ನಿಗಮಗಳ ಅಧಿಕಾರಿಗಳು ಹಾಗೂ ಸಚಿವರು, ಶಾಸಕರೊಂದಿಗೆ ಸಭೆ ಕರೆದಿದ್ದು ಈ ಸಭೆಯಲ್ಲಿ ಭದ್ರಾ ಕಾಡಾ ಸಭೆ ಕರೆದು ಕಾಲುವೆಗಳಿಗೆ ನೀರು ಬಿಡಲು ದಿನಾಂಕ ನಿಗದಿ ಮಾಡಲಾಗುತ್ತದೆ. ಈ ಸಭೆಗೆ ದಾವಣಗೆರೆ ರೈತ ಮುಖಂಡರನ್ನು ಆಹ್ವಾನಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ ಎಂದು ರೈತ ಮುಖಂಡರ ಸಭೆಯಲ್ಲಿ ಜಿಲ್ಲಾಧಿಕಾರಿಯವರು ತಿಳಿಸಿದರು.

ಎರಡು ದಿನಗಳಲ್ಲಿ ನೀರು ಬಿಡಲು ತೀರ್ಮಾನಿಸಬೇಕು ಮತ್ತು ಭದ್ರಾ ಜಲಾಶಯದಲ್ಲಿನ ಸ್ಲೂಯಿಸ್ ದುರಸ್ತಿ ಮತ್ತು ಕ್ರಸ್ಟ್ ಗೇಟ್ ದುರಸ್ತಿ ಮತ್ತು ನಾಲಾ ದುರಸ್ತಿಗೆ ಅನುದಾನ ಬಿಡುಗಡೆ ಮಾಡಲು ಆಗಸ್ಟ್ 15 ವರೆಗೆ ಗಡುವು ಮತ್ತು ತುಂಗಾದಿಂದ ಭದ್ರಾಕ್ಕೆ 22.5 ಟಿಎಂಸಿ ಲಿಫ್ಟ್ ಮಾಡದೆ, ಭದ್ರಾ ಮೇಲ್ದಂಡೆ ಯೋಜನೆಗೆ ನೀರು ಹರಿಸಬಾರದೆಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ.ಸಂತೋಷ್, ನೀರಾವರಿ ನಿಗಮದ ಅಧೀಕ್ಷಕ ಇಂಜಿನಿಯರ್ ಸುಜಾತ, ಮಾಜಿ ಸಚಿವರಾದ ಎಸ್.ಎ.ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ರೈತ ಮುಖಂಡರಾದ ಮಾಡಾಳು ಮಲ್ಲಿಕಾರ್ಜುನ್, ಬಲ್ಲೂರು ರವಿಕುಮಾರ್, ಶಾಮನೂರು ಲಿಂಗರಾಜ್, ಕೋಳೇನಹಳ್ಳಿ ಸತೀಶ್ ಹಾಗೂ ಇನ್ನಿತರೆ ಮುಖಂಡರು, ಅಧಿಕಾರಿಗಳು ಉಪಸ್ಥಿತರಿದ್ದರು.

### ಹೆದ್ದಾರಿ ಬಂದ್ ತಾತ್ಕಾಲಿಕ ಮುಂದೂಡಿಕೆ: ಎಸ್‌ಎಆರ್

**(1ನೇ ಪುಟದಿಂದ)** ಮುಂದೂಡಲಾಗಿದೆ ಎಂದು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೇ ತಿಂಗಳು 25 ರೊಳಗಾಗಿ ಭದ್ರಾ ನಾಲೆಗಳಿಗೆ ನೀರು ಹರಿಸುವ ಬಗ್ಗೆ ಉನ್ನತ ಮಟ್ಟದ ಸಭೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಭದ್ರಾ ಜಲಾಶಯ ದುರಸ್ತಿಗೆ ಕೂಡಲೇ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಬೇಡಿಕೆಗಳು ಈಡೇರದಿದ್ದಲ್ಲಿ ವಾರದೊಳಗೆ ರಸ್ತೆ ತಡೆ ಸೇರಿದಂತೆ ವಿವಿಧ ರೀತಿಯ ಉಗ್ರ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾಧಿಕಾರಿಗಳು ಸಭೆ ಕರೆದು ನಮ್ಮೊಂದಿಗೆ ಸುದೀರ್ಘ ಚರ್ಚೆ ನಡೆಸಿ, ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರ ಹಿನ್ನೆಲೆಯಲ್ಲಿ ನಾಳಿನ ಹೆದ್ದಾರಿ ಬಂದ್ ಮುಂದೂಡಲಾಗಿದೆ ಎಂದು ಹೇಳಿದರು. ಸಭೆಯಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ವಕ್ತಾರ ಬಿ.ಎಂ. ಸತೀಶ್ ಕೊಳೇನಹಳ್ಳಿ, ಬಿಜೆಪಿ ಮುಖಂಡರಾದ ಮಲ್ಲಿಕಾರ್ಜುನ್ ಮಾಡಾಳು, ಚಂದ್ರಶೇಖರ್ ಪೂಜಾರ್ ಉಪಸ್ಥಿತರಿದ್ದರು.

# ಕೇಂದ್ರ ಸರ್ಕಾರದ ಮುಂಗಡ ಪತ್ರ : ಗಣ್ಯರ ಅಭಿಮತ

## ಯುವಕರ ಏಳ್ಗೆಗೆ ಆದ್ಯತೆ

ಕೊರೊನಾ ನಂತರ ಇಡೀ ವಿಶ್ವವೇ ಇನ್ನೂ ಆರ್ಥಿಕ ಚೇತರಿಕೆ ಕಾಣದ ಈ ದಿನಗಳಲ್ಲಿ, ಭಾರತವು ಆರ್ಥಿಕವಾಗಿ ಚೇತರಿಸಿಕೊಂಡು ವಿಶ್ವದಲ್ಲಿಯೇ ಅರ್ಥಿಕವಾಗಿ ಮುನ್ನುಗ್ಗುತ್ತಿರುವ ಏಕ ಮಾತ್ರ ದೇಶವಾಗಿದೆ.

ಈ ಬಜೆಟ್ ನಲ್ಲಿ ಮಾನ್ಯ ಅರ್ಥ ಸಚಿವರು, ಒಂದು ಕೋಟಿ ಯುವಕರಿಗೆ ಹೊಸ ಇಂಟರ್ನ್‌ಶಿಪ್ ಯೋಜನೆ ಮೂಲಕ, 12 ತಿಂಗಳು 6000 ರೂ ಶಿಷ್ಯ ವೇತನ ಸಹಿತ ಕೌಶಲ್ಯ ತರಬೇತಿ ನೀಡುವುದರ ಮೂಲಕ ಯುವಕರ ಏಳ್ಗೆಗೆ ಆದ್ಯತೆ ನೀಡಿದ್ದಾರೆ. ಮಹಿಳಾ ಸಬಲೀಕರಣಕ್ಕೆ 3 ಲಕ್ಷ ಕೋಟಿ ರೂಪಾಯಿ ನೀಡುವುದರ ಮೂಲಕ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಗೆ 2.66 ಲಕ್ಷ ಕೋಟಿ ರೂಪಾಯಿ ನೀಡುವುದರ ಮೂಲಕ ಗ್ರಾಮೀಣಾಭಿವೃದ್ಧಿ ಗೆ ಒತ್ತು ನೀಡಿದ್ದಾರೆ.

ಕೃಷಿ ವಲಯಕ್ಕೆ 1.52 ಲಕ್ಷ ಕೋಟಿ ರೂಪಾಯಿಗಳನ್ನು ಕೊಡುವುದರ ಮೂಲಕ ಕೃಷಿ ವಲಯಕ್ಕೆ ಉತ್ತೇಜನ ನೀಡಿದ್ದಾರೆ. ಮೂಲ ಸೌಕರ್ಯಕ್ಕೆ 11,11,111 ಲಕ್ಷ ರೂಪಾಯಿ ಮೀಸಲಿಡುವುದರ ಮೂಲಕ ಮೂಲಸೌಕರ್ಯ ವಲಯಕ್ಕೆ ಉತ್ತೇಜನ ನೀಡಿದ್ದಾರೆ.

ಸಣ್ಣ ಕೈಗಾರಿಕಾ ವಲಯಕ್ಕೆ 1.5 ಲಕ್ಷ ಕೋಟಿ ರೂಪಾಯಿ ಬಡ್ಡಿ ರಹಿತ ದೀರ್ಘಾವಧಿ ಸಾಲ ನೀಡುವುದರ ಮೂಲಕ, ಸಣ್ಣ ಕೈಗಾರಿಕೆ ವಲಯಕ್ಕೆ ಆದ್ಯತೆ ನೀಡಿದ್ದಾರೆ. ತೆರಿಗೆ ಭಾರವನ್ನು ಕಡಿಮೆ ಮಾಡುವುದರ ಮೂಲಕ ಬಡ, ಮಧ್ಯಮ, ಸಂಬಳದಾರರಿಗೂ ಸಹಾಯ ಮಾಡಿದ್ದಾರೆ. ಈ ಮೂಲಕ ವಿತ್ತ ಸಚಿವರು ಯುವಕ, ರೈತ, ಮಹಿಳೆ, ಬಡವರ ಮೂಲಕ ಸಮಾಜದ ಎಲ್ಲ ಜನಾಂಗ ಗಳ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ.



**- ರಾಜಶೇಖರ ನಾಗಪ್ಪ,**
ಜಿಲ್ಲಾಧ್ಯಕ್ಷರು, ಬಿಜೆಪಿ, ದಾವಣಗೆರೆ.

## ಸರ್ವತೋಮುಖ, ಸಂತುಲಿತ, ಸಮೃದ್ಧಿಯ ಬಜೆಟ್

ಜಗತ್ತಿನ ಬಲಾಢ್ಯ ರಾಷ್ಟ್ರಗಳು ಇಂದು ಆರ್ಥಿಕವಾಗಿ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿವೆ. ಇಂತಹ ಸಂದರ್ಭದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ವಿಶಿಷ್ಟವಾದ ಜನಸ್ನೇಹಿ ಆಯವ್ಯಯವನ್ನು ಮಂಡಿಸಿರುವುದು ಪ್ರಶಂಸನೀಯವಾಗಿದೆ.

ವಿದೇಶಿ ಬಂಡವಾಳ ಹೂಡಿಕೆದಾರರಿಗೆ ತೆರಿಗೆಯನ್ನು ತಗ್ಗಿಸಿರುವ ನಿರ್ಣಯದಿಂದ, ಹೆಚ್ಚು ಕೈಗಾರಿಗೆ ಸ್ಥಾಪನೆಯಾಗಿ ಉದ್ಯೋಗಾವಕಾಶಕ್ಕೆ ಉತ್ತೇಜನ ದೊರೆಯಲಿದೆ. ಸ್ವ ಉದ್ಯೋಗದ ಕಡೆಯೂ ಗಮನ ಹರಿಸಿ ಮುದ್ರಾ ಸಾಲವನ್ನು 20 ಲಕ್ಷದವರೆಗೂ ಹೆಚ್ಚಿಸಲಾಗಿದೆ.

1-4 ಕೋಟಿ ಯುವಕರಿಗೆ employment linked incentive scheme, ಅಡಿಯಲ್ಲಿ ತಿಂಗಳಿಗೆ 5000 ಶಿಷ್ಯವೇತನ ನೀಡುವ ಯೋಜನೆ. ಮಹಿಳಾ ಸಬಲೀಕರಣ ಮತ್ತು ಹೆಣ್ಣು ಮಕ್ಕಳಿಗೆ ಸಾಮಾಜಿಕ ವಾಗಿ ಶಕ್ತಿ ತುಂಬಲು 3 ಲಕ್ಷ ಕೋಟಿ ಬಜೆಟ್ ನಲ್ಲಿ ಮೀಸಲಿಡಲಾಗಿದೆ.

ಸ್ಟಾರ್ಟಪ್, ಹೊಸ ಉದ್ಯೋಗಗಳಿಗಂತೂ ಈ ಬಡ್ಜೆಟ್ ವರದಾನದಂತಿದೆ. ಇಷ್ಟು ದಿನ ಹೇರಲಾಗಿದ್ದ ಏಂಜಲ್ ಟ್ಯಾಕ್ಸ್ ಈಗ ಸಂಪೂರ್ಣ ರದ್ದಾಗಿದೆ. ಇದರಿಂದ ದೇಶದಲ್ಲಿ ಅಸಂಖ್ಯ ಉದ್ಯೋಗಗಳ ಸೃಷ್ಟಿಯಾಗಲಿವೆ.



**- ಪ್ರಸನ್ನ ಕುಮಾರ್,** ವಿರೋಧ ಪಕ್ಷದ ನಾಯಕರು, ಮಹಾನಗರ ಪಾಲಿಕೆ, ದಾವಣಗೆರೆ.

## ಬಿಹಾರ್ - ಆಂಧ್ರಪ್ರದೇಶಕ್ಕೆ ಮಾತ್ರ

2024-25ನೇ ಸಾಲಿಗೆ ರೂ.48 ಲಕ್ಷ ಕೋಟಿ ಮುಂಗಡ ಪತ್ರ ಮಂಡಿಸಿದ್ದು ಶ್ರೀ ಸಾಮಾನ್ಯನಿಗೆ ಆಶಾದಾಯಕವಾಗಿದ್ದು, ಆದಾಯ ತೆರಿಗೆಯಲ್ಲಿ ಹೊಸ ಮತ್ತು ಹಳೆಯ ತೆರಿಗೆ ಪದ್ಧತಿಯಲ್ಲಿ ಯಾವುದೇ ರೀತಿಯ ಮಾರ್ಪಾಡುಗಳನ್ನು ಮಾಡದೇ ಕೇವಲ ಸಂಬಳದಾರರಿಗೆ ಪ್ರಮಾಣಿತ ಕಡಿತದಲ್ಲಿ ರೂ.50000 ದಿಂದ ರೂ.65000 (ರೂ.15000/-) ಏರಿಸಿರುವುದು ಬಿಟ್ಟರೆ ಮಧ್ಯಮ ವರ್ಗದ ಮತ್ತು ಸಂಬಳದಾರರಿಗೆ ಅನುಕೂಲವಾಗಿರುವುದಿಲ್ಲ.

ರಕ್ಷಣಾ ಇಲಾಖೆಗೆ ಹೆಚ್ಚಿನ ಹಣ ಕ್ರೋಢೀಕರಿಸಿದ್ದು ಗಡಿ ಭಾಗದ ಸೈನಿಕರಿಗೆ ಆಶಾದಾಯಕವಾಗಿದೆ, ಅದರಲ್ಲಿ ಹೆಚ್ಚಿನ ರೀತಿಯ ಅನುಕೂಲತೆಗಳನ್ನು ರಕ್ಷಣಾ ಸೈನಿಕರಿಗೆ ಕೊಟ್ಟಿರುವುದು ಆಶಾದಾಯಕ. ಮೇಕ್-ಇನ್-ಇಂಡಿಯಾ ಕಳೆದ ವರ್ಷದಿಂದ ಹಣವನ್ನು ಕ್ರೋಢೀಕರಿಸಿ ಎಂಎಸ್‌ಎಂಇ ಅಡಿಯಲ್ಲಿ ದಾಖಲಾತಿಯ ಕೈಗಾರಿಕೋದ್ಯಮ ಕಾರ್ಯಗತವಾಗಿದ್ದು ಶುಭ ಸೂಚನೆಯಾಗಿದೆ.

ಜಿ.ಎಸ್.ಟಿ ಯಲ್ಲಿ 2017-18, 2018-19 ರ ಸಾಲಿಗೆ ಕ್ಷಮಾದಾನ ಯೋಜನೆ ಪ್ರಕಟಿಸದಿರುವುದು, ಜೂನ್ 220 ಜಿ.ಎಸ್.ಟಿ ಕೌನ್ಸಿಲ್ ಸಭೆಯಲ್ಲಿ ಕ್ಷಮಾದಾನ ಮಂಡಿಸಿದ್ದು, ಆದರೆ ಇದುವರೆಗೂ ಕಛೇರಿಗಳಿಗೆ ಕೌನ್ಸಿಲ್ ಸಭೆಯಲ್ಲಿ ಮಂಡಿಸಿದ ಸೂಚನಾ ಪತ್ರಗಳನ್ನು ಜಿ.ಎಸ್.ಟಿ ಕಛೇರಿಗಳಿಗೆ ತಲುಪಿಸದೇ ಇರುವುದು ನಿಜಕ್ಕೂ ಶೋಚನೀಯ, ಸೂಚನಾ ಪತ್ರಗಳನ್ನು ಜಿ.ಎಸ್.ಟಿ ಕಛೇರಿಗಳಿಗೆ ಕಳಿಸಿಕೊಟ್ಟರೆ ವ್ಯಾಪಾರಸ್ಥರು ಕೈಗಾರಿಕೊದ್ಯಮಿಗಳಿಗೆ ಸರಕು ಮತ್ತು ಸೇವಾ ತೆರಿಗೆ ಕಟ್ಟುವಲ್ಲಿ ಹೆಚ್ಚುವರಿ ಅನುಕೂಲ ಕೊಟ್ಟಂತಾಗುತ್ತದೆ.

ಒಟ್ಟು ವಿತ್ತಿಯ ಕೊರತೆ 4.11%, 2024-25ನೇ ಸಾಲಿಗೆ ಕೇಂದ್ರ ಸರ್ಕಾರದ ಮುಂಗಡ ಪತ್ರ ಆಶಾದಾಯಕ ಪತ್ರವಾಗಿರುತ್ತದೆ.



**- ಜಂಬಗಿ ರಾಧೇಶ್,** ವಲಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ.

## ವಲಯಗಳ ಪ್ರತಿನಿಧಿತ್ವ ಇಲ್ಲದ ಗೊಂದಲದ ಬಜೆಟ್

ವಿಕಸಿತ ಭಾರತದ ಕಲ್ಪನೆಯಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತರಾಮನ್ ಮಂಗಳವಾರ ಮಂಡಿಸಿದ ಕೇಂದ್ರ ಬಜೆಟ್ ಯಾವ ವಲಯವನ್ನು ಪ್ರತಿನಿಧಿಸುತ್ತಿದೆ ಎಂಬ ಸ್ಪಷ್ಟತೆಗಳಿಲ್ಲದೇ ಗೊಂದಲ ಮೂಡಿಸಿದೆ.

ಬಜೆಟ್ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ರಾಜ್ಯಗಳಿಗೆ ಏನು ಕೊಟ್ಟಿದ್ದಾರೆ ಎಂಬುದನ್ನು ನೋಡಬೇಡಿ, ದೇಶದ ಅಭಿವೃದ್ದಿ ಕಡೆ ಗಮನ ಹರಿಸಿ ಎಂಬ ಅರ್ಥದಲ್ಲಿ ಬಜೆಟ್ ಮಂಡಿಸಲಾಗಿದ್ದರೂ, ಬಿಹಾರ ಮತ್ತು ಆಂದ್ರ ಪ್ರದೇಶಕ್ಕೆ ನೀಡಿದ ಸಾವಿರಾರು ಕೋಟಿ ರುಪಾಯಿ ಅನುದಾನದ ಭರವಸೆ ಏನನ್ನು ಹೇಳುತ್ತದೆ ಎಂಬುದನ್ನು ಪ್ರಧಾನಿ ಮೋದಿ ಸ್ಪಷ್ಟಪಡಿಸಬೇಕು.

ಬಿಜೆಪಿ ಸರ್ಕಾರದ ಮಿತ್ರಪಕ್ಷಗಳೆಂಬ ಕಾರಣಕ್ಕೆ ಬಿಹಾರಕ್ಕೆ 25 ಸಾವಿರ ಕೋಟಿ ಹಾಗೂ ಆಂದ್ರಪ್ರದೇಶಕ್ಕೆ 15 ಸಾವಿರ ಕೋಟಿ ರುಪಾಯಿ ವೆಚ್ಚದ ಯೋಜನೆ ಘೋಷಿಸಲಾಗಿದೆ. ದೇಶದ ಇತರೆ ರಾಜ್ಯಗಳು ಏನು ಪಾಪ ಮಾಡಿದ್ದವು. ಕೃಷಿಗೆ 1.52 ಲಕ್ಷ ಕೋಟಿ ರೂ. ಅನುದಾನ ಕಾಯ್ದಿರಿಸಲಾಗಿದೆ ಎಂದು ಬಜೆಟ್ ಉಲ್ಲೇಖವಿದೆ. ಏನು ಮಾಡಲಾಗುತ್ತದೆ ಎಂಬ ಬಗ್ಗೆ ನಿಖರತೆ ಇಲ್ಲ.

ಆದಾಯ ತೆರಿಗೆಯಲ್ಲಿ 3 ರಿಂದ 7ಲಕ್ಷದವರೆಗೆ ಶೇ.5ರಷ್ಟು ತೆರಿಗೆ ಎಂಬ ಪ್ರಸ್ತಾಪ ಗೊಂದಲ ಮೂಡಿಸಿದೆ. ಕ್ಯಾನ್ಸರ್ ಔಷಧಕ್ಕೆ ರಿಯಾಯಿತಿ ತೋರಿರುವ ಕೇಂದ್ರ, ಮಧ ಮೇಹವನ್ನು ಗಂಭೀರವಾಗಿ ಪರಿಗಣಿಸದೇ ಇರುವುದು ವಿಷಾದ. ಭದ್ರಾ ಮೇಲ್ದಂಡೆಗೆ ಕಳೆದ ಬಜೆಟ್‌ನಲ್ಲಿ 5300 ಕೋಟಿ ರೂ. ಘೋಷಿಸಿ, ಇದುವರೆಗೂ ನಯಾ ಪೈಸೆ ಬಿಡುಗಡೆ ಮಾಡಿಲ್ಲ. ಹಾಗಾಗಿ ಬಜೆಟ್ ಘೋಷಣೆಗಳ ಬಗ್ಗೆ ಜನರಿಗೆ ನಂಬಿಕೆಗಳು ಕಡಿಮೆಯಾಗಿವೆ.




**- ಎಲ್.ಹೆಚ್.ಅರುಣ್‌ಕುಮಾರ್**
ಜಿಲ್ಲಾಧ್ಯಕ್ಷರು, ವಕೀಲರ ಸಂಘ, ದಾವಣಗೆರೆ.

# ಸಾಧನೆಗೆ ಬೇಕು ಪುಸ್ತಕ ಓದುವ ಹವ್ಯಾಸ

## ಹರಪನಹಳ್ಳಿ ಓದುಗ ಬಳಗದ ಉದ್ಘಾಟನಾ ಸಮಾರಂಭದಲ್ಲಿ ಡಾ.ಸಿದ್ದಲಿಂಗಮೂರ್ತಿ

ಹರಪನಹಳ್ಳಿ, ಜು.23- ವಿದ್ಯಾರ್ಥಿಗಳು ಪುಸ್ತಕ ಪ್ರೇಮಿಗಳಾಗಿ, ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಎಡಿಬಿ ಕಾಲೇಜಿನ ಪ್ರಾಂಶುಪಾಲ ಡಾ. ಸಿದ್ದಲಿಂಗಮೂರ್ತಿ ಹೇಳಿದರು.



ಪಟ್ಟಣದ ಎಡಿಬಿ ಮಹಾವಿದ್ಯಾಲಯದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ, ಕನ್ನಡ ಸಂಘ ಮತ್ತು ಇಂಗ್ಲಿಷ್ ಲಿಟರರಿ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಎಡಿಬಿ ಪುಸ್ತಕ ಓದುಗ ಬಳಗದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಶಸ್ವಿ ಅಥವಾ ಟಾಪರ್ ವಿದ್ಯಾರ್ಥಿಯಾಗಲು ಹಾರ್ಡ್ ವರ್ಕ್‌ಗಿಂತ ಸ್ಮಾರ್ಟ್ ವರ್ಕ್ ಮುಖ್ಯ. ಅಧ್ಯಯನದ ಬಗ್ಗೆ ನಿಖರತೆ ಹೊಂದಿರುವ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಬೇಗನೆ ಯಶಸ್ಸು ಕಾಣುತ್ತಾರೆ. ನೀವು ಸಹ ಟಾಪರ್ ವಿದ್ಯಾರ್ಥಿಯಾಗಲು ಬಯಸಿದರೆ, ಧೈರ್ಯ ಕಳೆದುಕೊಳ್ಳಬೇಡಿ. ಶಾಲೆಯಲ್ಲಿ ಉತ್ತಮ ಗ್ರೇಡ್, ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಿ. ಆ ಮೂಲಕ ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಅಧ್ಯಯನ ಹಾಗೂ ವೃತ್ತಿ ಜೀವನದಲ್ಲಿ ಯಶಸ್ಸು ಕಾಣಬಹುದು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ತಿಪ್ಪೇಸ್ವಾಮಿ ಅವರು 'ಬೆರಳ್‌ಗೆ ಕೊರಳ್ ' ಎಂಬ ವಿಷಯ ಕುರಿತು ಮಾತನಾಡಿ, ಏಕಲವ್ಯನು ಬಿಲ್ಲು ವಿದ್ಯೆ ಕಲಿಯುವ ಹಂಬಲದಿಂದ ದ್ರೋಣಾ ಚಾರ್ಯರ ಬಳಿಗೆ ಬರುತ್ತಾನೆ. ಆದರೆ ತಮ್ಮ ಮೆಚ್ಚಿನ ಶಿಷ್ಯ ಅರ್ಜುನನನ್ನು ಜಗತ್ತಿನ ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡುವ ಪಣ ತೊಟ್ಟಿದ್ದ ದ್ರೋಣರು, ಕ್ಷತ್ರಿಯರಲ್ಲದವರಿಗೆ ಹೇಳಿ ಕೊಡಲು ಇಚ್ಛಿಸದೆ, ಏಕಲವ್ಯನನ್ನು ಶಿಷ್ಯನಾಗಿ ಸ್ವೀಕರಿಸಲು ನಿರಾಕರಿಸುತ್ತಾರೆ. ನಿರಾಶನಾಗದ ಏಕಲವ್ಯನು, ದಿನವೂ ದೂರದಲ್ಲಿ ನಿಂತು ದ್ರೋಣಾಚಾರ್ಯರು ಕೌರವರಿಗೆ, ಪಾಂಡವರಿಗೆ ಹೇಳಿಕೊಡುತ್ತಿದ್ದ ವಿದ್ಯೆಯನ್ನು ಮನನ ಮಾಡಿಕೊಂಡು, ಕಾಡಿಗೆ ಮರಳಿ ದ್ರೋಣರ ಮಣ್ಣಿನ ಮೂರ್ತಿಯನ್ನು ಮಾಡಿ, ಅವರನ್ನೇ ತನ್ನ ಮಾನಸ ಗುರುವೆಂದು ಭಾವಿಸಿ ಬಿಲ್ಲು ವಿದ್ಯೆಯನ್ನು ಸ್ವತಃ ಸಾಧಿಸಿಕೊಳ್ಳುತ್ತಾನೆ.

ಅರ್ಜುನನು ಶ್ರೇಷ್ಟ ಬಿಲ್ವಿದ್ಯಾ ನಿಪುಣನಾಗ ಬೇಕೆಂಬ ಅತಿಯಾಸೆ ಹಾಗೂ ಅಸಹನೆಯ ಫಲವಾಗಿ ಗುರು ದ್ರೋಣನಿಗೆ ದುಂಬಾಲು ಬಿದ್ದು, ಏಕಲವ್ಯನ ಬೆರಳನ್ನು ಗುರು ಕಾಣಿಕೆಯಾಗಿ ಪಡೆಯುವ ವಸ್ತು ಈ ಕೃತಿಯಲ್ಲಿದೆ. ಗುರು-ಶಿಷ್ಯರ ಸಂಬಂಧದ ಬಗ್ಗೆ ಚೆನ್ನಾಗಿ ಮೂಡಿ ಬಂದಿದೆ ಎಂದರು.

ನಿವೃತ್ತ ಪ್ರಾಧ್ಯಾಪಕ ಜಿ. ಬಿ. ನಾಗನಗೌಡ ಮಾತನಾಡಿ, ವಿದ್ಯಾರ್ಥಿಗಳು ಪಠ್ಯವನ್ನು ಹೊರತುಪಡಿಸಿ ಕಥೆ, ಕಾದಂಬರಿ, ಕವನ ಸಂಕಲನ, ವಿಚಾರ ಸಾಹಿತ್ಯ ಹಾಗೂ ಜೀವನ ಚರಿತ್ರೆಯಂತಹ ಗ್ರಂಥಗಳನ್ನು ಓದಿಕೊಂಡಾಗ ಮಾತ್ರ ಜ್ಞಾನ ವೃದ್ಧಿಯಾಗಲಿಕ್ಕೆ ಸಾಧ್ಯ. ಡಾ ಎ. ಪಿ. ಜೆ. ಅಬ್ದುಲ್ ಕಲಾಂ ಅವರು ಒಬ್ಬ ಕಡಲತೀರದ ಪೇಪರ್ ಮಾರಾಟ ಮಾಡುವ ಹುಡುಗ, ಈ ದೇಶದ ಶ್ರೇಷ್ಠ ವಿಜ್ಞಾನಿಯಾಗಿ ಹಾಗೂ ಭಾರತದಂತಹ ದೊಡ್ಡ ಪ್ರಜಾಪ್ರಭುತ್ವ ದೇಶದ ರಾಷ್ಟ್ರಪತಿಯಾಗಿದ್ದು ಪುಸ್ತಕ ಓದಿನಿಂದ ಮಾತ್ರ ಎಂದರು.

ಇತಿಹಾಸ ವಿಭಾಗದ ಡಾ. ಹಾದಿಮನಿ ರಮೇಶ್ ಅವರು 'ಕಾಕನ ಕೋಟೆ' ಪುಸ್ತಕದ ಬಗ್ಗೆ, ಸಸ್ಯಶಾಸ್ತ್ರ ವಿಭಾಗದ ಡಾ. ಗೋವರ್ಧನ ಅವರು ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಪುಸ್ತಕದ ಬಗ್ಗೆ ಅಭಿಪ್ರಾಯ ಹಂಚಿಕೊಂಡರು.

ವಿದ್ಯಾರ್ಥಿಗಳಾದ ಹರೀಶ, ಚನ್ನವೀರ, ತಿಮ್ಮೇಶ್ ಮತ್ತು ಸಂಪ್ರೀತ ಅವರುಗಳು ತಮ್ಮ ಮೆಚ್ಚಿನ ಪುಸ್ತಕಗಳ ಬಗ್ಗೆ ವೇದಿಕೆಯ ಮೇಲೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಂಥಪಾಲಕ ಬಸಲಿಂಗಪ್ಪ ಕಲ್ಮನಿ, ದೈಹಿಕ ಶಿಕ್ಷಣ ನಿರ್ದೇಶಕ ನವಾಜ್ ಬಾಷಾ ಸಿ, ಅರ್ಥಶಾಸ್ತ ವಿಭಾಗದ ಮುಖ್ಯಸ್ಥ ಡಾ. ಅಣ್ಣೇಶ್ ಆರ್, ಶಿಕ್ಷಣಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸುವರ್ಣ ಆರುಂಡಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ದಯಾಮರಣ ಹೋರಾಟಗಾರ್ತಿ, ಹಿರಿಯ ಶಿಕ್ಷಕಿ ಕರಿಬಸಮ್ಮಗೆ ಸನ್ಮಾನ



ದಾವಣಗೆರೆ, ಜು. 23- ಗುರು ಪೂರ್ಣಿಮೆ ಪ್ರಯುಕ್ತ ದಯಾಮರಣ ಹೋರಾಟಗಾರ್ತಿ, ಹಿರಿಯ ಶಿಕ್ಷಕಿ ಶ್ರೀಮತಿ ಎ.ಹೆಚ್. ಕರಿಬಸಮ್ಮ ಅವರನ್ನು ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಅವರು ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಕರಿಬಸಮ್ಮ ಅವರು ನಗರದ ಹಳೆ ಮಾಧ್ಯಮಿಕ ಶಾಲೆಯಲ್ಲಿ ತಮಗೆ ಹಿಂದಿ ಶಿಕ್ಷಕರಾಗಿ ಶಿಕ್ಷಣ ನೀಡಿದ್ದನ್ನು ಶಿವಯೋಗಿಸ್ವಾಮಿ ಸ್ಮರಿಸಿದರು.

## ಸಂಶೋಧಕ ಕಲಬುರಗಿ ಹತ್ಯೆ ಪ್ರಕರಣ : ಇಬ್ಬರು ಆರೋಪಿಗಳಿಗೆ ಜಾಮೀನು

ಬೆಂಗಳೂರು, ಜು. 23 - ಸಂಶೋಧಕ ಎಂ.ಎಂ. ಕಲಬುರಗಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ವಾಸುದೇವ್ ಭಗವಾನ್ ಸೂರ್ಯವಂಶಿ ಹಾಗೂ ಅಮಿತ್ ಬದ್ದಿ ಅವರಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿದೆ.

ಕೊಲೆ ಪ್ರಕರಣದಲ್ಲಿ ಗುಂಡಿನ ದಾಳಿ ನಡೆಸಿದವರು ಬಳಸಿದ್ದ ವಾಹನವನ್ನು ಕದ್ದ ಆರೋಪ ಈ ಇಬ್ಬರ ಮೇಲಿದೆ. ಈ ಪ್ರಕರಣದ 138 ಸಾಕ್ಷಿಗಳ ಪೈಕಿ ಕೇವಲ 10 ಜನರ ಪರಿಶೀಲನೆ ಆಗಿದೆ ಎಂದು ನ್ಯಾಯಮೂರ್ತಿ ಎಂ.ಜಿ. ಉಮಾ ಹೇಳಿದ್ದಾರೆ.

ವಿಚಾರಣೆ ಪೂರ್ಣಗೊಳ್ಳುವ ಬಗ್ಗೆ ಪ್ರಾಸಿಕ್ಯೂಷನ್ ಯಾವುದೇ ನಿರ್ದಿಷ್ಟ ಕಾಲಮಿತಿ ತಿಳಿಸಿಲ್ಲ. ಕಳುವು ಹೊರತುಪಡಿಸಿದರೆ ಇವರು ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ಮೇಲ್ನೋಟಕ್ಕೆ ಕಂಡುಬರುವ ಸಾಕ್ಷಿಗಳಿಲ್ಲ ಎಂದು ನ್ಯಾಯಾಲಯ ಹೇಳಿದೆ.



# ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ

## ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಕಾಯ್ದೆಯ ಜಾರಿ (ಸರ್‌ಫೇಸಿಯಾ ಕಾಯ್ದೆ 2002) ಅಡಿಯಲ್ಲಿ ಮೊಹರು ಮಾಡಿದ ಟೆಂಡರ್ ಮೂಲಕ ಬ್ಯಾಂಕ್‌ಗೆ ವಿಧಿಸಲಾದ ಸ್ಥಿರ ಆಸ್ತಿಗಳ ಮಾರಾಟ

ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಈ ಕೆಳಕಂಡ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುವುದರಿಂದ ಈ ಕೆಳಗೆ ನಮೂದಿಸಿದ ಆಸ್ತಿಯನ್ನು ಸುರಕ್ಷಿತ ಸಾಲಗಾರರಿಗೆ (Secured Creditor) ಅಡಮಾನವಿಡಲಾಗಿದೆ ಎಂದು ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರನ ವಾರಸುದಾರರಿಗೆ ಸೂಚನೆಯನ್ನು ನೀಡಲಾಗಿದೆ. ಸೆಕ್ಷನ್ 13(4) ಅಡಿಯಲ್ಲಿ ಸಹಿ ಮಾಡಿದ ಸುರಕ್ಷಿತ ಸಾಲಗಾರರ ಅಧಿಕೃತ ಅಧಿಕಾರಿ (Authorised Office) ಬಾಕಿಗಳ ವಸೂಲಾತಿಗಾಗಿ ಈ ಕೆಳಗೆ ವಿವರಿಸಿದ ಆಸ್ತಿಯನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ (ಇನ್ನು ಮುಂದೆ ನಿಯಮಗಳೆಂದು ಉಲ್ಲೇಖಿಸಲಾಗಿದೆ) ನಿಯಮ ಸಂಖ್ಯೆ 8 ಮತ್ತು 9 ರ ಅಡಿಯಲ್ಲಿ 'ಎಲ್ಲಿ ಇದೆಯೋ ಹಾಗೆ' ಮತ್ತು 'ಹೇಗೆ ಇದೆಯೋ ಹಾಗೆ' ಮಾರಾಟ ಮಾಡಲಾಗುತ್ತಿದೆ.

**ಮೊಹರು ಮಾಡಿದ ಟೆಂಡರುಗಳ ಮೂಲಕ ಸ್ಥಿರ ಆಸ್ತಿಗಳ ಮಾರಾಟದ ವಿವರಗಳು**

| | | |
|---|---|---|
| 1 | ಸಾಲಗಾರನ ವಾರಸುದಾರರ ಹೆಸರು ಮತ್ತು ವಿಳಾಸ | **1. ಶ್ರೀಮತಿ ಕಮಲಮ್ಮ 2. ಶ್ರೀ ತಿಪ್ಪೇರುದ್ರ ಸ್ವಾಮಿ 3. ಶ್ರೀ ರವಿ 4. ಶ್ರೀಮತಿ ಭುವನೇಶ್ವರಿ 5. ಶ್ರೀಮತಿ ಓಂಕಾರೇಶ್ವರಿ ಇವರೆಲ್ಲಾ ಸಾಲಗಾರರಾದ ದಿ|| ಎನ್.ಬಿ. ರುದ್ರಮುನಿಯವರ ವಾರಸುದಾರರುಗಳು. ಇವರುಗಳ ವಾಸ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ದಾವಣಗೆರೆ- 577004.** |
| 2 | ದಿನಾಂಕ:19-07-2024 ರಂದು ಬಾಕಿ ಇರುವ ಒಟ್ಟು ಮೊತ್ತ | **ರೂ. 68,83,155=87 + ದಿನಾಂಕ 20-07-2024ರಿಂದ ಬಡ್ಡಿ + ಇತರೆ ಖರ್ಚು ಇದ್ದಲ್ಲಿ** |
| 3 | ಸ್ವಾಧೀನ ಸ್ವರೂಪ | **ಅಧಿಕೃತ ಅಧಿಕಾರಿಯ ಸ್ವಾಧೀನದಲ್ಲಿದೆ.** |
| 4 | ಮೊಹರು ಮಾಡಿದ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | **ದಿನಾಂಕ : 26-08-2024 ಸಮಯ : ಸಂಜೆ 5:00 ಘಂಟೆಗೆ** |
| 5 | ಮೀಸಲು ಬೆಲೆ | **ನಿವೇಶನ ಸಂಖ್ಯೆ.29 ರಿಂದ 32 ರವರೆಗೆ ಪ್ರತಿ ನಿವೇಶನಕ್ಕೆ ರೂ. 18,00,000/- ನಿವೇಶನ ಸಂಖ್ಯೆ 28 ರೂ. 14,76,000/- ನಿವೇಶನ ಸಂಖ್ಯೆ 53 ಮತ್ತು 54 ಪ್ರತಿ ನಿವೇಶನಕ್ಕೆ ರೂ. 16,20,000 ನಿವೇಶನ ಸಂಖ್ಯೆ 55 ರೂ. 11,00,000/- ನಿವೇಶನ ಸಂಖ್ಯೆ 56 ರೂ. 11,10,000/- ನಿವೇಶನ ಸಂಖ್ಯೆ 57 ರೂ. 13,70,000/-** |
| 6 | ಇ.ಎಂ.ಡಿ. ಮೊತ್ತ | **ರೂ.25,000/- ಪ್ರತಿ ಸೈಟ್‌ಗೆ** |
| 7 | ಹರಾಜಿನ ವಿಧ | **ಟೆಂಡರ್ ಕಮ್ ಆ್ಯಕ್ಷನ್** |
| 8 | ಬಿಡ್‌ನ ಕನಿಷ್ಠ ಹೆಚ್ಚಳ | **ರೂ. 5,000-00** |
| 9 | ಮೊಹರು ಮಾಡಿದ ಟೆಂಡರ್ ಲಕೋಟೆಗಳನ್ನು ತೆರೆಯಲು ಕೊನೆಯ ದಿನಾಂಕ ಮತ್ತು ಸಮಯ | **ದಿನಾಂಕ: 27.08.2024 ಬೆಳಿಗ್ಗೆ 11:00 ಘಂಟೆಗೆ** |
| 10 | ಹರಾಜು ನಡೆಯುವ ಸ್ಥಳ | **ಬ್ಯಾಂಕಿನ ಆಡಳಿತ ಕಛೇರಿ, #79/2, ಹಳೇ ಪಿ.ಬಿ. ರಸ್ತೆ, ದಾವಣಗೆರೆ-577002.** |
| 11 | ಭದ್ರತೆಯಾಗಿ ನೀಡಿರುವ ಭದ್ರತಾ ಆಸ್ತಿ | **ಆಸ್ತಿ ಸಂಖ್ಯೆ:1,** ಹರಿಹರ ಉಪನೋಂದಣಾಧಿಕಾರಿಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟು, ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹನಗವಾಡಿ ಗ್ರಾಮ ಪಂಚಾಯತ್ ಕಸಬಾ ಹೋಬಳಿಯಲ್ಲಿರುವ ಖಾಲಿ ನಿವೇಶನಗಳು ಇವುಗಳ ಖಾನೇಷುಮಾರಿ ನಂ.17, ಸೈಟ್ ನಂ.28 ರಿಂದ 32 ರವರೆಗೆ ಒಟ್ಟು 5 ನಿವೇಶನಗಳು ಇವುಗಳ ಪ್ರತಿ ನಿವೇಶನದ ಅಳತೆ 30 ಅಡಿ x 40 ಅಡಿಗಳು ಇವುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಇವುಗಳ ಒಟ್ಟು ಚೆಕ್ಕುಬಂದಿ ಪೂರ್ವಕ್ಕೆ: ಸೈಟ್ ನಂ.27, ಪಶ್ಚಿಮಕ್ಕೆ: ಸೈಟ್ ನಂ.33, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸೈಟ್ ನಂ.53.<br>**ಆಸ್ತಿ ಸಂಖ್ಯೆ:2,** ಹರಿಹರ ಉಪನೋಂದಣಾಧಿಕಾರಿಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟು, ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹನಗವಾಡಿ ಗ್ರಾಮ ಪಂಚಾಯತ್ ಕಸಬಾ ಹೋಬಳಿಯಲ್ಲಿರುವ ಖಾಲಿ ನಿವೇಶನಗಳು ಇದರ ಖಾನೇಷುಮಾರಿ ನಂ.17, ಸೈಟ್ ನಂ.53 ರಿಂದ 57 ರವರೆಗೆ ಒಟ್ಟು 5 ನಿವೇಶನಗಳು ಇವುಗಳ ಪ್ರತಿ ನಿವೇಶನದ ಅಳತೆ 30 ಅಡಿ x 40 ಅಡಿಗಳು ಇವುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಇವುಗಳ ಒಟ್ಟು ಚೆಕ್ಕುಬಂದಿ ಪೂರ್ವಕ್ಕೆ: ಸೈಟ್ ನಂ.58, ಪಶ್ಚಿಮಕ್ಕೆ: ಸೈಟ್ ನಂ.52, ಉತ್ತರಕ್ಕೆ: ಸೈಟ್ ನಂ.32, ದಕ್ಷಿಣಕ್ಕೆ: ರಸ್ತೆ, |
| 12 | ಆಧಾರ ಮಾಡಿದ ಆಸ್ತಿಯ ವೀಕ್ಷಣೆಯ ದಿನಾಂಕ ಮತ್ತು ಸಮಯ | ದಿನಾಂಕ :24-07-2024 ರಿಂದ 26-08-2024 ರವರೆಗೆ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ |
| 13 | ಬ್ಯಾಂಕ್‌ಗೆ ತಿಳಿದಿರುವಂತೆ ಆಸ್ತಿಯ ಮೇಲಿನ ಇತರೆ ಜವಾಬ್ದಾರಿಗಳು | ಇತರೆ ಜವಾಬ್ದಾರಿಗಳು ಬ್ಯಾಂಕಿನ ಗಮನಕ್ಕೆ ಬಂದಿರುವುದಿಲ್ಲ. |
| 14 | ಆಸ್ತಿಯ ವಿರುದ್ಧ ಮಂಡಿಸಲಾದ ಕ್ಲೈಮ್‌ಗಳು ಮತ್ತು ಸುರಕ್ಷಿತ ಸಾಲಗಾರನಿಗೆ (Secured Creditor) ತಿಳಿದಿರುವ ಯಾವುದೇ ಇತರೆ ಬಾಕಿಗಳು | ಬ್ಯಾಂಕಿನ ಉತ್ತಮ ಜ್ಞಾನಕ್ಕೆ ಯಾವುದೂ ತಿಳಿದಿರುವುದಿಲ್ಲ. |
| 15 | ಅಧಿಕೃತ ಅಧಿಕಾರಿಯು ಅಥವು ಮಾಡಿದ ಖಾಲಿ ನಿವೇಶನಗಳನ್ನು ಒಂದೊಂದಾಗಿ ಪ್ರತ್ಯೇಕವಾಗಿ ಹರಾಜು ಮಾಡುವುದರಿಂದ ಬಿಡ್‌ದಾರರು ಪ್ರತಿ ನಿವೇಶನಕ್ಕೆ ಪ್ರತ್ಯೇಕವಾಗಿ ಟೆಂಡರ್ ಫಾರಂಗಳನ್ನು ಸಲ್ಲಿಸಬೇಕು. | |
| 16 | ಟೆಂಡರ್ ಫಾರಂಗಳನ್ನು ಬ್ಯಾಂಕಿನ ಹರಿಹರ ಶಾಖೆಯಲ್ಲಿ ರೂ.100/- ಪಾವತಿಸಿ ಪಡೆಯಬಹುದಾಗಿದೆ. | |

**ಹೆಚ್ಚಿನ ವಿವರಗಳಿಗಾಗಿ ಮತ್ತು ಮಾರಾಟದ ನಿಯಮಗಳು ಮತ್ತು ಷರತ್ತುಗಳಿಗಾಗಿ ಬಿಡ್‌ದಾರರು ದಯವಿಟ್ಟು ಬ್ಯಾಂಕ್ ಕೆಲಸದ ದಿನಗಳು ಮತ್ತು ಸಮಯದಲ್ಲಿ ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಬಹುದು.**

### ನಿಯಮಗಳು ಮತ್ತು ನಿಬಂಧನೆಗಳು

(1) SARFAESI ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ ಅಧಿಕೃತ ಅಧಿಕಾರಿಯಿಂದ ಹರಾಜು ಮಾರಾಟವನ್ನು ನಡೆಸಲಾಗುತ್ತದೆ. (2) ಬಿಡ್ ಡಾಕ್ಯುಮೆಂಟ್ ಕೆಳಕಂಡ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ತಿಳಿಸಲಾದ ಕಾರ್ಯ ವಿಧಾನದ ಪ್ರಕಾರ ಹರಾಜನ್ನು ನಡೆಸಲಾಗುತ್ತದೆ. (3) ಸೂಕ್ತ ವಿವರಗಳೊಂದಿಗೆ ನಿಗದಿತ ನಮೂನೆಯಲ್ಲಿ ಮಾತ್ರ ಮೊಹರು ಮಾಡಿದ ಟೆಂಡರ್ ನಮೂನೆಯ ಮೂಲಕ ಬಿಡ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಅಧಿಕೃತ ಅಧಿಕಾರಿ ಶ್ರೀ ಎನ್. ತುಳಸೀನಾಥ್, ದೂರವಾಣಿ ಸಂಖ್ಯೆ 8970004100, ಶ್ರೀ ಕೆ.ಎಂ. ರುದ್ರಮುನಿ ದೂರವಾಣಿ ಸಂಖ್ಯೆ 9449370369, ಶ್ರೀ ಕೆ.ಎಂ. ನಟರಾಜ್ ದೂರವಾಣಿ ಸಂಖ್ಯೆ 7899681386, ಶ್ರೀ ಜಿ.ಹೆಚ್. ಸುರೇಶ್‌ಬಾಬು ಶಾಖಾ ವ್ಯವಸ್ಥಾಪಕರು, ಹರಿಹರ ದೂರವಾಣಿ ಸಂಖ್ಯೆ 9902557408 ಇವರುಗಳನ್ನು ಸಂಪರ್ಕಿಸಬಹುದಾಗಿದೆ. (4) ಮೊಹರು ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವಾಗ ಜೊತೆಗೆ ಇ.ಎಂ.ಡಿ. ಮೊತ್ತವನ್ನು Favouring: The Davangere-Harihar Urban Sahakara Bank Niyamitha, Davangere., Current A/c No. 04030380000016, IFSC Code. HDFC0000403, Bank: HDFC BANK LTD., DAVANAGERE ಇವರ ಹೆಸರಿಗೆ ಜಮಾ ಆಗುವಂತೆ DD/RTGS/NEFT ಮೂಲಕ ಜಮಾ ಮಾಡಬೇಕು. (5) ಉದ್ದೇಶಿತ ಬಿಡ್‌ದಾರರು ನೋಂದಾಯಿತ ಅಂಚೆ ಮೂಲಕ ಸಲ್ಲಿಸಿದ ಟೆಂಡರ್ ಫಾರ್ಮ್‌ನ ಲಕೋಟೆಯನ್ನು ಅಧಿಕೃತ ಅಧಿಕಾರಿ, ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ ನಂ.79/2, ಆಡಳಿತ ಕಛೇರಿ, ರಜತ ಮಹೋತ್ಸವ ಕಟ್ಟಡ, ಹಳೇ ಪಿ.ಬಿ. ರಸ್ತೆ, ದಾವಣಗೆರೆ-577002. ದಿನಾಂಕ:26.08.2024 ರಂದು ಅಥವಾ ಅದಕ್ಕಿಂತ ಮೊದಲು ಸಂಜೆ 5:00 ಗಂಟೆಗೆ ತಲುಪಿಸಬೇಕು. ಮೊಹರು ಮಾಡಿದ ಟೆಂಡರ್ ಕವರ್‌ನ ಮೇಲೆ 'ಹರಾಜು ಮೂಲಕ ಮಾರಾಟವಾಗುವ ಬಿಡ್‌ನಲ್ಲಿ ಭಾಗವಹಿಸುವ' **ಸಾಲದ ಖಾತೆದಾರರ ಹೆಸರು ಎನ್.ಬಿ. ರುದ್ರಮುನಿ** ಎಂದು ನಮೂದಿಸಬೇಕು. (6) ಮೊಹರು ಮಾಡಿದ ಟೆಂಡರ್ ಹರಾಜಿನಲ್ಲಿ ಭಾಗವಹಿಸಲು ಉದ್ದೇಶಿಸಿರುವ ಬಿಡ್‌ದಾರರು ಅಥವಾ ಅವರ ಅಧಿಕೃತ ಏಜೆಂಟರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. (7) ಮಾರಾಟವು SARFAESI ಕಾಯಿದೆ ಮತ್ತು ನಿಯಮಗಳಿಗೆ ಅನುಸಾರವಾಗಿ ನಡೆಸಲಾಗುತ್ತದೆ. (8) ಬಿಡ್‌ದಾರರು KYC ಮಾನದಂಡಗಳನ್ನು ಅನುಸರಿಸಲು ಮತ್ತು ಸ್ವಯಂ ದೃಢೀಕರಿಸಿದ KYC ದಾಖಲೆಗಳನ್ನು ಒದಗಿಸುವ ಅಗತ್ಯವಿದೆ. KYC ದಾಖಲೆಗಳ ನೈಜತೆಯ ಬಗ್ಗೆ ಬಿಡ್‌ದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. (9) ಟೆಂಡರ್ ಫಾರ್ಮ್ ಗಳನ್ನು ಸರಿಯಾಗಿ ಭರ್ತಿ ಮಾಡಿಲ್ಲದ ಅಥವಾ ಇ.ಎಂ.ಡಿ.ಯೊಂದಿಗೆ ಇಲ್ಲದ ಲಕೋಟೆಗಳನ್ನು ಅಥವಾ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದ ನಂತರ ಸ್ವೀಕರಿಸಿದ । ಲಕೋಟೆಗಳನ್ನು ಪರಿಗಣಿಸಲಾಗುವುದಿಲ್ಲ. (10) EMD ಯೊಂದಿಗೆ ಕ್ರಮಬದ್ಧವಾಗಿ ತುಂಬಿದ ಮತ್ತು KYC ಯೊಂದಿಗೆ ಮೀಸಲು ಬೆಲೆಗಿಂತಲೂ (Reserve Price) ಹೆಚ್ಚು ಮೊತ್ತಕ್ಕೆ ಬಿಡ್ ಮಾಡಿದ್ದರೆ, ಅಂತಹ ಬಿಡ್‌ದಾರರಿಗೆ ಟೆಂಡರ್ ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅಧಿಕೃತ ಅಧಿಕಾರಿಯವರು ಅನುಮತಿ ನೀಡುತ್ತಾರೆ. (11) ಅರ್ಹ ಬಿಡ್‌ದಾರರ ನಡುವೆ ಇಂಟರ್ ಸೆ ಬಿಡ್ಡಿಂಗ್ ಅರ್ಹ ಬಿಡ್‌ದಾರರು ಉಲ್ಲೇಖಿಸಿದ ಹೆಚ್ಚಿನ ಬಿಡ್‌ನಿಂದ ಪ್ರಾರಂಭವಾಗುತ್ತದೆ ಮತ್ತು ಬಿಡ್‌ದಾರರು ರೂ.5,000/- ರಷ್ಟು ಗುಣಾಕಾರಗಳಲ್ಲಿ ಬಿಡ್ ಮಾಡಬಹುದು. (12) ಯಾವುದೇ ಸಂದರ್ಭದಲ್ಲಿ ಆಸ್ತಿಯನ್ನು ಮೀಸಲು ಬೆಲೆಗಿಂತ ಕೆಳಗೆ ಮಾರಾಟ ಮಾಡಲಾಗುವುದಿಲ್ಲ. (13) ಸೆಕ್ಯೂರ್ಡ್ ಕ್ರೆಡಿಟರ್‌ನಿಂದ ಬಿಡ್‌ನ ಮೊತ್ತದ ಬಗ್ಗೆ ಒಪ್ಪಿಗೆ ಪಡೆದು, ಹೆಚ್ಚಿನ ಬಿಡ್‌ದಾರರಿಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದು. (14) ಟೆಂಡರ್ ಪ್ರಕ್ರಿಯೆಯ ಮೂಲಕ ಘೋಷಿಸಲಾದ ಯಶಸ್ವಿ ಬಿಡ್‌ದಾರರು ಮಾರಾಟದ ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಿದ ತಕ್ಷಣ ಇ.ಎಂ.ಡಿ. ಸೇರಿದಂತೆ ಖರೀದಿ ಮೊತ್ತದ ಶೇ.25 ರಷ್ಟು ಹಣವನ್ನು ಠೇವಣಿ ಮಾಡಬೇಕು. ಯಶಸ್ವಿ ಬಿಡ್‌ದಾರರಿಗೆ ತಾಂತ್ರಿಕ ಸಮಸ್ಯೆಗಳು, ಡೀಫಾಲ್ಟ್ ತಪ್ಪಿಸಲು ಬ್ಯಾಂಕ್‌ನ ವ್ಯವಹಾರದ ಸಮಯವನ್ನು ಗಮನಿಸಲು ಸಲಹೆ ನೀಡಲಾಗಿದೆ. (15) ಖರೀದಿ ಹಣದ ಬಾಕಿ ಮೊತ್ತವನ್ನು ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆಯ ಅಧಿಕೃತ ಅಧಿಕಾರಿಗೆ ಹರಾಜಿನ ದಿನಾಂಕದಿಂದ 15ನೇ ದಿನ ಅಥವಾ ಮೊದಲು ಅಥವಾ ಅಧಿಕೃತ ಅಧಿಕಾರಿಯು ಲಿಖಿತವಾಗಿ ಒಪ್ಪಿಗೆ ನೀಡಿದ ಹೆಚ್ಚುವರಿ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿ ಮಾಡಲು ತಪ್ಪಿದಲ್ಲಿ ಮಾರಾಟವು ರದ್ದಾದಂತೆ ತಿಳಿಯುವುದು. ಬಿಡ್‌ದಾರನು ಪಾವತಿ ಮಾಡಿದ ಇ.ಎಂ.ಡಿ. ಮೊತ್ತ ಮತ್ತು ಸಂಪೂರ್ಣ ಠೇವಣಿ ಮೊತ್ತವನ್ನು ಯಾವುದೇ ಸೂಚನೆ ನೀಡದೆ ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಆಸ್ತಿಯನ್ನು ಮರು ಮಾರಾಟ ಮಾಡಲಾಗುವುದು. ಯಶಸ್ವಿ ಬಿಡ್‌ದಾರರು ಬ್ಯಾಂಕು ಅಥವಾ ಅಧಿಕೃತ ಅಧಿಕಾರಿಯ ವಿರುದ್ಧ ಯಾವುದೇ ಹಕ್ಕು ಅಥವಾ ಪರಿಹಾರಕ್ಕೆ ಅರ್ಹರಾಗಿರುವುದಿಲ್ಲ. (16) ವಿಫಲ ಬಿಡ್‌ದಾರನ ಇ.ಎಂ.ಡಿ. ಯನ್ನು ಹರಾಜು ಮಾರಾಟ ಪ್ರಕ್ರಿಯೆಯ ಮುಕ್ತಾಯವಾದ ಮೇಲೆ ಬಡ್ಡಿಯಿಲ್ಲದೆ ಹಿಂತಿರುಗಿಸಲಾಗುತ್ತದೆ. (17) ಯಶಸ್ವಿ ಬಿಡ್‌ದಾರರು ಮಾರಾಟ ಪ್ರಮಾಣ ಪತ್ರ, ನೊಂದಣಿ ಶುಲ್ಕಗಳು, ಸರ್ಕಾರಕ್ಕೆ ಪಾವತಿಸಬೇಕಾದ ಎಲ್ಲಾ ಶಾಸನಬದ್ಧ ಬಾಕಿಗಳು, ತೆರಿಗೆಗಳು ಮತ್ತು ದರಗಳು ಮತ್ತು ಆಸ್ತಿಗಳಿಗೆ ಸಂಬಂಧಿಸಿದಂತೆ, ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಶುಲ್ಕಗಳನ್ನು ಭರಿಸಬೇಕು. (18) ಯಶಸ್ವಿ ಬಿಡ್ ಮೊತ್ತಕ್ಕೆ ಮಾರಾಟದ ಪರಿಗಣನೆಯಾಗಿ, ಸಂಪೂರ್ಣ ಯಶಸ್ವಿ ಬಿಡ್ ಮೊತ್ತವನ್ನು ಮತ್ತು ಇತರೆ ಯಾವುದೇ ಶುಲ್ಕಗಳು ಇದ್ದರೆ ಪಾವತಿಸಿದ ನಂತರ ಯಶಸ್ವಿ ಬಿಡ್‌ದಾರರ ಹೆಸರಿನಲ್ಲಿ ಮಾತ್ರ ಮಾರಾಟ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. (19) ಆಸ್ತಿಯನ್ನು 'ಎಲ್ಲಿ ಇದೆಯೋ ಹಾಗೆ' ಮತ್ತು 'ಹೇಗಿದೆಯೋ ಹಾಗೆ' ಯಾವುದಾದರೂ ಶಾಸನಬದ್ಧ ಬಾಕಿಗಳೂ ಇದ್ದರೆ ಅದಕ್ಕೆ ಒಳಪಟ್ಟು ಮಾರಾಟ ಮಾಡಲಾಗುವುದು. ಬ್ಯಾಂಕಿನ ಸಾಲದ ಹೊರತಾಗಿ ಇತರೆ ಯಾವುದಾದರೂ ಹಕ್ಕುಗಳು, ಋಣಗಳು, ಜವಾಬ್ದಾರಿಗಳು ಮತ್ತು ಶುಲ್ಕಗಳ ಬಗ್ಗೆ ಉದ್ದೇಶಿತ ಬಿಡ್‌ದಾರರೇ ಪ್ರತ್ಯೇಕವಾಗಿ ವಿಚಾರಿಸಿ, ದೃಢಪಡಿಸಿಕೊಳ್ಳಬೇಕು. ಹಾಗೂ ಆಸ್ತಿಯ ಮಾಲೀಕತ್ವದ ಬಗ್ಗೆ, ಗುಣಮಟ್ಟದ ಬಗ್ಗೆ ಮತ್ತು ಅಳತೆಯ ಬಗ್ಗೆ ದೃಢಪಡಿಸಿಕೊಂಡ ನಂತರವೇ ಬಿಡ್‌ನಲ್ಲಿ ಭಾಗವಹಿಸಬೇಕು. ಬಿಡ್ ನಂತರ ಮುಂದೆ ಬರುವ ಯಾವುದೇ ವ್ಯತ್ಯಾಸಗಳಿಗೆ ಮತ್ತು ಆಗುಹೋಗುಗಳಿಗೆ ಬಿಡ್‌ದಾರನೇ ವೈಯಕ್ತಿಕವಾಗಿ ಬಗೆಹರಿಸಿಕೊಳ್ಳಬೇಕು. (20) ಮಾರಾಟಕ್ಕೆ ಇಟ್ಟಿರುವ ಆಸ್ತಿ, ಆಸ್ತಿಯ ಮೇಲಿನ ಶುಲ್ಕಗಳು / ಹೊರೆಗಳು ಅಥವಾ ಇತರೆ ಯಾವುದೇ ವಿಷಯದ ಬಗ್ಗೆ ಯಾವುದೇ ರೀತಿಯ ಹಕ್ಕುಗಳನ್ನು ಬಿಡ್ / ಮಾರಾಟದ ದೃಢೀಕರಣದ ಸಲ್ಲಿಕೆ ನಂತರ ಪರಿಗಣಿಸಲಾಗುವುದಿಲ್ಲ. (21) ಅಧಿಕೃತ ಅಧಿಕಾರಿ / ಬ್ಯಾಂಕು ಮಾರಾಟದಲ್ಲಿರುವ ಆಸ್ತಿಗೆ ಸಂಬಂಧಿಸಿದಂತೆ, ಯಾವುದೇ ಶುಲ್ಕ ಹೊಣೆಗಾರಿಕೆ ಹೊರೆಗಳು ಆಸ್ತಿ ತೆರಿಗೆ ಬಾಕಿಗಳು, ವಿದ್ಯುತ್ ಬಾಕಿಗಳು, ಇತ್ಯಾದಿಗಳಿಗೆ ಅಥವಾ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಯಾರಿಗಾದರೂ ಇತರೆ ಬಾಕಿಗಳಿಗೆ ಜವಬ್ದಾರರಾಗಿರುವುದಿಲ್ಲ. (22) ಉದ್ದೇಶಿತ ಬಿಡ್‌ದಾರರು ಮಾರಾಟಕ್ಕೆ ಒಳಪಟ್ಟ ಆಸ್ತಿಯ ಮಾಲೀಕತ್ವದ ಪತ್ರದ ನಕಲು ಪ್ರತಿಗಳನ್ನು ವೀಕ್ಷಿಸಿ ಖಾತ್ರಿ ಪಡಿಸಿಕೊಳ್ಳಬಹುದಾಗಿದೆ. ಮುಂದೆ ಯಾವುದೇ ತರಹದ ಹಕ್ಕು ಮತ್ತು ತಂಟೆ ತಕರಾರುಗಳಿಗೆ ಬ್ಯಾಂಕು ಜವಾಬ್ದಾರರಾಗಿರುವುದಿಲ್ಲ. (23) ಅಧಿಕೃತ ಅಧಿಕಾರಿಯು ಯಾವುದೇ, ಬಿಡ್ ಅನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಅಥವಾ ಮಾರಾಟವನ್ನು ಮುಂದೂಡಲು / ರದ್ದುಗೊಳಿಸಲು ಅಥವಾ ಯಾವುದೇ ಸಮಯದಲ್ಲಿ ಈ ಮಾರಾಟದ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಮಾಲೀಕರು, ಬಿಡ್‌ದಾರರಿಗೆ ಮತ್ತು ಸಾರ್ವಜನಿಕರಿಗೆ ಯಾವುದೇ ಕಾರಣ ನೀಡದೆ, ಪೂರ್ವ ಸೂಚನೆಯಿಲ್ಲದೆ ಬದಲಾಯಿಸಲು / ತೆಗೆದು ಹಾಕಲು ಸಂಪೂರ್ಣ ಹಕ್ಕು ಮತ್ತು ವಿವೇಚನೆಯನ್ನು ಹೊಂದಿರುತ್ತಾರೆ. (24) ಹರಾಜು ಮಾರಾಟವು ಸುರಕ್ಷಿತ ಸಾಲಗಾರ / ಬ್ಯಾಂಕ್‌ನಿಂದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಸಾಲಗಾರನು ಮಾರಾಟದ ದಿನಾಂಕದ ಮೊದಲು ಬ್ಯಾಂಕ್‌ಗೆ ಪಾವತಿಸಬೇಕಾದ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿದರೆ, ಯಾವುದೇ ಮಾರಾಟವನ್ನು ನಡೆಸಲಾಗುವುದಿಲ್ಲ. ಯಶಸ್ವೀ ಬಿಡ್‌ದಾರರು ಈ ವಿಷಯದಲ್ಲಿ ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಮಾರಾಟ / ಹರಾಜಿನ ರದ್ದತಿಯು ಬ್ಯಾಂಕ್ / ಅಧಿಕೃತ ಅಧಿಕಾರಿಯ ವಿವೇಚನೆಗೆ ಒಳಪಟ್ಟಿರುತ್ತದೆ. (25) ಉದ್ದೇಶಿತ ಖರೀದಿದಾರರು ಮೇಲೆ ತಿಳಿಸಲಾದ ಸಮಯ ಮತ್ತು ದಿನಾಂಕದಂದು ಅವರ ವೆಚ್ಚದಲ್ಲಿ ಪೂರ್ವ ನೇಮಕಾತಿಯ ಒಪ್ಪಿಗೆಯನ್ನು ಪಡೆದು ಮಾರಾಟಕ್ಕೆ ಒಳಪಡಿಸಿದ ಆಸ್ತಿಯನ್ನು ಪರಿಶೀಲಿಸಬಹುದು. ಈ ಬಗ್ಗೆ ಶ್ರೀ ಎನ್. ತುಳಸೀನಾಥ್, ಅಧಿಕೃತ ಅಧಿಕಾರಿ ದೂರವಾಣಿ ಸಂಖ್ಯೆ:8970004100 ಇವರನ್ನು ಸಂಪರ್ಕಿಸಬಹುದು. (26) ಆಸ್ತಿಯ ವಿವರಣೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಸುರಕ್ಷಿತ ಸಾಲಗಾರನು (Secured Creditor) ಅತ್ಯುತ್ತಮ ಮಾಹಿತಿ ನೀಡಲಾಗಿದೆ ಮತ್ತು ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಸುರಕ್ಷಿತ ಸಾಲಗಾರನು ಜವಾಬ್ದಾರನಾಗಿರುವುದಿಲ್ಲ. (27) ಆಸ್ತಿಯ ಬಗ್ಗೆ ಮತ್ತು ಮಾರಾಟದ ಷರತ್ತುಗಳನ್ನು ಹಾಗೂ ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಬಿಡ್‌ದಾರರು ಬಿಡ್ ಪೂರ್ವದಲ್ಲಿಯೇ ತಿಳಿದುಕೊಂಡ ನಂತರ ಹರಾಜಿನ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು. ನಂತರ ಯಾವುದೇ ಸಮಸ್ಯೆಗಳು ಉಂಟಾದಲ್ಲಿ ಬಿಡ್‌ದಾರನೇ ಸ್ವತಃ ಬಗೆ ಹರಿಸಿಕೊಳ್ಳಬೇಕು. (28) ಈ ಮೇಲಿನ ಸಾಲದ ವಾರಸುದಾರರು ಈ ಮೇಲಿನ ದಿನಾಂಕದಂದು ಸಾಲದ ಬಾಕಿಗಳನ್ನು ಪೂರ್ಣವಾಗಿ ಮರುಪಾವತಿ ಮಾಡದಿದ್ದಲ್ಲಿ ಅವರುಗಳಿಗೆ ಇದು ಸೂಚನೆಯಾಗಿದೆ.

**ಸುರಕ್ಷತಾ ಆಸಕ್ತಿಯ (ಜಾರಿ) ನಿಯಮಗಳು 2002ರ ನಿಯಮ 6(2), 5(7), 9(1), ಅಡಿಯಲ್ಲಿ ಶಾಸನಬದ್ಧ 30 ದಿನಗಳ ಮಾರಾಟ ಸೂಚನೆ**

ಸಾಲಗಾರನ ವಾರಸುದಾರರುಗಳು ಹೊಣೆಗಾರಿಕೆಯನ್ನು ಪೂರ್ಣವಾಗಿ ವಿಸರ್ಜಿಸುವಂತೆ ಮತ್ತು ಈ ನೋಟೀಸ್‌ನ ದಿನಾಂಕದಿಂದ ಹದಿನೈದು ದಿನಗಳೊಳಗೆ ಅಪ್‌ಡೇಟ್ ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮೇಲೆ ತಿಳಿಸಿದ ಬಾಕಿಗಳನ್ನು ಪಾವತಿಸಲು ಸೂಚಿಸಲಾಗಿದೆ. ಅದು ವಿಫಲವಾದರೆ 'ಸುರಕ್ಷಿತ ಆಸ್ತಿ' (Secured Asset) ಮೇಲೆ ತಿಳಿಸಿದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮಾರಾಟ ಮಾಡಲಾಗುವುದು. ಒಂದು ವೇಳೆ ಆಂಗ್ಲ ಮತ್ತು ಕನ್ನಡ ಪತ್ರಿಕೆಯಲ್ಲಿನ ಮಾರಾಟದ ಪ್ರಕಟಣೆಯ ಪ್ರಕಟಣೆಗಳ ನಡುವೆ ವ್ಯತ್ಯಾಸವಿದ್ದಲ್ಲಿ, ಅಂತಹ ಸಂದರ್ಭದಲ್ಲಿ ಕನ್ನಡ ಪತ್ರಿಕೆಯು ಇಂಗ್ಲೀಷ್ ಪತ್ರಿಕೆಯನ್ನು ರದ್ದುಗೊಳಿಸುತ್ತದೆ ಮತ್ತು ಅದನ್ನು ಅಂತಿಮ ಪ್ರತಿ ಎಂದು ಪರಿಗಣಿಸಲಾಗುವುದು. ಹೀಗಾಗಿ ಅಸ್ಪಷ್ಟತೆಯನ್ನು ತೆಗೆದು ಹಾಕಲಾಗುತ್ತದೆ.

**ಸ್ಥಳ: ದಾವಣಗೆರೆ**
**ದಿನಾಂಕ :24-07-2024**

**ಅಧಿಕೃತ ಅಧಿಕಾರಿ**
**ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ**

# ತೆರಿಗೆ ವಿನಾಯಿತಿ, ಉದ್ಯೋಗ ಸೃಷ್ಟಿ, ಮೂಲ ಸೌಲಭ್ಯ

**(1ನೇ ಪುಟದಿಂದ)** ಸಿಲುಕಿದೆ. ಆದರೆ ಭಾರತ ಅದಕ್ಕೆ ಅಪವಾದವಾಗಿದೆ. ಭಾರತದ ಆರ್ಥಿಕತೆ ಈಗ ಪ್ರಗತಿಯಲ್ಲಿದ್ದು, ಈ ಪ್ರಗತಿ ಮುಂದುವರಿಯಲಿದೆ ಎಂದು ಬಜೆಟ್ ಮಂಡಿಸುವಾಗ ಸೀತಾರಾಮನ್ ಹೇಳಿದ್ದಾರೆ.

ಬಜೆಟ್‌ನಲ್ಲಿ ಉದ್ಯೋಗ, ಕೌಶಲ್ಯ, ಸಣ್ಣ ಉದ್ಯಮ ಹಾಗೂ ಮಧ್ಯಮ ವರ್ಗಗಳಿಗೆ ವಿಶೇಷ ಆದ್ಯತೆ ನೀಡಲಾಗಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ.

4.1 ಕೋಟಿ ಯುವಕರಿಗೆ ಉದ್ಯೋಗ, ಕೌಶಲ್ಯ ಹಾಗೂ ಅವಕಾಶಗಳನ್ನು ಒದಗಿಸುವ ಐದು ವರ್ಷಗಳ ಯೋಜನೆಗೆ 2 ಲಕ್ಷ ಕೋಟಿ ರೂ ಒದಗಿಸಲಾಗಿದೆ. ಶಿಕ್ಷಣ, ಉದ್ಯೋಗ ಹಾಗೂ ಕೌಶಲ್ಯ ಯೋಜನೆಗಳಿಗೆ 1.48 ಲಕ್ಷ ಕೋಟಿ ರೂ. ನೀಡಲಾಗಿದೆ ಸೀತಾರಾಮನ್ ತಿಳಿಸಿದರು.

ಬಿಹಾರದ ಎಕ್ಸ್‌ಪ್ರೆಸ್ ವೇ, ವಿದ್ಯುತ್ ಘಟಕ, ಪಾರಂಪರಿಕ ಕಾರಿಡಾರ್ ಹಾಗೂ ಹೊಸ ವಿಮಾನ ನಿಲ್ದಾಣಗಳಿಗಾಗಿ 60,000 ಕೋಟಿ ರೂ. ನೀಡುವುದಾಗಿ ಸೀತಾರಾಮನ್ ಪ್ರಕಟಿಸಿದ್ದಾರೆ. ಬಿಹಾರದ ಮುಖ್ಯಮಂತ್ರಿ ಹಾಗೂ ಜೆಡಿಯು ನಾಯಕ ನಿತೀಶ್ ಕುಮಾರ್ ಅವರ ಬೆಂಬಲ ಕೇಂದ್ರ ಸರ್ಕಾರಕ್ಕೆ ಮಹತ್ವದ್ದಾಗಿದೆ. ಅಲ್ಲದೆ ಮುಂದಿನ ವರ್ಷ ಬಿಹಾರ ವಿಧಾನಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ, ಬಜೆಟ್ ಅನುದಾನ ಗಮನಾರ್ಹವಾಗಿದೆ. ಅದೇ ರೀತಿ ಆಂಧ್ರಪ್ರದೇಶಕ್ಕೆ ಹಲವು ಯೋಜನೆಗಳ ಮೂಲಕ 15,000 ಕೋಟಿ ರೂಪಾಯಿ ಒದಗಿಸಲಾಗಿದೆ. ಆಂಧ್ರಪ್ರದೇಶದ ಆಡಳಿತಾರೂಢ ಟಿಡಿಪಿ ಸಹ ಕೇಂದ್ರ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡುತ್ತಿದೆ.

ಮಧ್ಯಮ ವರ್ಗಕ್ಕೆ ಆದಾಯ ತೆರಿಗೆಯಲ್ಲಿ ವಿನಾಯಿತಿ ನೀಡಲಾಗಿದೆ. ತೆರಿಗೆ ನಿಗದಿಗಾಗಿ ಪರಿಗಣಿಸುವ ವಾರ್ಷಿಕ ಆದಾಯಕ್ಕೆ 75,000 ಡಿಡಕ್ಷನ್ ಪ್ರಕಟಿಸಲಾಗಿದೆ. ಇದು ಕಳೆದ ಬಾರಿಗೆ ಹೋಲಿಸಿದರೆ ಶೇಕಡ 50 ರಷ್ಟು ಹೆಚ್ಚಾಗಿದೆ. ಈ ಕ್ರಮದಿಂದಾಗಿ ತೆರಿಗೆದಾರರಿಗೆ ವರ್ಷಕ್ಕೆ 17,500 ರೂ.ಗಳ ವರೆಗೆ ಉಳಿತಾಯವಾಗಲಿದೆ.

ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ ಸಲುವಾಗಿ ಬಜೆಟ್‌ನಲ್ಲಿ ಕಂಪನಿಗಳಿಗೆ ನೆರವು ನೀಡುವ ಯೋಜನೆಗಳನ್ನು ಪ್ರಕಟಿಸಲಾಗಿದೆ. ಮೊದಲ ಬಾರಿಗೆ ಉದ್ಯೋಗಿಯಾದವರಿಗೆ ಒಂದು ತಿಂಗಳ ವೇತನವನ್ನು ನೀಡಲಾಗುವುದು. ನೇಮಕವಾದ ಮೊದಲ ನಾಲ್ಕು ವರ್ಷಗಳಿಗೆ ನಿವೃತ್ತಿ ನಿಧಿಯಲ್ಲಿ ಉದ್ಯೋಗಿ ಹಾಗೂ ಉದ್ಯೋಗದಾತ ಇಬ್ಬರಿಗೂ ನೆರವು ಸಿಗಲಿದೆ. ಇ.ಪಿ.ಎಫ್.ಒ. ದೇಣಿಗೆಯಲ್ಲಿ ಎರಡು ವರ್ಷಗಳಿಗೆ 3 ಸಾವಿರ ರೂ.ಗಳವರೆಗೆ ಮರು ಪಾವತಿ ಮಾಡಲಾಗುವುದು.

ಕೌಶಲ್ಯವೃದ್ಧಿಗೆ ಇಂಟರ್ನ್‌ಶಿಪ್ ಹಾಗೂ ಉನ್ನತ ಶಿಕ್ಷಣಕ್ಕೆ ಸಬ್ಸಿಡಿ ಸಾಲದ ಯೋಜನೆಗಳನ್ನು ಪ್ರಕಟಿಸಲಾಗಿದೆ. ಭಾರತದಲ್ಲಿ ನಗರ ಪ್ರದೇಶಗಳಲ್ಲಿ ನಿರುದ್ಯೋಗ ದರ ಶೇ. 6.7 ರಷ್ಟು ಇದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಆದರೆ ನಿರುದ್ಯೋಗ ದರ ಇನ್ನೂ ಹೆಚ್ಚಾಗಿದೆ ಎಂದು ಖಾಸಗಿ ಅಧ್ಯಯನಗಳು ತಿಳಿಸಿವೆ.

2024 - 25 ರ ಸಾಲಿನಲ್ಲಿ ವಿತ್ತೀಯ ಕೊರತೆ ಶೇ. 4.9 ರಷ್ಟಿರಲಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಕಳೆದ ಫೆಬ್ರವರಿಯಲ್ಲಿ ಮಂಡಿಸಲಾಗಿದ್ದ ಹಂಗಾಮಿ ಬಜೆಟ್‌ನಲ್ಲಿ ವಿತ್ತೀಯ ಕೊರತೆ ಶೇ. 5.1 ರಷ್ಟು ಇರಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ ತೆರಿಗೆ ಸಂಗ್ರಹ ಹಾಗೂ ರಿಸರ್ವ್ ಬ್ಯಾಂಕ್‌ನಿಂದ ಹೆಚ್ಚು ಡಿವಿಡೆಂಡ್ ದೊರೆತ ಕಾರಣ ವಿತ್ತೀಯ ಕೊರತೆ ಅಂದಾಜು ತಗ್ಗಿಸಲಾಗಿದೆ. ಮಾರುಕಟ್ಟೆಯಿಂದ ಪಡೆಯುವ ಒಟ್ಟು ಸಾಲವನ್ನು ಸಹ 14.01 ಲಕ್ಷ ಕೋಟಿ ರೂ.ಗಳಿಗೆ ಇಳಿಸಲಾಗಿದೆ.

## ಬಜೆಟ್ ಮುಖ್ಯಾಂಶಗಳು

(1ನೇ ಪುಟದಿಂದ) ಇಳಿಕೆ

ಆದಾಯ ತೆರಿಗೆ ವ್ಯತ್ಯಾಸ 50 ಲಕ್ಷ ರೂ.ಗಳಿಗಿಂತ ಹೆಚ್ಚಿದ್ದಲ್ಲಿ ಮಾತ್ರ ಮೂರರಿಂದ ಐದು ವರ್ಷಗಳ ನಡುವೆ ಆದಾಯ ತೆರಿಗೆ ಅಂದಾಜು ಮರುಪರಿಶೀಲನೆ

ಆರು ತಿಂಗಳಲ್ಲಿ ಆದಾಯ ತೆರಿಗೆ ಕಾಯ್ದೆಯ ಸಮಗ್ರ ಮರುಪರಿಶೀಲನೆ

ಜಿಎಸ್‌ಟಿ ಸರಳೀಕರಣ ಹಾಗೂ ಉಳಿದ ವಲಯಗಳಿಗೆ ವಿಸ್ತರಣೆ

ಪ್ರಸಕ್ತ ಸಾಲಿನಲ್ಲಿ ವಿತ್ತೀಯ ಕೊರತೆ ಶೇ. 4.9, ಮುಂದಿನ ವರ್ಷ ಶೇ. 4.5 ರ ಗುರಿ

ಕೃಷಿ ಹಾಗೂ ಸಂಬಂಧಿತ ವಲಯಗಳಿಗೆ 1.52 ಲಕ್ಷ ಕೋಟಿ ರೂ.

ಬಂಡವಾಳ ಹೂಡಿಕೆಗೆ 11.11 ಲಕ್ಷ ಕೋಟಿ ರೂ.

ಬಿಹಾರದ ನೀರಾವರಿ ಹಾಗೂ ಪ್ರವಾಹ ನಿರ್ಮೂಲನೆ ಯೋಜನೆಗೆ 11,500 ಕೋಟಿ ರೂ.

ಆಂಧ್ರಪ್ರದೇಶಕ್ಕೆ 15,000 ಕೋಟಿ ರೂ.ಗಳ ವಿಶೇಷ ನೆರವು

## ಕ್ಯಾನ್ಸರ್ ಔಷಧಿಗಳ ತೆರಿಗೆ ಇಳಿಕೆ

**(1ನೇ ಪುಟದಿಂದ)** ರದ್ದುಗೊಳಿಸಲಾಗಿದೆ. ಎಕ್ಸ್‌ರೇ ಹಾಗೂ ಫ್ಲಾಟ್ ಪ್ಯಾನೆಲ್ ಡಿಟೆಕ್ಟರ್ ಮೇಲಿನ ತೆರಿಗೆಯನ್ನು ಶೇ.15 ರಿಂದ ಐದಕ್ಕೆ ಇಳಿಸಲಾಗಿದೆ.

ಮೊಬೈಲ್ ಫೋನ್, ಚಾರ್ಜರ್ ಹಾಗೂ ಮೊಬೈಲ್ ಉತ್ಪಾದನೆಗೆ ಬಳಸುವ ಕೆಲ ಘಟಕಗಳ ತೆರಿಗೆಯನ್ನು ಶೇ.15 ಕ್ಕೆ ಇಳಿಕೆ ಮಾಡಲಾಗಿದೆ. ಇದಕ್ಕೂ ಮುಂಚೆ ಮೊಬೈಲ್ ಫೋನ್ ಚಾರ್ಜರ್ ಹಾಗೂ ಮದರ್ ಬೋರ್ಡ್‌ಗಳ ಮೇಲೆ ಶೇ. 20ರ ಆಮದು ತೆರಿಗೆ ವಿಧಿಸಲಾಗುತ್ತಿತ್ತು.

ಮೊಬೈಲ್ ಫೋನ್‌ಗಳ ಉತ್ಪಾದನೆಗೆ ಬಳಸಲಾಗುವ ಬಿಡಿ ಭಾಗಗಳ ಮೇಲಿನ ತೆರಿಗೆಯನ್ನು ಸಹ ಕೇಂದ್ರ ಸರ್ಕಾರ ಇಳಿಕೆ ಮಾಡಿದೆ.

ಲೀಥಿಯಂ, ಕೊಬಾಲ್ಟ್ ಹಾಗೂ ಅಪರೂಪದ ಮೂಲವಸ್ತುಗಳ ಆಮದು ತೆರಿಗೆಯನ್ನೂ ಇಳಿಕೆ ಮಾಡಲಾಗಿದೆ. ಇವುಗಳು ಅಣು ವಿದ್ಯುತ್, ನವೀಕರಣ ಇಂಧನ, ಬಾಹ್ಯಾಕಾಶ, ರಕ್ಷಣೆ, ಟೆಲಿಕಾಂ ಹಾಗೂ ಉನ್ನತ ತಂತ್ರಜ್ಞಾನದ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಬಳಕೆಯಾಗುತ್ತವೆ.

# ಉನ್ನತ ಶಿಕ್ಷಣಕ್ಕೆ ಸಾಲ, ಯುಜಿಸಿ ಅನುದಾನ ಕಡಿತ

**(1ನೇ ಪುಟದಿಂದ)** ನೀಡಲಾಗಿದೆ. ದೇಶಿಯ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಪಡೆಯಲು 10 ಲಕ್ಷ ರೂ.ಗಳ ವರೆಗೆ ಸಾಲದ ನೆರವು ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಈ - ವೋಚರ್ ಮೂಲಕ 1 ಲಕ್ಷ ವಿದ್ಯಾರ್ಥಿಗಳಿಗೆ ಶೇಕಡ ಮೂರರ ಬಡ್ಡಿ ವಿನಾಯಿತಿ ಇರುವ ಸಾಲ ನೀಡಲಾಗುವುದು ಎಂದು ಸೀತಾರಾಮನ್ ಹೇಳಿದ್ದಾರೆ.

ಇದು ಸರ್ಕಾರದ ಯಾವುದೇ ಯೋಜನೆ ಹಾಗೂ ನೀತಿಗಳ ಲಾಭಕ್ಕೆ ಅರ್ಹರಾಗದ ವಿದ್ಯಾರ್ಥಿಗಳಿಗೆ ನೆರವಾಗಲಿದೆ ಎಂದು ಸಚಿವೆ ತಿಳಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಸರ್ಕಾರದ ಕ್ರಮಗಳಿಂದ ವಿದ್ಯಾರ್ಥಿಗಳು, ಶಿಕ್ಷಣ ವಲಯ ಹಾಗೂ ಉದ್ಯಮಗಳಿಗೆ ಅನುಕೂಲವಾಗಲಿದೆ ಎಂದಿದ್ದಾರೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ (ಯುಜಿಸಿ) ನೀಡಲಾಗುವ ಅನುದಾನವನ್ನು ಈ ಬಾರಿ 2,500 ಕೋಟಿ ರೂಪಾಯಿಗಳಿಗೆ ನಿಗದಿಪಡಿಸಲಾಗಿದೆ. ಕಳೆದ ಪರಿಷ್ಕೃತ ಅಂದಾಜಿನಲ್ಲಿ 6,409 ಕೋಟಿ ರೂ.ಗಳ ಅನುದಾನ ನೀಡಲಾಗಿತ್ತು. ಈ ಬಾರಿ ಶೇ. 60ರ ಇಳಿಕೆಯಾಗಿದೆ.

ಐ.ಐ.ಎಂ.ಗಳೂ ಅನುದಾನ ಕಡಿತ ಎದುರಿಸಿವೆ. ಕಳೆದ ಬಾರಿ 300 ಕೋಟಿ ರೂ. ಅನುದಾನ ನೀಡಿದ್ದಾರೆ, ಈ ಬಾರಿ 212 ಕೋಟಿ ರೂ. ಅನುದಾನ ನೀಡಲಾಗಿದೆ.

ಕಳೆದ ವರ್ಷದ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಐ.ಐ.ಟಿ.ಗಳ ಅನುದಾನ ಸಹ ಇಳಿಕೆಯಾಗಿದೆ. ಕಳೆದ ವರ್ಷ 10,384 ಕೋಟಿ ರೂ. ಅನುದಾನ ನೀಡಿದ್ದಾರೆ ಈ ಬಾರಿ 10,324 ಕೋಟಿ ರೂ. ನೀಡಲಾಗಿದೆ.

ಕೃಷಿ ಹಾಗೂ ಸಂಬಂಧಿತ ವಲಯಗಳಿಗಾಗಿ 1.52 ಲಕ್ಷ ಕೋಟಿ ರೂ.ಗಳನ್ನು ಒದಗಿಸಲಾಗಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮೂರು ಕೋಟಿ ಕಡಿಮೆ ವೆಚ್ಚದ ಮನೆಗಳನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿದೆ.

ಸಣ್ಣ ಹಾಗೂ ಮಧ್ಯಮ ಉದ್ಯಮಗಳಿಗೆ ಸಾಲದ ನೆರವು, 12 ಕೈಗಾರಿಕಾ ಪಾರ್ಕ್ ಸ್ಥಾಪನೆ ಹಾಗೂ ಬಾಹ್ಯಾಕಾಶ ವಲಯಕ್ಕೆ 1,000 ಕೋಟಿ ರೂಗಳ ಬಂಡವಾಳ ನಿಧಿ ಸ್ಥಾಪಿಸುವುದಾಗಿಯೂ ಸೀತಾರಾಮನ್ ಪ್ರಕಟಿಸಿದ್ದಾರೆ.

# ಚೊಂಬು ಕೊಟ್ಟ ಕೇಂದ್ರ ಎಸ್ಸೆಸ್-ಎಸ್ಸೆಸ್ಸೆಂ ಬಜೆಟ್ ಟೀಕೆ

**(1ನೇ ಪುಟದಿಂದ)** ರಾಜ್ಯಗಳ ಸಹಕಾರ ಬೇಕು. ಅದಕ್ಕಾಗಿ ವಿಶೇಷ ಅನುದಾನವನ್ನು ಕೊಟ್ಟಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

ಕರ್ನಾಟಕ ರಾಜ್ಯದ ಪ್ರಮುಖ ಭದ್ರಾ ಮೇಲ್ದಂಡೆ ಯೋಜನೆಗೆ ಕಳೆದ ಬಾರಿಯೇ ಅನುದಾನ ಬಿಡುಗಡೆ ಮಾಡುತ್ತೇವೆ ಎಂದಿದ್ದ ಕೇಂದ್ರ ಸರ್ಕಾರ, ಇಂದು ಮಂಡಿಸಿದ ಬಜೆಟ್ ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಯಾವುದೇ ರೀತಿಯಲ್ಲಿ ಪ್ರಸ್ತಾಪಿಸದೇ ದಾವಣಗೆರೆ ಜಿಲ್ಲೆ ಸೇರಿದಂತೆ 7-8 ಜಿಲ್ಲೆಗಳ ರೈತರಿಗೆ ದ್ರೋಹ ಬಗೆದಿದ್ದಾರೆ ಎಂದು ದೂರಿದ್ದಾರೆ. ಕಲ್ಯಾಣ ಕರ್ನಾಟಕಕ್ಕೆ ಮ್ಯಾಚಿಂಗ್ ಗ್ರ್ಯಾಂಟ್ ಕೊಟ್ಟಿಲ್ಲ. ಭದ್ರಾ ಮೇಲ್ದಂಡೆ, ಮಹದಾಯಿ, ಮೇಕೆದಾಟು ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲ. ರೈತರಿಗೂ ಯಾವುದೂ ಪ್ರಯೋಜನ ಆಗಿಲ್ಲ, ರೈತರು-ಬಡವರಿಗೆ ದೊಡ್ಡ ಅನ್ಯಾಯ ಮಾಡಿದ್ದಾರೆ. ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಕಾಯ್ದೆ ಮಾಡಿ ಅಂತ ರೈತರಿಂದ ಬಹಳದಿನಗಳ ಬೇಡಿಕೆ ಇತ್ತು, ಆದೂ ಆಗಿಲ್ಲ.

ದಲಿತರ ಬಗ್ಗೆ ಮಾತನಾಡುವ ಇವರು, ಅನುದಾನ ಕಡಿಮೆ ಮಾಡಿದ್ದಾರೆ. ಕಳೆದ ಮಧ್ಯಂತರ ಬಜೆಟ್‌ನಲ್ಲಿ 9409 ಕೋಟಿ ರೂ. ಮೀಸಲಿಟ್ಟಿದ್ದರು. ಆದರೆ, ಈಗ 6300 ಕೋಟಿ ರೂ. ಮಾತ್ರ ಮೀಸಲಿಟ್ಟಿದ್ದಾರೆ. ಐವರು ಕೇಂದ್ರ ಸಚಿವರಿದ್ದರೂ ರಾಜ್ಯಕ್ಕೆ ಯಾವುದೇ ಪ್ರಯೋಜನ ಆಗಿಲ್ಲ.

ಕೈಗಾರಿಕಾ, ರೈಲ್ವೆ ಕೃಷಿ ಕ್ಷೇತ್ರಗಳಿಗೆ ಯಾವುದೇ ಕೊಡುಗೆ ಇಲ್ಲ. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಪಂಗ ನಾಮ ಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ದೂಡಾ ಅಧ್ಯಕ್ಷರಾಗಿ ದಿನೇಶ್ ಶೆಟ್ಟಿ ?

**(1ನೇ ಪುಟದಿಂದ)** ಸಂಬಂಧ ಕಡತಕ್ಕೆ ಮುಖ್ಯಮಂತ್ರಿಗಳು ಸಹಿ ಹಾಕಿದ್ದು, ಬಹುಶಃ ನಾಳೆ ಬುಧವಾರ ಸರ್ಕಾರ ಆದೇಶ ಹೊರಡಿಸಲಿದೆ ಎಂದು ಮೂಲಗಳು ಹೇಳಿವೆ.

**ಬೇಕಾಗಿದ್ದಾರೆ**
ಫೈನಾನ್ಸ್ ಕಂಪನಿಯಲ್ಲಿ ಕರಪತ್ರ ಗಳನ್ನು ಹಂಚಲು ಮತ್ತು ಮಾರ್ಕೆಟಿಂಗ್ ಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ ಉತ್ತಮ ಸಂಬಳವಿರುತ್ತದೆ. ವಿದ್ಯಾರ್ಹತೆ ಅವಶ್ಯಕತೆ ಇರುವುದಿಲ್ಲ. ದಾವಣಗೆರೆ ಜಿಲ್ಲೆ, ಚಿತ್ರದುರ್ಗ , ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಕೆಲಸ ಮಾಡಲು ಆಸಕ್ತಿ ಉಳ್ಳವರು ಇಂದೇ ಸಂಪರ್ಕಿಸಿ.
73385 80345

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಬೂದಿಹಾಳ್ ಹತ್ತಿರ ಕಮ್ಮತ್ತಹಳ್ಳಿ (ದಾವಣಗೆರೆಯಿಂದ 30 ಕಿ.ಮೀ.)ಯಲ್ಲಿ ಸರ್ವೆ ನಂ. 223/A2, ವಿಸ್ತೀರ್ಣ 4 ಎಕರೆ 9 ಸೆಂಟ್ಸ್ ಜಮೀನು ಮಾರಾಟಕ್ಕಿದೆ.
ನಾಗರಾಜು 82173 29069

**Wheel Chair for Sale**
Sparingly used New wheel chair for sale , price 8000.
70196 73972

**ಸೈಟುಗಳು ಮಾರಾಟಕ್ಕಿವೆ**
MBA ಕಾಲೇಜ್ ರೋಡಿಗೆ 30x40 North ಕಮರ್ಷಿಯಲ್ 40x80 East ವಿವೇಕಾನಂದ ಬಡಾವಣೆಯಲ್ಲಿ 30x46 North ಡಾಲರ್ಸ್ ಕಾಲೋನಿಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಮೈಗ್ರೇನ್, ಕ್ಯಾನ್ಸರ್, ಸ್ಟ್ರೋಕ್, ಡಿಪ್ರೆಶನ್, ಸ್ಕಿಜೋಫ್ರೇನಿಯಾ, ಮಾಟ, ಮಂತ್ರ, ಭೂತ ಪ್ರೇತಗಳ ಭಯ ಮುಂತಾದ ಅನೇಕ ಸಮಸ್ಯೆಗಳ ಮೂಲ ಹಿಂದಿನ ಜನ್ಮಗಳ ದೋಷಗಳಿಗೆ ರಾಮಬಾಣ ಚಿಕಿತ್ಸೆ
8073342011
(ವ್ಯಕ್ತಿ ಎಷ್ಟೇ ದೂರವಿದ್ದರೂ distance heeling ಮಾಡುತ್ತೇವೆ)

**ಬೇಕಾಗಿದ್ದಾರೆ**
ಪಿಯುಸಿ ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ತಕ್ಷಣ ಬೇಕಾಗಿದ್ದಾರೆ**
wholesale ಅಂಗಡಿಗೆ Delivery supervisor ಮತ್ತು ಟ್ಯಾಲಿ ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ. ಅನುಭವಿಗಳಿಗೆ ಆದ್ಯತೆ ನೀಡಲಾಗುವುದು. ಶಿಕ್ಷಣ ಅರ್ಹತೆ: SSLC/PUC/DEGREE. ವಯಸ್ಸಿನ ಮಿತಿ: 18-45 ವರ್ಷಗಳು. ಸಂಪರ್ಕಿಸಿ:
94822 14855

**ಕಾರು ಬಾಡಿಗೆಗೆ ಸಿಗುತ್ತದೆ**
ನಮ್ಮಲ್ಲಿ ಸ್ವಿಫ್ಟ್ ಟೂರ್ ಹೊಸ ಕಾರು ಇದೆ. CNG ಮತ್ತು ಪೆಟ್ರೋಲ್ ಗಾಡಿ. ಯಾವುದೇ ಆಫೀಸ್ ಕೆಲಸಕ್ಕೆ ತಿಂಗಳ ಬಾಡಿಗೆಗೆ ಸಿಗುತ್ತದೆ.
ಕಾರು ನಂ. KA 17 TS 0243
ಎಲ್ಲೋ ಬೋರ್ಡ್, ಹೊಸ ಕಾರು
99018 71255

**ಮಹಿಳೆ ಬೇಕಾಗಿದ್ದಾರೆ**
ದಿನದ 24 ಗಂಟೆಯೂ ಮನೆಯಲ್ಲೇ ಇದ್ದುಕೊಂಡು ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ.
73533 36533

**ಶಿಕ್ಷಕಿಯರು ಬೇಕಾಗಿದ್ದಾರೆ**
BA, B.Ed, D.Ed, B.Com, B.Sc ಆಗಿರುವ ಇಂಗ್ಲಿಷ್ ಗ್ರಾಮರ್ ತಿಳಿದಿರುವ ಶಿಕ್ಷಕಿಯರು ತಕ್ಷಣ ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ :
ಶ್ರೀ ಶ್ರೀನಿವಾಸ ಕಾನ್ವೆಂಟ್
ಬಸಾಪುರ, ಬಂಬೂಬಜಾರ್ ರಸ್ತೆ, ದಾವಣಗೆರೆ.
99453 24288, 72049 38059

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ನಗರ ಸಮೀಪದ ಎಲ್ಲೋ ಬೆಲ್ಟ್ ಜೋನಿನಲ್ಲಿ 9 ಎಕರೆ ಪಾಮಾಯಿಲ್ ತೋಟ, ಬೇಕಾದವರು ಸಂಪರ್ಕಿಸಿ :
99863 61250

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ (ಟಾಪ್ ಲೊಕೇಶನ್) 40x60 ದಕ್ಷಿಣ (60 ಲಕ್ಷ) 40x60 ಪಶ್ಚಿಮ (62 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
ನೇರವಾಗಿ ಹಳೆ ರಿಜಿಸ್ಟರ್ ಪಾರ್ಟಿ ವ್ಯಾಪಾರ ಕೇವಲ (1/2%) ಅರ್ಧ ಪರ್ಸೆಂಟ್ ಕಮಿಷನ್ ನನ್ನದು

**ಬಾಡಿಗೆಗೆ ಇದೆ**
ಫಾರ್ಮಾ ಹಾಗೂ ಕಛೇರಿಗೆ ಯೋಗ್ಯವಾದ 25x50 ಅಳತೆ ಮನೆ 1ನೇ ಮಹಡಿಯಲ್ಲಿ ಬಾಡಿಗೆಗೆ ಇದೆ. 3ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ಆದರ್ಶ ಆಸ್ಪತ್ರೆ ಪಕ್ಕ, ದಾವಣಗೆರೆ.
98453 52371

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ದಾವಣಗೆರೆ.**

**ಭೂಸನಿ ಅಪೀಲು ನಂ. 41/24-25**
ಅಪೀಲುದಾರರು : ಚಂದ್ರಪ್ಪ ಬಿ.ಕೆ. ಬಿನ್ ಬಿಳಿಚೋಡು ಕಲ್ಲಪ್ಪ
ವಿರುದ್ಧ/- ಎದುರುದಾರರು : ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ಮತ್ತು ಇತರರು.

**ಸಾರ್ವಜನಿಕರ ಪ್ರಕಟಣೆಗಾಗಿ**

ಮೇಲ್ಕಂಡ ಅಪೀಲುದಾರರು ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಬುಳ್ಳಾಪುರ ಗ್ರಾಮದ ರಿ.ಸ.ನಂ. 9ರಲ್ಲಿ ಮಾಡಿರುವ ದೋಷಯುಕ್ತ ಹಿಸ್ಸಾ ಪೋಡುಗಳಾದ ರಿ.ಸ.ನಂ. 9/1.6.7.8.9 ಮತ್ತು 10 ಎಂದು ಮಾಡಿರುವಂತಹ ಎಲ್ಲಾ ಹಿಸ್ಸಾ ಪೋಡುಗಳಾದ ರದ್ದುಪಡಿಸಲು, ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನ ಎದುರುದಾರರಾದ ಕ್ರಮವಾಗಿ 2ನೇ ಎದುರುದಾರರಾದ ಬಿ.ಕೆ. ಬಸವರಾಜಪ್ಪ ಬಿನ್ ಕಲ್ಲಪ್ಪ ರವರಿಗೆ ಬಾವಿಹಾಳು ಗ್ರಾಮದ ವಾಸಿಗಳಾದ ಇವರಾಗಲೀ, ಇವರ ಹಿತಾಸಕ್ತ ಪಕ್ಷಗಾರರು ಸದರಿ ದಿನಾಂಕ : 30.07.2024 ರಂದು ಮಧ್ಯಾಹ್ನ 3.00 ಗಂಟೆಗೆ ನಿಗದಿಪಡಿಸಿದ್ದು, ಮಾನ್ಯ ನ್ಯಾಯಾ ಲಯಕ್ಕೆ ಸ್ವತಃ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಲು ತಿಳಿಸಿದೆ. ತಪ್ಪಿದ್ದಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ಮಾನ್ಯ ನ್ಯಾಯಾಲಯವು ಪ್ರಕರಣವನ್ನು ತೀರ್ಮಾನಿಸಲಾಗುತ್ತದೆ. ನ್ಯಾಯಾಲಯದ ಮೊಹರಿನೊಂದಿಗೆ 11.7.2024 ರಂದು ಸದರಿ ನೋಟೀಸನ್ನು ಹೊರಡಿಸಲಾಗಿದೆ.

**ಸಹಿ/- ಬಿ.ಕೆ. ಚಂದ್ರಪ್ಪ, ಮೇಲ್ಮನವಿದಾರರು**
**ಸಹಿ/- ಭೂದಾಖಲೆಗಳ ಉಪ ನಿರ್ದೇಶಕರು, ದಾವಣಗೆರೆ ಜಿಲ್ಲೆ**

**ತಕ್ಷಣ ಬೇಕಾಗಿದ್ದಾರೆ**
ಅನುಭವಿ ಕಂಪ್ಯೂಟರ್ ಆಪರೇಟರ್ ಮತ್ತು ಪೋಟೋಶಾಪ್ ಕೆಲಸಕ್ಕೆ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಅಕ್ಕಮಹಾದೇವಿ ಶಾಲೆಯ ಹತ್ತಿರ, ಎನ್.ಆರ್. ರಸ್ತೆ ದಾವಣಗೆರೆ.
95354 37451

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮನೆ ಬಾಡಿಗೆಗಿದೆ**
ಕುವೆಂಪು ನಗರದಲ್ಲಿ ಸಿಂಗಲ್ ಬೆಡ್ ರೂಂ ಮನೆ 1ನೇ ಮಹಡಿಯಲ್ಲಿ ಬಾಡಿಗೆಗಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಆಸಕ್ತರು ಸಂಪರ್ಕಿಸಿ :
99863 31471

**DOUBLE BED ROOMS HOUSE FOR LEASE**
Ashoka Nagar. Near HP Gas Godown. Dvg.
Contact Immediately:
95356 10817

**TELE CALLERE ಬೇಕಾಗಿದ್ದಾರೆ**
Male/ Female ಕನ್ನಡ, ಹಿಂದಿ ಮಾತನಾಡಲು ಬರುವವರಿಗೆ ಆದ್ಯತೆ, ಕಂಪ್ಯೂಟರ್ ಬೇಸಿಕ್ ತಿಳಿದಿರಬೇಕು. ಆಸಕ್ತರು ಈ ಕೆಳಗಿನ ಸಂಖ್ಯೆಗೆ ಕರೆ ಮಾಡಿ
76765 36007
ಕರೆ ಮಾಡುವ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 6.30, ಸಂಬಳ : 8000-10000 ರೂಪಾಯಿಗಳು.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಒಂದು ವರ್ಷದ ಹಾಗೂ ಎರಡು ವರ್ಷದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ಅಶೋಕ ನಗರ, ಶಿವಮೊಗ್ಗ (ಜಿ) ಭದ್ರಾವತಿ (ತಾ)
99459 13323, 96864 66760

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಉತ್ತರ 30x50 ಅಕ್ಕ-ಪಕ್ಕ 60x100, 30x60, ವಿನಾಯಕ ಬಡಾವಣೆ ಉತ್ತರ 40x60, ಬನಶಂಕರಿ ಬಡಾವಣೆ ಪೂರ್ವ 30x57 ಅಕ್ಕ-ಪಕ್ಕ, ಪಶ್ಚಿಮ 40x70 ಅಕ್ಕ-ಪಕ್ಕ.
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಸಂಭ್ರಮ್ ಹೋಟೆಲ್ ಹತ್ತಿರ ಪೂರ್ವ 30x55 (Corner) (60 Ft Road) 30x57 (ಅಕ್ಕ-ಪಕ್ಕ) (30 ft Road) ಪಶ್ಚಿಮ 40x70 (ಅಕ್ಕ-ಪಕ್ಕ) ಶಿವ-ಪಾರ್ವತಿ ಬಡಾವಣೆ ಪೂರ್ವ 30x55, 40x60 (ಅಕ್ಕ-ಪಕ್ಕ) 30x40 ಪಶ್ಚಿಮ, 30x40 ಅಕ್ಕ-ಪಕ್ಕ.
ಐಗೂರು ವಿಜಯಕುಮಾರ
99457 02495

**IMMEDIATELY REQUIRED**
Computer Teacher for DRR SCHOOL
P. B.Road Davangere.
9886217745 / 9844007624

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 North, 40x60 North, 120 ಅಡಿ ರೋಡಿಗಿದೆ, 50x80 East, 40x60 North, 30x50 West, ಪಾರ್ಕ್ ಎದುರಿಗೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**TUITIONS PCMB/CS**
5th Std to 10th Std
Science, Maths
ಸಮೃದ್ಧಿ ಅಕಾಡೆಮಿ
96202 62361

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002.
97402 58276

**FLAT FOR LEASE**
3 BHK, Sqft :1888
AM Apartment, Nainika Prime Rose, Vidyanagar Last City Bus Stop, Davanagere.
89519 38228, 80502 22181

**WANTED**
Head Master / Head mistress
B.Sc B.Ed / M.Sc B.Ed
High School maths hand with experienced
for M.E.S convent
Apply and walk in interview on
24/25 -7-2024@ AM
Anjenaya extension, 9th cross near indragiri chandragiri appartment Davangere 577004,
98804 36414

# ಕೇಂದ್ರ ಸರ್ಕಾರದ ಮುಂಗಡ ಪತ್ರ : ಗಣ್ಯರ ಅಭಿಮತ

## ಸರ್ವಸ್ಪರ್ಶಿ, ಸರ್ವವ್ಯಾಪಿ ಬಜೆಟ್

ಸರ್ವರಿಗೂ ಸಮಪಾಲು, ಸಮಬಾಳು ತತ್ವಕ್ಕೆ ಪೂರಕರವಾಗಿದೆ. ದೇಶದ 9 ವಲಯಗಳಿಗೆ ಆದ್ಯತೆ ನೀಡಿದೆ. ರೈತರು, ಮಹಿಳೆಯರು ಹಾಗೂ ಯುವಕರಿಗೆ ಉದ್ಯೋಗ ನೀಡುವ ದಿಸೆಯಲ್ಲಿ ಕೇಂದ್ರ ಸರ್ಕಾರವು ಮಹತ್ವದ ಹೆಜ್ಜೆ ಇರಿಸಿದೆ. ಪ್ರಮುಖ ಯೋಜನೆಗಳ ಮೂಲಕ ದೇಶದ ಕೋಟ್ಯಂತರ ಜನರಿಗೆ ಉದ್ಯೋಗಕ್ಕೆ ಆದ್ಯತೆ ನೀಡಲಾಗಿದೆ. ಯುವಕ-ಯುವತಿಯರಿಗೆ ಉದ್ಯೋಗ ನೀಡುವ ಜೊತೆಗೆ 1 ಕೋಟಿ ರೈತರು ಸಾವಯವ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಆದ್ಯತೆ ನೀಡಿದ್ದಾರೆ.



ದೇಶದ ಅಭಿವೃದ್ಧಿಗೆ ಇಂದು ಮಂಡನೆಯಾಗಿರುವ ಬಜೆಟ್ ಜನಸ್ನೇಹಿ ಮತ್ತು ಜನ ಸಾಮಾನ್ಯರ ಬಜೆಟ್ ಎಂಬುದರಲ್ಲಿ ಎರಡು ಮಾತಿಲ್ಲ. ರೈತರು, ಬಡವರು, ಮಹಿಳೆಯರು, ವಿದ್ಯಾರ್ಥಿಗಳು ಹೀಗೆ ಎಲ್ಲಾ ವರ್ಗದವರಿಗೂ ಬಜೆಟ್ ನಲ್ಲಿ ಪಾಲು ನೀಡಿರುವುದು ಸ್ವಾಗತಾರ್ಹ.

**- ಶಿವನಗೌಡ ಪಾಟೀಲ್**, ಪಾಲಿಕೆ ಮಾಜಿ ಸದಸ್ಯ

## ವಿಕಸಿತ ಭಾರತದ ಬಜೆಟ್ ಅಲ್ಲ, ಮೋದಿ ಕುರ್ಚಿ ಉಳಿಸುವ ಬಜೆಟ್

ವಿಕಸಿತ ಭಾರತದ ಬಜೆಟ್ ಅಲ್ಲ. ವಿನಾಶ ಭಾರತದ ಬಜೆಟ್ ಆಗಿದೆ. ಮೋದಿ ಅಧಿಕಾರದ ಕುರ್ಚಿ ಉಳಿಸಿಕೊಳ್ಳಲು ಆಂಧ್ರಪ್ರದೇಶ ಹಾಗೂ ಬಿಹಾರಕ್ಕೆ ಹೆಚ್ಚು ಅನುದಾನವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್‌ನಲ್ಲಿ ನೀಡಲಾಗಿದೆ.

ಕರ್ನಾಟಕದ ಮೇಕೆದಾಟು ಯೋಜನೆಗೆ ಅನುಮತಿ ನೀಡಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ ಹಣ ನೀಡಿಲ್ಲ. ಕರ್ನಾಟಕ ರಾಜ್ಯಕ್ಕೆ ಯಾವುದೇ ವಿಶೇಷ ಯೋಜನೆ ರೂಪಿಸಿಲ್ಲ. ಬೆಳ್ಳಿ, ಬಂಗಾರ, ವಜ್ರ, ಪ್ಲಾಟಿನಂಗಳ ಮೇಲೆ ಕಸ್ಟಮ್ ತೆರಿಗೆ ಇಳಿಸುವ ಮೂಲಕ ಮೋದಿ ಸರ್ಕಾರ ಶ್ರೀಮಂತರ ಪರ ಎಂದು ರುಜವಾತಾಗಿದೆ.

ಹಳೆಯ ಆದಾಯ ತೆರಿಗೆ ಪದ್ಧತಿಯಲ್ಲಿ ಇದ್ದವರಿಗೆ ಯಾವುದೇ ರಿಯಾಯತಿ ನೀಡಿಲ್ಲ. ಮೋದಿ ಸರ್ಕಾರ ಐದು ವರ್ಷಗಳಲ್ಲಿ ನಾಲ್ಕು ಕೋಟಿ ಉದ್ಯೋಗದ ಭರವಸೆಯನ್ನು ಬಜೆಟ್‌ನಲ್ಲಿ ನೀಡಲಾಗಿದೆ. ಮೋದಿ ಅಧಿಕಾರಕ್ಕೆ ಬಂದು ಹತ್ತು ವರ್ಷಗಳಲ್ಲಿ ವರ್ಷಕ್ಕೆ ಎರಡು ಕೋಟಿ ಉದ್ಯೋಗದ ಭರವಸೆ ನೀಡಿ ವಂಚಿಸಿದ್ದಾರೆ.

ದೇಶದ ಬಡವರು, ರೈತರಿಗೆ, ಮಹಿಳೆಯರು, ಕಾರ್ಮಿಕರಿಗೆ ಯಾವುದೇ ಕಾರ್ಯಕ್ರಮ ಜಾರಿಗೊಳಿಸಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನರಿಗೆ ಬಜೆಟ್‌ನಲ್ಲಿ ಸಾಮಾಜಿಕ ನ್ಯಾಯ ನೀಡಿಲ್ಲ. ದೂರದೃಷ್ಟಿ ಇಲ್ಲದ ಕೇವಲ ಅಂಕಿ-ಸಂಖ್ಯೆಗಳ ಬಜೆಟ್ ಇದಾಗಿದೆ.



**- ಡಿ. ಬಸವರಾಜ್,**
ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ

## ಗೌರಿಯರಿಗೆ ಶಕ್ತಿ ತುಂಬಿದ ಮಸೂದೆ

ನಾರೀ ಶಕ್ತಿಗೆ ಶಕ್ತಿ ತುಂಬಿ ಗೌರಿ ಹಬ್ಬದ ಉಡುಗೊರೆಯಾಗಿ ಮಹಿಳಾ ಸಬಲೀಕರಣಕ್ಕೆ 3 ಕೋಟಿ ಕೊಟ್ಟಿದ್ದಾರೆ. ಮಹಿಳೆಯರಿಗೆ ಆಸ್ತಿ ಖರೀದಿಸಲು ವಿಶೇಷ ಯೋಜನೆ ನೀಡಲಾಗಿದೆ. ಬಡವರಿಗೆ ಆವಾಸ ಯೋಜನೆಯಲ್ಲಿ ಮಧ್ಯಮ ಜನರಿಗೆ ಮನೆ ನಿರ್ಮಾಣ, ಉದ್ಯೋಗ, ಕೌಶಲ್ಯಾಭಿವೃದ್ಧಿಗೆ ಒತ್ತು ಕೊಡಲಾಗಿದೆ. ಮುದ್ರ ಲೋನ್ ಹೆಚ್ಚಿಸಲಾಗಿದೆ.



ಸ್ಟ್ರೀಟ್ ಫುಡ್ ಅಭಿವೃದ್ಧಿಗೆ ಒತ್ತು ಕೊಡಲಾಗಿದೆ. ಭಾರತೀಯ ನಾರಿಯರಿಗೆ ಚೈತನ್ಯ ನೀಡಿದ ಪ್ರಧಾನಮಂತ್ರಿ ನರೇಂದ್ರಮೋದಿ ಜೀ ಹಾಗೂ ಕೇಂದ್ರ ಸರ್ಕಾರಕ್ಕೆ ಸಮಸ್ತ ಮಹಿಳೆಯರ ಪರವಾಗಿ ಧನ್ಯವಾದ ಅರ್ಪಿಸಿದರು.

**- ಪುಷ್ಪ ವಾಲಿ,** ಪ್ರಧಾನ ಕಾರ್ಯದರ್ಶಿ
ಬಿಜೆಪಿ ಮಹಿಳಾ ಮೋರ್ಚಾ


## ಕೇಂದ್ರ ಬಜೇಟ್ ಅಭಿವೃದ್ಧಿ ಪೂರಕ

ನಿರ್ಮಲ ಸೀತಾರಾಮನ್ ಅವರು ಮಂಡಿಸಿದ ಬಜೆಟ್ ಅಭಿವೃದ್ಧಿ ಪೂರಕವಾಗಿದ್ದು, ಜನಪರವಾಗಿದ್ದು, ಹಣದುಬ್ಬರ ನಿಯಂತ್ರಿಸುವಲ್ಲಿ ಯಶಸ್ವಿಯಾಗುವ, ಉತ್ತಮ ಆರ್ಥಿಕತೆಗೆ ಪೂರಕವಾಗಿರುವ ಬಜೆಟ್ ಆಗಿದೆ.

ರಕ್ಷಣಾ ಇಲಾಖೆಗೆ ರೂ 4.54 ಲಕ್ಷ ಮೀಸಲಿಟ್ಟಿರುವುದು. ಕೃಷಿ ಕ್ಷೇತ್ರಕ್ಕೆ ರೂ 1.4 ಲಕ್ಷ ಕೋಟಿ, ಗ್ರಾಮೀಣಾಭಿವೃದ್ಧಿಗೆ ರೂ 2.66 ಲಕ್ಷ ಕೋಟಿ. ಉದ್ಯೋಗ ಹಾಗೂ ಕೌಶಲಾಭಿವೃದ್ಧಿಗೆ 1.48 ಲಕ್ಷ ಕೋಟಿ. ಮೂಲಸೌಕರ್ಯ ಅಭಿವೃದ್ಧಿಗೆ ರೂ, 11 ಲಕ್ಷ ಕೋಟಿ. ಆರೋಗ್ಯಕ್ಕಾಗಿ ರೂ 89,287 ಕೋಟಿ. ಇಂಧನ ಇಲಾಖೆಗೆರೂ 68,796 ಕೋಟಿ. ಸಮಾಜ ಕಲ್ಯಾಣ ಇಲಾಖೆಗೆ ರೂ 5651ಕೋಟಿ. ಮೀಸಲಿರಿಸಿರುವುದು ಸ್ವಾಗತರ್ಹವಾಗಿದೆ.

ಪಿಎಂ ಅವಾಸ್ ಯೋಜನೆ ಅಡಿ 3,00,000 ಮನೆ ನಿರ್ಮಾಣ. ಗ್ರೀಪ್ ಕಲ್ಯಾಣ್ ಯೋಜನೆಯನ್ನು ಐದು ವರ್ಷದವರೆಗೂ ವಿಸ್ತರಿಸಿರುವುದು. ಮಹಿಳಾ ಉದ್ಯೋಗಿಗಳಿಗೆ ಹೊಸ ಹಾಸ್ಟೆಲ್ ವ್ಯವಸ್ಥೆ. ಉನ್ನತ ಶಿಕ್ಷಣಕ್ಕೆ ರೂ. 10 ಲಕ್ಷ ವರೆಗೂ ಸಾಲ ಸೌಲಭ್ಯ. ಮುದ್ರಾ ಯೋಜನೆ ಅಡಿ ಸಾಲದ ಮುದ್ದ ಇಪ್ಪತ್ತು ಲಕ್ಷ ಇರುವವರೆಗೂ ಏರಿಕೆ ಮಾಡಿರುವುದು. 400 ಜಿಲ್ಲಾ ಕೇಂದ್ರಗಳಲ್ಲಿ ಬಯೋ ರಿಸರ್ಚ್ ಕೇಂದ್ರ ಸ್ಥಾಪನೆ. 12 ಕೈಗಾರಿಕಾ ಪಾರ್ಕ್ ಸ್ಥಾಪನೆ. 500 ಬೃಹತ್ ಕಂಪನಿಗಳಲ್ಲಿ 12 ತಿಂಗಳು ತರಬೇತಿ. ಕೈಗಾರಿಕೆಗಳಲ್ಲಿ ಒಂದು ಕೋಟಿ ಯುವಕರಿಗೆ ತರಬೇತಿ. ಮಹಿಳಾ ಸಬಲೀಕರಣಕ್ಕೆ ರೂಮ್ 3 ಲಕ್ಷ ಕೋಟಿ ಮೀಸಲು. ಇವುಗಳಿಂದ ಎಲ್ಲಾ ವರ್ಗದ ಜನರಿಗೂ. ಈ ಬಜೆಟ್‌ನಿಂದ ಅನುಕೂಲವಾಗಲಿದೆ.

ಕ್ಯಾನ್ಸರ್ ಔಷಧಗಳು. ಮೊಬೈಲ್ ಮತ್ತು ಚಾರ್ಜ್‌ಗಳು, ಚರ್ಮ ಉತ್ಪನ್ನಗಳು, ಉಣ್ಣೆ ಬಟ್ಟೆಗಳು, ಸೋಲಾರ್ ಪೆನಾಲ್ ಗಳು. ಚಿನ್ನಾ, ಬೆಲೆಯಲ್ಲಿ ಇಳಿಕೆಯಾಗಲು ತೆಗೆದುಕೊಂಡಿರುವ ಕ್ರಮ ಜನಪರ ಬಜೆಟ್ ಎನ್ನಬಹುದು.



**- ಡಿ.ಎಸ್. ಶಿವಶಂಕರ್**
ಬಿಜೆಪಿ ಹಿರಿಯ ಮುಖಂಡರು

# ಯುವಕರು ಮನುಷ್ಯತ್ವದಿಂದ ದೈವತ್ವದ ಕಡೆಗೆ ಸಾಗಿ



ದಾವಣಗೆರೆ, ಜು.23- ಯುವಕರು ಸೋಮಾರಿತನ ದೂರ ತಳ್ಳಿ, ಮನುಷ್ಯತ್ವದಿಂದ ದೈವತ್ವದ ಕಡೆಗೆ ತಲುಪಬೇಕೆಂದು ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿ ತ್ಯಾಗೀಶ್ವರಾನಂದ ಸ್ವಾಮೀಜಿ ಹೇಳಿದರು.

ವಿದ್ಯಾಸಾಗರ ಶಾಲೆ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಂಕಲ್ಪ ದಿನಾಚರಣೆ ಮತ್ತು ಕೈ ತುತ್ತು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪಾಲಕರು, ಮಕ್ಕಳನ್ನು ಉತ್ತಮ ಪ್ರಜೆಯಾಗಿಸುವ ಸಂಕಲ್ಪ ತೊಡಬೇಕು. ಈ ನಿಟ್ಟಿನಲ್ಲಿ ಯುವಕರೂ ಸಹ ತಂದೆ-ತಾಯಿ, ಗುರು ಹಿರಿಯರು ಮತ್ತು ದೇಶವನ್ನು ಗೌರವಿಸುವ ಗುಣ ಬೆಳೆಸಿಕೊಂಡು ಆದರ್ಶ ವ್ಯಕ್ತಿಗಳಾಗಬೇಕೆಂದು ಕಿವಿಮಾತು ಹೇಳಿದರು.

ಮೌಲ್ಯಾಧಾರಿತ ಶಿಕ್ಷಣ ಕೇವಲ ಶಾಲೆಯಲ್ಲಿ ಸಿಗುವುದಿಲ್ಲ. ಆದ್ದರಿಂದ ಪಾಲಕರು ತಮ್ಮ ಮಕ್ಕಳಿಗೆ ಮನೆಯಲ್ಲಿಯೇ ಸಂಸ್ಕೃತಿ-ಸಂಸ್ಕಾರ ಕಲಿಸಬೇಕು ಎಂದರು.

ಇಂದಿನ ಮಕ್ಕಳಿಗೆ ಮೆರಿಟ್ ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನ ಶಿಕ್ಷಣವೂ ಮುಖ್ಯವಾಗಿದೆ. ಆದ್ದರಿಂದ ಮಕ್ಕಳು ಆತ್ಮೀಯತೆ, ಬಾಂಧವ್ಯ ಮತ್ತು ಮಾನವಿಯತೆಯ ಗುಣ ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಆಶ್ರಮದ ಶಾಲೆಯಲ್ಲಿ ಬೆಳೆದ ಮಕ್ಕಳು ಉತ್ತಮ ಸಂಸ್ಕಾರದೊಂದಿಗೆ ಓದಿನಲ್ಲಿ ಸಾಧಿಸಿ ಐಎಎಸ್, ಐಪಿಎಸ್ ಅಧಿಕಾರಿಗಳಾಗಿದ್ದಾರೆ ಎಂದು ಹೇಳಿದರು.

ಶಿಕ್ಷಣ ತಜ್ಞ ಜಗನ್ನಾಥ ನಾಡಿಗೇರ ಮಾತನಾಡಿ, ಒಳ್ಳೆಯ ಸಮಾಜ ನಿರ್ಮಾಣವಾಗಲು ಮನುಷ್ಯನಲ್ಲಿ ಮಾನವೀಯ ಮೌಲ್ಯ ಮತ್ತು ಮಾನವೀಯ ಸಂಬಂಧ ಬಹಳ ಮುಖ್ಯ. ಆದರೆ ಇಂದಿನ ದಿನಮಾನಗಳಲ್ಲಿ ಈ ಅಂಶಗಳು ಮರೀಚಿಕೆ ಆಗುತ್ತಿವೆ ಎಂದು ಆತಂಕ ಪಟ್ಟರು.

ವಿದ್ಯಾರ್ಥಿಗಳು ಜೀವನದಲ್ಲಿ ಗುರಿ ಸಾಧಿಸುವ ಸಂಕಲ್ಪ ತೊಡಬೇಕು. ಈ ನಿಟ್ಟಿನಲ್ಲಿ ಸಂಕಲ್ಪಕ್ಕೆ ದಕ್ಕೆಯಾಗದಂತೆ ದೃಢ ನಿರ್ಧಾರದೊಂದಿಗೆ ಬದುಕಬೇಕು ಎಂದರು.

ಕಾರ್ಯಕ್ರಮದಲ್ಲಿ ಗುರುದೇವ ವಿದ್ಯಾ ಸಮಿತಿಯ ಆರ್. ಭರತ್ ಸಿಂಗ್, ವಿದ್ಯಾಸಾಗರ ಶಾಲೆಯ ಆಡಳಿತಾಧಿಕಾರಿ ಸತ್ಯವತಿ ಸಿಂಗ್, ಶಾಲೆಯ ಸಿಬ್ಬಂದಿ, ಪಾಲಕರು ಮತ್ತು ಮಕ್ಕಳಿದ್ದರು.

## ಅಭಿವೃದ್ಧಿ ಭಾರತದ ಸಂಕಲ್ಪಕ್ಕೆ ಪೂರಕವಾಗಿರುವ ಬಜೆಟ್

**(1ನೇ ಪುಟದಿಂದ)** ಕೇಂದ್ರ ಸರ್ಕಾರ, ಈಗ ಕೇವಲ 0.75 ಕೋಟಿ ಉದ್ಯೋಗ ಸೃಷ್ಠಿ ಮಾಡುತ್ತೇವೆ ಎನ್ನುವ ಮೂಲಕ ಅಭಿವೃದ್ಧಿಯಂತೆ ಉದ್ಯೋಗ ಸೃಷ್ಠಿಯಲ್ಲೂ ಹಿನ್ನಡೆಯತ್ತ ಸಾಗುತ್ತಿದೆ. ಹೊಸದಾಗಿ 100 ನಗರಗಳಲ್ಲಿ ಕೈಗಾರಿಕಾ ಪಾರ್ಕ್‌ಗೆ ಉತ್ತೇಜನ ನೀಡುತ್ತೇವೆ ಎನ್ನುವ ಯೋಜನೆ ಈಗಾಗಲೇ ವಿಫಲವಾಗಿರುವ 100 ಸ್ಮಾರ್ಟ್ ಸಿಟಿ ಯೋಜನೆಯ ದಾರಿ ಹಿಡಿಯದಿರಲಿ ಎಂದವರು ಹೇಳಿದ್ದಾರೆ. ಕರ್ನಾಟಕದಲ್ಲಿರುವ ಕೆಲವು ರಾಜ್ಯ ಹೆದ್ದಾರಿಗಳನ್ನು ಉನ್ನತೀಕರಿಸಿ, ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವುದನ್ನು ಕೇಂದ್ರ ಸರ್ಕಾರ ಮರೆತಿದೆ.

ರಾಜ್ಯಗಳ ಜಿ.ಎಸ್.ಟಿ. ಪಾಲನ್ನು ಬೇಡಿಕೆಗೆ ಅನುಗುಣವಾಗಿ ನೀಡುವುದರ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸಿಲ್ಲ. ಶಿಕ್ಷಣ ಮತ್ತು ಆರೋಗ್ಯದತ್ತ ಗಮನ ಹರಿಸಿಲ್ಲ. ಮಕ್ಕಳ ಕಾಳಜಿ, ಗ್ರಾಮೀಣ ನಿರುದ್ಯೋಗ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಣದ ಬಗ್ಗೆ ನಿರ್ಲಕ್ಷ್ಯ ತೋರಲಾಗಿದೆ.

ಕೃಷಿ ವಲಯದ ಅನುದಾನವನ್ನು ಕಳೆದ 5 ವರ್ಷಗಳಲ್ಲಿ 4.97% ನಿಂದ 2.74%ಗೆ ಇಳಿಸಿರುವುದು ರೈತರ ಬಗ್ಗೆ ಎನ್.ಡಿ.ಎ. ಸರ್ಕಾರಕ್ಕೆ ಕಾಳಜಿ ಇಲ್ಲದಿರುವುದು ತೋರುತ್ತದೆ. ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಹೇಳಿದ್ದು ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ ಎಂದು ಡಾ.ಪ್ರಭಾ ಟೀಕಿಸಿದ್ದಾರೆ.

## ಎಲೆಬೇತೂರಿನಲ್ಲಿ ಇಂದು ರಕ್ತದಾನ ಶಿಬಿರ

ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ವಿನಾಯಕ ಕಾನ್ವೆಂಟ್ ಶಾಲೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಕ್ತ ಕೇಂದ್ರ, ಚಿಗಟೇರಿ ಜಿಲ್ಲಾಸ್ಪತ್ರೆ ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಶಾಲಾ ಆವರಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯರಾದ ಜಿ.ಎಂ. ಲತಾ (9880962671) ತಿಳಿಸಿದ್ದಾರೆ.

## ಕರ್ತವ್ಯ ಲೋಪ : ಮುಖ್ಯ ಪೇದೆ ಅಮಾನತ್ತು

ದಾವಣಗೆರೆ, ಜು. 23- ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಕೆಟಿಜೆ ನಗರದ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಹೆಚ್.ತಿಪ್ಪೇಸ್ವಾಮಿ ಅವರನ್ನು ಅಮಾನತ್ತು ಮಾಡಲಾಗಿದೆ. ಗಾಂಜಾ ಸೇವನೆ ಮಾಡಿದ ಅನುಮಾನದ ಮೇರೆಗೆ ಠಾಣೆಗೆ ಕರೆದುಕೊಂಡು ಬಂದಿದ್ದ ವ್ಯಕ್ತಿ ತಪ್ಪಿಸಿಕೊಂಡು ಹೋಗಲು ಕಾರಣರಾಗುವ ಮೂಲಕ ಕರ್ತವ್ಯ ನಿರ್ಲಕ್ಷ್ಯ ತೋರಿದ್ದಕ್ಕಾಗಿ ಎಸ್ಪಿ ಉಮಾ ಪ್ರಶಾಂತ್ ಅವರು ಅಮಾನತ್ತು ಮಾಡಿ ಆದೇಶಿಸಿದ್ದಾರೆ.

# ಸರ್ವಾಂಗೀಣ ಅಭಿವೃದ್ಧಿಯ ಬಜೆಟ್

ಮುಂದಿನ 5 ವರ್ಷಗಳ ರಾಷ್ಟ್ರದ ಪ್ರಗತಿಗೆ ಈ ಬಜೆಟ್ ದಿಕ್ಸೂಚಿಯಾಗಿದ್ದು, ಕೃಷಿ, ಉದ್ಯೋಗ, ಕೌಶಲ್ಯಾಭಿವೃದ್ಧಿ, ಸಾಮಾ ಜಿಕ ನ್ಯಾಯ, ಉತ್ಪಾದನೆ, ಸೇವಾ ವಲಯ, ಮೂಲಸೌಕ ರ್ಯಾಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿದೆ. ಕೃಷಿ ವಲಯದ ಉತ್ಪಾದಕತೆ ಹೆಚ್ಚಳಕ್ಕೆ ಮತ್ತಷ್ಟು ಅನುಕೂಲ ಕಲ್ಪಿಸಲು 1.52 ಲಕ್ಷ ಕೋಟಿ ರೂ. ಮೀಸಲಿಡಲಾಗಿದೆ.

ಹಾಗೆಯೇ, ವೇತನ ಪಡೆಯುವ ಉದ್ಯೋಗಿಗಳಿಗೆ ನೆರವಾ ಗಲು ಹೊಸ ತೆರಿಗೆ ಪದ್ಧತಿಯಲ್ಲಿ, ಆದಾಯ ತೆರಿಗೆಯಲ್ಲಿ 17,500 ರೂ.ಗಳವರೆಗೆ ಉಳಿತಾಯವಾಗುವಂತೆ ಸುಧಾರಣೆ ತರಲಾಗಿದೆ. ದೇಶದ ಪ್ರತಿಯೊಬ್ಬ ನಾಗರಿಕ ನನ್ನು ಸಬಲೀಕರಣಗೊಳಿಸುವ ಮತ್ತು ಸಮೃದ್ಧ, ಸಶಕ್ತ ರಾಷ್ಟ್ರ ನಿರ್ಮಾಣದ ನಿಟ್ಟಿನಲ್ಲಿ ಸರ್ವಸ್ಪರ್ಶಿ, ಅಭಿವೃದ್ಧಿ ಪೂರಕ ಬಜೆಟ್ ಅನ್ನು ವಿತ್ತ ಸಚಿವರು ಮಂಡಿಸಿದ್ದಾರೆ.

ರೈಲ್ವೆಗೆ ಕೆಲವು ಉತ್ತಮ ಘೋಷಣೆಗಳನ್ನು ಮಾಡಿದರೆ. ಹೊಸ ರೈಲ್ವೆ ಮಾರ್ಗಕ್ಕೆ ಅನುದಾನ, ಹಳೆಯ ಘೋಷಣೆ ಮಾಡಿದ ಮಾರ್ಗಕ್ಕೆ ಹೆಚ್ಚಿನ ಅನುದಾನ ನೀಡಿದು ಹಾಗು ರೈಲು ಮಾರ್ಗ ವಿದ್ಯುದೀಕರಣಕೆ ಒತ್ತು ನೀಡಿದ್ದು ಒಳ್ಳೆಯ ಬೆಳವಣಿಗೆ, ನಮ್ಮ ದೇಶದ, ಪ್ರತಿ ಒಂಧು ರೈಲು ಮಾರ್ಗ ಇನ್ನು ಕೆಲವು ವರ್ಷಗಳಲ್ಲಿ ವಿದ್ಯುತಿಕರಣ ವಾಗಲಿದೆ , ಇದರಿಂದ ನಾವು ಡೀಸೆಲ್ ನಿಂದ ಆಗುವಂತಹ ಪರಿಸರ ಮಾಲಿನ್ಯವನ್ನು ತಡೆಗಟ್ಟಬಹುದು ಹಾಗು ಇದರಿಂದ ರೈಲ್ವೆ ತಗಲುವಂತ ಪ್ರತಿ ಕಿಲೋಮೀಟರ್, ಖರ್ಚು-ವೆಚ್ಚವನ್ನು ಕಡಿಮೆ ಮಾಡಬಹುದು ಹಾಗು ಯಾತ್ರಿ ಗಳಿಗೆ ರೈಲು ಪ್ರಯಾಣ ಕೂಡ ಸುಖಕರ ವಾಗಲಿದೆ.ಇದೊಂದು ತುಂಬಾ ಒಳ್ಳೆಯ ಬೆಳವಣಿಗೆ.



**- ರೋಹಿತ್ ಎಸ್ . ಜೈನ್,**
ಕಾರ್ಯದರ್ಶಿ, ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಸಂಘ, ದಾವಣಗೆರೆ

## ಅಣು ವಲಯದಲ್ಲಿ ಖಾಸಗಿ ಹೂಡಿಕೆಗೆ ಅವಕಾಶ

ನವದೆಹಲಿ, ಜು. 23 - ಅಣು ವಿದ್ಯುತ್ ವಲಯದಲ್ಲಿ ಖಾಸಗಿ ಹೂಡಿಕೆಗೆ ಅವಕಾಶ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಬಜೆಟ್ ಮಂಡನೆ ವೇಳೆ ಈ ಘೋಷಣೆ ಮಾಡಿರುವ ಅವರು, ಸಣ್ಣ ರಿಯಾಕ್ಟರ್‌ಗಳ ಸ್ಥಾಪನೆಗಾಗಿ ಖಾಸಗಿ ಸಹಭಾಗಿತ್ವ ಹೊಂದಲಾಗುವುದು ಎಂದು ಹೇಳಿದ್ದಾರೆ.

ಸಣ್ಣ ರಿಯಾಕ್ಟರ್ ವಲಯದ ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲೂ ಖಾಸಗಿ ಸಹಭಾಗಿತ್ವ ಪಡೆಯಲಾಗುವುದು. ಅಣು ಇಂಧನದ ತಂತ್ರಜ್ಞಾನದ ಸಂಶೋಧನೆಯಲ್ಲಿಯೂ ಸಹಭಾಗಿತ್ವಕ್ಕೆ ಅವಕಾಶ ನೀಡಲಾಗುವುದು ಎಂದು ಸಚಿವೆ ತಿಳಿಸಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಗಣೇಶ ಲೇಔಟ್, ಮನೋಮಿ ಲೇಔಟ್, ಆನಂದ್ ರೆಸಿಡೆನ್ಸಿ, ಕೆ.ಎಸ್.ಆರ್.ಟಿ.ಸಿ. ಬಸ್ಸ್ ಸ್ಟ್ಯಾಂಡ್, ಅಗ್ನಿ ಶಾಮಕ ಠಾಣೆ, ಈರುಳಿ ಮಾರ್ಕಟ್, ಎ.ಪಿ.ಎಂ.ಸಿ, ಬಿಲಾಲ್ ಕಾಂಪೌಂಡ್, ಲಾಯರ್‌ರೋಡ್, ಆಹಾರ-2000, ಹಳೆ ಪಿ.ಬಿ ರಸ್ತೆ, ಹನುಮಂತಪ್ಪ ಬಿಲ್ಡಿಂಗ್ ಹಾಗೂ ಸುತ್ತಮುತ್ತ ಲಿನ ಪ್ರದೇಶಗಳಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದ ಯುಬಿಡಿಟಿ ಕಾಲೇಜಿನಲ್ಲಿ ಇಂದು ಕಾರ್ಯಾಗಾರ

ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 9.30ಕ್ಕೆ ಸಿವಿಲ್ ವಿಭಾಗದಿಂದ ಸುಸ್ಥಿರ ಅಭಿವೃದ್ಧಿಗಾಗಿ ನೀರಿನ ನಿರ್ವಹಣೆ ಕುರಿತು ಕಾರ್ಯಾಗಾರ ನಡೆಯಲಿದೆ. ಅತಿಥಿಗಳಾಗಿ ಪಾಲಿಕೆ ಆಯುಕ್ತೆ ರೇಣುಕಾ, ಕೆಎಸ್‌ಪಿಎಸ್ ಪ್ರಾದೇಶಿಕ ಕಚೇರಿ ಅಧಿಕಾರಿ ಡಾ. ಹೆಚ್. ಲಕ್ಷ್ಮಿಕಾಂತ ಪಾಲ್ಗೊಳ್ಳಲಿದ್ದು, ಡಾ. ಡಿ.ಪಿ. ನಾಗರಾಜಪ್ಪ ಅಧ್ಯಕ್ಷತೆ ವಹಿಸಿಕೊಳ್ಳುತ್ತಾರೆ. ಡಾ. ಎಸ್. ಮಂಜಪ್ಪ, ಡಾ. ಹೆಚ್.ಎಮ್. ದಿವಾಕರ್ ಭಾಗವಹಿಸಲಿದ್ದಾರೆ.

# ಕೇಂದ್ರ ಬಜೆಟ್ : ತೆರಿಗೆಯಲ್ಲಾಗಿರುವ ಬದಲಾವಣೆಗಳು

ಬಜೆಟ್ 2024 ವಿಕಸಿತ್ ಭಾರತ್‌ಗೆ ಮುಂದಿನ ಪೀಳಿಗೆಯ ಸುಧಾರಣೆಗಳನ್ನು ಸೂಚಿಸುತ್ತದೆ. ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೊಡ್ಡ ಉದಯೋನ್ಮುಖ ಆರ್ಥಿಕತೆಯ ಟ್ಯಾಗ್ ಹೊಂದಿರುವ ಭಾರತದ ನಿರಂತರ ಬೆಳವಣಿಗೆಯ ಹಿನ್ನೆಲೆಯಲ್ಲಿ ಬಜೆಟ್ ಪ್ರಸ್ತಾವನೆಯನ್ನು ಘೋಷಿಸಲಾಗಿದೆ. ಅದರ ದೃಷ್ಟಿಕೋನಗಳ ಅನ್ವೇಷಣೆಗಾಗಿ ವಿವರವಾದ ಮಾರ್ಗಸೂಚಿಯು ಕೃಷಿ, ಉತ್ಪಾದನೆ, ಇಂಧನ ಮೂಲ ಸೌಕರ್ಯ ಮತ್ತು ಉದ್ಯೋಗಗಳು ಸೇರಿದಂತೆ 09 ಆದ್ಯತೆಗಳನ್ನು ಒಳಗೊಂಡಿದೆ.

**ಜಿಎಸ್‌ಟಿ**

ತೆರಿಗೆಯ ಮುಂಭಾಗದಲ್ಲಿ, ಜಿಎಸ್‌ಟಿ ಪರಿಚಯದ ಯಶಸ್ಸನ್ನು ಪ್ರಸ್ತಾವನೆಗಳು ಗುರುತಿಸಿವೆ, ಇದು ಸಂಗ್ರಹಣೆಯಲ್ಲಿ ತೇಲುವಿಕೆ, ತೆರಿಗೆ ಮೂಲವನ್ನು ವಿಸ್ತರಿಸುವುದು ಮತ್ತು ಕಡಿಮೆ ಅನುಸರಣೆಗಳಿಗೆ ಕಾರಣವಾಗುತ್ತದೆ. ಜಿಎಸ್‌ಟಿ ತೆರಿಗೆ ರಚನೆಯ ಸರಳೀಕರಣ ಮತ್ತು ತರ್ಕಬದ್ಧಗೊಳಿಸುವಿಕೆಯು ಜಿಎಸ್‌ಟಿ ಕೌನ್ಸಿಲ್‌ಗಳ ಕಾರ್ಯಸೂಚಿಯ ಭಾಗವಾಗಿ ಮುಂದುವರಿಯುವ ಸಾಧ್ಯತೆಯಿದೆ. ಸ್ವಾಗತಾರ್ಹ ಹಂತದಲ್ಲಿ, ತರ್ಕಬದ್ಧಗೊಳಿಸುವ, ದೇಶಿಯ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ವಿವಾದಗಳನ್ನು ತಗ್ಗಿಸುವ ಗುರಿಯೊಂದಿಗೆ ಮುಂದಿನ ಆರು ತಿಂಗಳುಗಳಲ್ಲಿ ಕಸ್ಟಮ್ಸ್ ಸುಂಕದ ದರ ರಚನೆಯ ಸಮಗ್ರ ಪರಿಶೀಲನೆಯನ್ನು ಬಜೆಟ್ ಘೋಷಿಸಿತು.

ಜಿಎಸ್‌ಟಿ ಕಾಯಿದೆ, 2017 ರಲ್ಲಿನ ತಿದ್ದುಪಡಿಗಳು ಅನುಕರಣೆಯನ್ನು ಸರಳಗೊಳಿಸುವ, ಉದ್ದೇಶಿತ ಪರಿಹಾರವನ್ನು ಒದಗಿಸುವ ಮತ್ತು ನ್ಯಾಯಯುತ ತೆರಿಗೆ ಆಡಳಿತವನ್ನು ಖಚಿತಪಡಿಸಿಕೊಳ್ಳುವ ಕಾರ್ಯತಂತ್ರದ ಪ್ರಯತ್ನವನ್ನು ಸೂಚಿಸುತ್ತವೆ. ಹೆಚ್ಚುವರಿ ನ್ಯೂಟ್ರಲ್ ಆಲ್ಕೋಹಾಲ್ ಅನ್ನು ಕೇಂದ್ರ ತೆರಿಗೆ ಹೊರಗಿಡುವುದು ಆಲ್ಕೋಹಾಲುಯುಕ್ತ ಪಾನೀಯಗಳ ಉದ್ಯಮದ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ, ಆದರೆ ಹೊಸ ವಿಭಾಗ 11 ಎ ಪಾರದರ್ಶಕತೆಯನ್ನು ಹೆಚ್ಚಿಸುವ ಮೂಲಕ ಲೆವಿ ಅಥವಾ ಶಾರ್ಟ್ ಲೆವಿ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಪರಿಚ್ಛೇದ 13(3) ಮತ್ತು 16(5) ತಿದ್ದುಪಡಿಗಳು ರಿವರ್ಸ್ ಚಾರ್ಜ್ ಪೂರೈಕೆಗಳಿಗೆ ಇನ್‌ವಾಯ್ಸ್‌ಲ್ಲಿ ಸ್ಪಷ್ಟತೆಯನ್ನು ಒದಗಿಸುತ್ತವೆ. ಮತ್ತು ಕಳೆದ ಹಣಕಾಸು ವರ್ಷಗಳಲ್ಲಿ ಕ್ರಮವಾಗಿ ನವೆಂಬರ್ 2021 ರ ವರೆಗೆ ಐಟಿಸಿ ಕ್ಲೈಮ್‌ಗಳನ್ನು ಉತ್ತಮ ಅನುಸರಣೆಯನ್ನು ಉತ್ತೇಜಿಸುತ್ತವೆ. ಸೆಕ್ಷನ್ 16(6) ವ್ಯವಹಾರಗಳು ಐಟಿಸಿ ನೊಂದಣಿ ನಂತರದ ಹಿಂಪಡೆಯುವಿಕೆಯನ್ನು ಕ್ಲೈಮ್ ಮಾಡಬಹುದೆಂದು ಖಚಿತಪಡಿಸುತ್ತದೆ. ಸೆಕ್ಷನ್ 107(6) ನಲ್ಲಿ ಮೇಲ್ಮನವಿಗಾಗಿ ಪೂರ್ವ ಠೇವಣಿ ಕಡಿಮೆ ಮಾಡುವ ಮೂಲಕ, ವ್ಯವಹಾರಗಳಿಗೆ, ವಿಶೇಷವಾಗಿ ಎಸ್‌ಎಂಇ ಗಳಿಗೆ ಹಣಕಾಸಿನ ಅಡೆತಡೆಗಳು ಕಡಿಮೆಯಾಗುತ್ತವೆ.

ಜಿಎಸ್‌ಟಿ ಮುಂಭಾಗದಲ್ಲಿ ಬೇಡಿಕೆ ಮತ್ತು ಮರುಪಡೆಯುವಿಕೆಗೆ ಸಂಬಂಧಿಸಿದಂತೆ ನಿಬಂಧನೆಗಳನ್ನು ಸಿಜಿಎಸ್‌ಟಿ ಕಾಯ್ದೆಯಲ್ಲಿ ಹೊಸ ನಿಯಮ 74ಎ ವಿಲೀನಗೊಳಿಸಲಾಗಿದೆ ಮತ್ತು ಎಫ್‌ವೈ 2024-25 ರಿಂದ ಬೇಡಿಕೆಗಳಿಗೆ ಸಂಬಂಧಿಸಿದಂತೆ ಬೇಡಿಕೆ ಸೂಚನೆಗಳು ಮತ್ತು ಆದೇಶಗಳ ವಿತರಣೆಗೆ ಸಾಮಾನ್ಯ ಸಮಯ ಮಿತಿಯನ್ನು ಒದಗಿಸುತ್ತದೆ. ಜಿಎಸ್‌ಟಿ ಕೌನ್ಸಿಲ್‌ನ ಇತ್ತೀಚಿಗೆ ಮುಕ್ತಾಯಗೊಂಡ 53ನೇ ಸಭೆಯಲ್ಲಿ ಶಿಫಾರಸ್ಸುಗಳನ್ನು ಜಾರಿಗೆ ತರಲು ಇತರೆ ಶಾಸಕಾಂಗ ಬದಲಾವಣೆಗಳನ್ನು ಪ್ರಸ್ತಾಪಿಸಲಾಗಿದೆ. ಒಂದು ಪ್ರಸ್ತಾವಿತ ಬದಲಾವಣೆ, ಶಿಫಾರಸ್ಸುಗಳ ಒಂದು ಭಾಗ, ನೋಂದಣಿ ರದ್ದತಿಯ ಅವಧಿಯಲ್ಲಿ ಇನ್‌ವಾಯ್ಸ್‌ಗಳು ಅಥವಾ ಡೆಬಿಟ್ ನೋಟುಗಳ ಇನ್‌ಪುಟ್ ತೆರಿಗೆ ಕ್ರೆಡಿಟ್‌ನ್ನು ಅನುಮತಿಸುವುದು, ನಿಗದಿತ ಅವಧಿಯೊಳಗೆ ರಿಟರ್ನ್ ಸಲ್ಲಿಸುವ ಮೂಲಕ ಮೂಲಕ ಅದನ್ನು ರದ್ದುಗೊಳಿಸಲಾಗುತ್ತದೆ. ವಂಚನೆ, ಉದ್ದೇಶಪೂರ್ವಕ ತಪ್ಪು ಹೇಳಿಕೆ ಅಥವಾ ನಿಗ್ರಹದ ನಿರಂತರ ಆರೋಪದ ಪರಿಣಾಮವಾಗಿ ತೆರಿಗೆಯನ್ನು ಪಾವತಿಸಿದ ಇನ್‌ಪುಟ್ ತೆರಿಗೆ ಕ್ರೆಡಿಟ್ ಮೇಲಿನ ನಿರ್ಬಂಧವನ್ನು ತೆಗೆದುಹಾಕುವುದನ್ನು ತೆರಿಗೆದಾರರು ಸ್ವಾಗತಿಸಬೇಕು ಅಥವಾ ಸಾಗಣೆಯಲ್ಲಿ ಸರಕುಗಳ ಬಂಧನ ಮತ್ತು ವಶಪಡಿಸಿಕೊಳ್ಳುವ ಸಮಯದಲ್ಲಿ ಪಾವತಿಸಲಾಗುತ್ತದೆ.

**ಕಸ್ಟಮ್ಸ್**

ಕಸ್ಟಮ್ಸ್ ದೃಷ್ಟಿಕೋನದಿಂದ ಬಜೆಟ್ ಘಟನಾತ್ಮಕವಾಗಿತ್ತು. ಮೊಬೈಲ್ ಫೋನ್‌ಗಳು, ಚಾರ್ಜರ್‌ಗಳು, ಚಿನ್ನ, ಬೆಳ್ಳಿ, ಸಾಗರ ರಫ್ತುಗಳಂತಹ ವಿವಿಧ ಉತ್ಪನ್ನಗಳಿಗೆ ಮೂಲ ಕಸ್ಟಮ್ಸ್ ಸುಂಕದಲ್ಲಿ (BCD) ಕಡಿತ ಮತ್ತು ಕ್ಯಾನ್ಸರ್ ಔಷಧಿಗಳು ಮತ್ತು ನಿರ್ಣಾಯಕ ಖನಿಜಗಳಿಗೆ ವಿನಾಯಿತಿಗಳನ್ನು ದೇಶೀಯ ತಯಾರಕರನ್ನು ಉತ್ತೇಜಿಸಲು ಪರಿಚಯಸಲಾಗಿದೆ. ಹೆಚ್ಚುವರಿಯಾಗಿ, ರಿಪೇರಿಗಾಗಿ ಆಮದು ಮಾಡಿಕೊಳ್ಳಲಾದ ವಿದೇಶಿ ಮೂಲದ ಸರಕುಗಳನ್ನು ಮರು-ರಫ್ತು ಮಾಡುವ ಸಮಯದ ಮಿತಿಯನ್ನು ಆರು ತಿಂಗಳಿಂದ ಒಂದು ವರ್ಷಕ್ಕೆ ವಿಸ್ತರಿಸುವುದು, ಇನ್ನೊಂದು ವರ್ಷದ ವಿಸ್ತರಣೆಯೊಂದಿಗೆ, ಬಂಡವಾಳ-ತೀವ್ರ ವಲಯಗಳಿಗೆ ಪರಿಹಾರವಾಗಿದೆ.

**ಇನ್‌ಕಮ್ ಟ್ಯಾಕ್ಸ್**


ವೈಯಕ್ತಿಕ ತೆರಿಗೆಗೆ ಸಂಬಂಧಿಸಿದಂತೆ, ಬಜೆಟ್ ಸ್ಲ್ಯಾಬ್ ದರಗಳನ್ನು ಪರಿಷ್ಕರಿಸುವ ಮೂಲಕ ಹೊಸ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳುವುದನ್ನು ಉತ್ತೇಜಿಸುತ್ತದೆ, ಇದರ ಪರಿಣಾಮವಾಗಿ INR 17,500 ವರೆಗೆ ಸಂಭಾವ್ಯ ತೆರಿಗೆ ಉಳಿತಾಯವಾಗುತ್ತದೆ. ಇದಲ್ಲದೆ, INR 25,000 ರಷ್ಟು ಪ್ರಮಾಣಿತ ಕಡಿತದಲ್ಲಿ ಹೆಚ್ಚಳ ಮತ್ತು ಕುಟುಂಬ ಪಿಂಚಣಿ ಮೇಲಿನ INR 10,000 ಹೆಚ್ಚುವರಿ ಕಡಿತವು ವ್ಯಕ್ತಿಗಳ ಕೈಯಲ್ಲಿ ಹೆಚ್ಚಿನ ಬಿಸಾಡಬಹುದಾದ ಆದಾಯಕ್ಕೆ ಕಾರಣವಾಗುತ್ತದೆ.

ಕಾರ್ಪೊರೇಟ್ ತೆರಿಗೆಗಳ ಮುಂಭಾಗದಲ್ಲಿ, ಸೆಕ್ಷನ್ 115BAB ಅಡಿಯಲ್ಲಿ ನೋಂದಾಯಿಸಲಾದ ಅರ್ಹ ಉತ್ಪಾದನಾ ಘಟಕಗಳಿಗೆ 31 ಮಾರ್ಚ್ 2024 ರ ನಂತರ ಸೂರ್ಯಾಸ್ತದ ಷರತ್ತು ವಿಸ್ತರಣೆಯ ಜನಪ್ರಿಯ ನಿರೀಕ್ಷೆಯನ್ನು ಪೂರೈಸಲಾಗಿಲ್ಲ. ಇದಲ್ಲದೆ, 2024 ರ ಅಕ್ಟೋಬರ್ 01 ರಿಂದ ಪ್ರಾರಂಭವಾಗುವ ಬೈ ಬ್ಯಾಕ್ ತೆರಿಗೆಯನ್ನು ಬಜೆಟ್ ರದ್ದುಗೊಳಿಸಿತು, ನಂತರ ಖರೀದಿಯ ಆದಾಯವನ್ನು ಷೇರುದಾರರ ಕೈಯಲ್ಲಿ ಲಾಭಾಂಶವಾಗಿ ತೆರಿಗೆ ವಿಧಿಸಲಾಗುತ್ತದೆ ಮತ್ತು ಭವಿಷ್ಯದ ಬಂಡವಾಳ ಲಾಭಗಳ ವಿರುದ್ಧ ಕ್ಯಾರಿ ಫಾರ್ವರ್ಡ್ ಮತ್ತು ಸೆಟ್- ಆಫ್‌ಗೆ ಅನುಗುಣವಾದ ವೆಚ್ಚ ಲಭ್ಯವಿದೆ.

ಅಂತರರಾಷ್ಟ್ರೀಯ ತೆರಿಗೆ ಮುಂಭಾಗದಲ್ಲಿ, ಸ್ವಾಗತಾರ್ಹ ಕ್ರಮದಲ್ಲಿ, ವಿದೇಶಿ ಕಂಪನಿಗಳಿಗೆ ಅನ್ವಯವಾಗುವ ಕಾರ್ಪೊರೇಟ್ ತೆರಿಗೆ ದರವನ್ನು 40% ರಿಂದ 35% ಕ್ಕೆ ಇಳಿಸಲು ಪ್ರಸ್ತಾಪಿಸಲಾಗಿದೆ. ವಿದೇಶಿ ಇ-ಕಾಮರ್ಸ್ ಆಪರೇಟ್‌ಗಳ ಮೇಲಿನ ತೆರಿಗೆ ಹೊರೆಯನ್ನು ಸರಳಗೊಳಿಸುವ ಸಲುವಾಗಿ, 2% ರ ಸಮೀಕರಣ ಲೆವಿಯನ್ನು ರದ್ದುಗೊಳಿಸಲು ಪ್ರಸ್ತಾಪಿಸಲಾಗಿದೆ.

ಕೊನೆಯದಾಗಿ, ಆದಾಯ ತೆರಿಗೆ ಕಾಯಿದೆ, 1961 ಅನ್ನು ಹೆಚ್ಚು ಸಂಕ್ಷಿಪ್ತ, ಸ್ಪಷ್ಟ ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳಲು ಹಣಕಾಸು ಸಚಿವರು ಆರು ತಿಂಗಳೊಳಗೆ ಕಾಯಿದೆಯ ಸಮಗ್ರ ಪರಿಶೀಲನೆಯನ್ನು ಘೋಷಿಸಿದ್ದಾರೆ.

50 ಲಕ್ಷಕ್ಕಿಂತ ಹೆಚ್ಚು ಆದಾಯದಿಂದ ತಪ್ಪಿಸಿಕೊಳ್ಳುವ ಮೌಲ್ಯಮಾಪನದ ಪ್ರಕರಣಗಳಿಗೆ ಸಂಬಂಧಿಸಿದಂತೆ ಮರು-ಮೌಲ್ಯಮಾಪನದ ಮಿತಿಯ ಅವಧಿಯನ್ನು ಅಸ್ತಿತ್ವದಲ್ಲಿರುವ 10 ವರ್ಷಗಳಿಂದ 05 ವರ್ಷಗಳಿಗೆ ಕಡಿಮೆ ಮಾಡುವುದು ಮತ್ತೊಂದು ಆಟದ ಬದಲಾವಣೆಯ ಪ್ರಸ್ತಾಪವಾಗಿದೆ.



**- ಹೆಚ್.ಟಿ. ಸುಧೀಂದ್ರರಾವ್,**
ಅಧ್ಯಕ್ಷರು, ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘ

# ರಾಜ್ಯದ ಯಾವ ಬೇಡಿಕೆಗೂ ಮನ್ನಣೆ ನೀಡದ ಬಜೆಟ್

**(1ನೇ ಪುಟದಿಂದ)** ಸಿದ್ದರಾಮಯ್ಯ ಹೇಳಿದರು.

ಕಲ್ಯಾಣ ಕರ್ನಾಟಕ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಈ ವರ್ಷ 5 ಸಾವಿರ ಕೋಟಿ ರೂ. ಅನುದಾನ ಒದಗಿಸುತ್ತಿದೆ. ಆದರೆ ಇದಕ್ಕೆ ಪೂರಕವಾಗಿ ಹಿಂದುಳಿದ ತಾಲ್ಲೂಕುಗಳಿಗೆ ಅನುದಾನ ಒದಗಿಸುವಂತೆ ಮನವಿ ಮಾಡಲಾಗಿತ್ತು. ಇದೇ ರೀತಿ ಮಹಾದಾಯಿ ಯೋಜನೆ, ಮೇಕೆದಾಟು ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆಗಳ ಕುರಿತು ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪ ಮಾಡದೆ ರೈತರಿಗೆ ಮೋಸ ಮಾಡಿದ್ದಾರೆ ಎಂದರು.

15 ನೇ ಹಣಕಾಸು ಆಯೋಗದ ಶಿಫಾರಸಿನಂತೆ ಪೆರಿಫೆರಲ್ ರಸ್ತೆ ನಿರ್ಮಾಣ, ಕೆರೆಗಳ ಅಭಿವೃದ್ಧಿ, ಬೆಂಗಳೂರು ನಗರಾಭಿವೃದ್ಧಿ ಯೋಜನೆಗಳಿಗೆ ಒಟ್ಟು 11,485 ಕೋಟಿ ರೂ. ಅನುದಾನವನ್ನು ನೀಡುವಂತೆ ಕೋರಲಾಗಿತ್ತು. ಜೊತೆಗೆ ಹಲವಾರು ವರ್ಷಗಳಿಂದ ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸುವಂತೆ ಬೇಡಿಕೆಯಿದ್ದು, ಬಜೆಟ್ ಪೂರ್ವಭಾವಿ ಸಭೆಯಲ್ಲಿಯೂ ಈ ಕುರಿತು ಬೇಡಿಕೆ ಸಲ್ಲಿಸಲಾಗಿತ್ತು. ಈ ಯಾವ ಮನವಿಗಳಿಗೂ ಕೇಂದ್ರ ಸರ್ಕಾರ ಮನ್ನಣೆ ನೀಡಿಲ್ಲ ಎಂದು ಹೇಳಿದರು.

ಈ ಹಿಂದಿನ ಬಜೆಟ್‌ನಲ್ಲಿ ರಾಜ್ಯಕ್ಕೆ ಘೋಷಿಸಿದ್ದ ಯೋಜನೆಗಳಿಗೇ ಕೇಂದ್ರ ಸರ್ಕಾರ ಇನ್ನೂ ಯಾವುದೇ ಅನುದಾನ ಒದಗಿಸಿಲ್ಲ. ಹೀಗಾಗಿ ಈ ಬಾರಿ ಕೈಗಾರಿಕಾ ಕಾರಿಡಾರ್ ಬಗ್ಗೆ ಪ್ರಸ್ತಾಪಿಸಿರುವುದು ಕೇವಲ ಘೋಷಣೆಯಾಗಿ ಮಾತ್ರ ಉಳಿಯಲಿದೆ ಎಂದರು.

ಈ ಬಜೆಟ್ ಜನ ವಿರೋಧಿಯಾಗಿದ್ದು, ವಿಶೇಷವಾಗಿ ಬಡವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ.

ಈ ಬಜೆಟ್‌ನಲ್ಲಿ ರೈತರಿಗೆ ದೊಡ್ಡ ಅನ್ಯಾಯ ಮಾಡಿದ್ದಾರೆ. ರೈತರು 5 ವರ್ಷಗಳಿಂದ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ರಚಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದರೆ ಈ ಬಗ್ಗೆ ಬಜೆಟ್‌ನಲ್ಲಿ ಚಕಾರವನ್ನೇ ಎತ್ತಿಲ್ಲ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳ ಜಾರಿ ಬಗ್ಗೆಯೂ ಯಾವುದೇ ಮಾತು ಆಡದೆ ರೈತರಿಗೆ ಪಂಗನಾಮ ಹಾಕಿದೆ ಎಂದು ಹೇಳಿದರು.

ಕೇಂದ್ರ ಸಂಪುಟದಲ್ಲಿ ರಾಜ್ಯದ ಐದು ಜನ ಸಚಿವರಾಗಿದ್ದರೂ, ರಾಜ್ಯಕ್ಕೆ ಯಾವುದೇ ಪ್ರಯೋಜನವಾಗಿಲ್ಲ. ಈ ಐದೂ ಮಂದಿ ರಾಜ್ಯಕ್ಕೆ ಅನುಕೂಲ ಮಾಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಟೀಕಿಸಿದರು.

ಆರೋಗ್ಯ, ರಕ್ಷಣೆ, ಆರೋಗ್ಯ, ಐಟಿ ಮತ್ತು ಸಂವಹನ ಕ್ಷೇತ್ರಗಳಿಗೆ ಕಳೆದ ಫೆಬ್ರವರಿಯಲ್ಲಿ ಮಂಡಿಸಲಾಗಿದ್ದ ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನವನ್ನು ಈಗ ಕಡಿತಗೊಳಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಅಭಿವೃದ್ಧಿಗೆ ಅನುದಾನದಲ್ಲೂ ಗಣನೀಯವಾಗಿ ಕಡಿತಗೊಳಿಸಿರುವುದು ಈ ಸಮುದಾಯಗಳಿಗೆ ಎಸಗಿರುವ ದ್ರೋಹವಾಗಿದೆ ಎಂದರು.

ಕೇಂದ್ರದ 16 ನೇ ಹಣಕಾಸು ಆಯೋಗವು ಆಗಸ್ಟ್ 28 ರಂದು ರಾಜ್ಯಕ್ಕೆ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ಹಿಂದಿನ ಬಾರಿ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಮನವಿ ಮಾಡಲಾಗುವುದು. ಈ ಕುರಿತು ಸಮರ್ಥವಾಗಿ ವಿಷಯ ಮಂಡಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.



WE HAVE ENDLESS CHOICES
FREE COMPUTERIZED EYE TESTING
By Qualified Optometrist
SOUTH INDIA OPTICALS
Near Ram & Co Circle, Beside Bank of Baroda,
P.J. Extension, Davanagere ✆ 08192-231432 • 08192-462073

ಶ್ರೀ ಕಾಮಧೇನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,
# 266, 1ನೇ ಮಹಡಿ, 1ನೇ ಮುಖ್ಯರಸ್ತೆ, ದಿ ಭಾರತ್ ಸ್ಪೌಟ್ಸ್ ಮತ್ತು ಗೈಡ್ಸ್ ಬಿಲ್ಡಿಂಗ್, ಪಿಜೆ ಎಕ್ಸ್‌ಟೆನ್ಷನ್, ದಾವಣಗೆರೆ-566 002.
ಸೊಸೈಟಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ನಿರ್ವಹಿಸಲು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವವುಳ್ಳ ಮಹಿಳಾ ಅಭ್ಯರ್ಥಿಬೇಕಾಗಿದ್ದಾರೆ. (ವಿದ್ಯಾರ್ಹತೆ : ಯಾವುದೇ ಪದವಿ) ಅನುಭವವುಳ್ಳವರಿಗೆ ಮೊದಲ ಆದ್ಯತೆ. ಆಸಕ್ತಿವುಳ್ಳವರು ಮೇಲಿನ ಕಛೇರಿಯ ವಿಳಾಸಕ್ಕೆ ತಮ್ಮ ಬಯೋಡೇಟಾ ಕೊಟ್ಟು ಹೇಳಿದ ಸಮಯಕ್ಕೆ ಸಂದರ್ಶನಕ್ಕೆ ಹಾಜರಾಗುವುದು.
ಸಂದರ್ಶನ ದಿನಾಂಕ : 25.07.2024, ಸಮಯ : ಬೆಳಗ್ಗೆ. 11.00
ಸಂಪರ್ಕಿಸಿ : ಫೋ. : 74113 41218

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಬೆಂಗಳೂರು.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
ಚಾರ್‌ಧಾಮ್ ವಿಶೇಷ ಯಾತ್ರೆ SEPT OCT
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ*)
ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ದೋಧಾಮ್ ವಿಶೇಷ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕೇದಾರ್‌ನಾಥ್, ಬದರಿನಾಥ್ OCT
ವೈಷ್ಣೋದೇವಿ, ಕುಲುಮನಾಲಿ, ಆಗ್ರಾ, ಮಥುರಾ ಪ್ರವಾಸ
ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್, ವಾಘಾ ಬಾರ್ಡರ್, ದೆಹಲಿ, ಆಗ್ರಾ, ಕುರುಕ್ಷೇತ್ರ
NOV ಕಾಶಿ ಯಾತ್ರೆ
ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,
DEC ರಾಮೇಶ್ವರಂ ಯಾತ್ರೆ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

## ಗ್ರಾಮೀಣ ಜಮೀನಿಗೆ ಭೂ-ಆಧಾರ್

ನವದೆಹಲಿ, ಜು. 23 - ಜಮೀನಿಗೂ ಸಹ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಭೂ ಆಧಾರ್ ಯೋಜನೆಯನ್ನು ಗ್ರಾಮೀಣ ಭಾಗದಲ್ಲಿ ಜಾರಿಗೆ ತರಲು ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ. ಇದೇ ವೇಳೆ ನಗರ ಪ್ರದೇಶಗಳ ಎಲ್ಲಾ ಭೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ನಿರ್ಧರಿಸಲಾಗಿದೆ.

ಬಜೆಟ್ ಮಂಡನೆ ವೇಳೆ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸುಧಾರಣೆ ತರಲು ರಾಜ್ಯಗಳ ಜೊತೆಗೂಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ವಿತ್ತೀಯ ಬೆಂಬಲ ನೀಡುವ ಮೂಲಕ ಮುಂದಿನ ಮೂರು ವರ್ಷಗಳಲ್ಲಿ ಈ ಸುಧಾರಣೆಗಳನ್ನು ಜಾರಿಗೆ ತರಲಾಗುವುದು ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಶೇ.2ರ ಡಿಜಿಟಲ್ ತೆರಿಗೆ ರದ್ದು

ನವದೆಹಲಿ, ಜು. 23 - ಅನಿವಾಸಿ ಇ-ವಾಣಿಜ್ಯ ಪೂರೈಕೆದಾರರ ಮೇಲೆ ಹೇರಲಾಗುತ್ತಿದ್ದ ಶೇಕಡಾ ಎರಡರ ಡಿಜಿಟಲ್ ತೆರಿಗೆಯನ್ನು ವಾಪಸ್ ಪಡೆಯುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ.

ಸಮಾನತೆಯ ಸುಂಕ ಎಂದು ಹೇಳಲಾಗುತ್ತಿದ್ದ ಶೇಕಡಾ ಎರಡರ ತೆರಿಗೆ ಆಗಸ್ಟ್ 1, 2024 ರಿಂದ ಅನ್ವಯವಾಗುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

# ನಗರಕ್ಕೆ 3 ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲು ಒತ್ತಾಯ



### ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಪಾಲಿಕೆ ಬಿಜೆಪಿ ಸದಸ್ಯರ ನಿಯೋಗ

ದಾವಣಗೆರೆ, ಜು. 23- ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕರು, ಉಪ ಮಹಾಪೌರರ ನೇತೃತ್ವದಲ್ಲಿ ಬಿಜೆಪಿ ಸದಸ್ಯರ ನಿಯೋಗವು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ, ಪಾಲಿಕೆಯ ಹಲವಾರು ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ನಿರ್ಮಾಣಗೊಂಡು, ಉದ್ಘಾಟನೆಯಾಗಿ ಒಂದು ವರ್ಷ ಕಳೆದರೂ ಕೂಡ ಖಾಸಗಿ ಬಸ್ ನಿಲ್ದಾಣವನ್ನು ಸ್ಥಳಾಂತರಿಸಲು ಪಾಲಿಕೆ ಕ್ರಮ ಕೈಗೊಂಡಿರುವುದಿಲ್ಲ. ಕೂಡಲೇ ಖಾಸಗಿ ಬಸ್ ನಿಲ್ದಾಣ ಮತ್ತು ಕೆಎಸ್ಆರ್‌ಟಿಸಿ ಬಸ್ ನಿಲ್ದಾಣಗಳನ್ನು ಹೈಸ್ಕೂಲ್ ಮೈದಾನದಿಂದ ನೂತನವಾಗಿ ನಿರ್ಮಾಣಗೊಂಡಿರುವ ಬಸ್ ನಿಲ್ದಾಣಗಳಿಗೆ ಸ್ಥಳಾಂತರಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು, ಯೋಜನೆಯಿಂದ ನಿರ್ಮಾಣಗೊಂಡ ಕಟ್ಟಡಗಳನ್ನು ಉಪಯೋಗಿಸಿಕೊಳ್ಳುವವರಿಗೆ ಸೂಕ್ತ ನಿರ್ದೇಶನ ನೀಡಲು ಮನವಿ ಮಾಡಿದರು.

ಈಗಾಗಲೇ ಎರಡು ಬಾರಿ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ. ಈ ಹಿಂದೆ ಇದ್ದಂತಹ ಜಿಲ್ಲಾಧಿಕಾರಿಗಳಿಗೂ ಮನವಿ ನೀಡಿ ಜಲಸಿರಿಯ ಕಾಮಗಾರಿ ಪೂರ್ಣಗೊಂಡು, ಸಮರ್ಪಕ ನೀರು ವಿತರಣೆ ಆಗುವವರೆಗೂ ಜಲಸಿರಿ ಯೋಜನೆಯಡಿ ಬಿಲ್ ವಿತರಿಸುತ್ತಿದ್ದು, ಸಾರ್ವಜನಿಕರಿಗೆ ನೀಡಬಾರದು ಎಂದು ಮನವಿ ಮತ್ತು ಪ್ರತಿಭಟನೆ ಮೂಲಕ ಆಗ್ರಹಿಸಿರುವ ಬಗ್ಗೆ ಜಿಲ್ಲಾಧಿಕಾರಿ ಗಮನಕ್ಕೆ ತರಲಾಯಿತು.

ಬಿಲ್ ನೀಡದರಿರುವಂತೆ ಪಾಲಿಕೆಗೆ ಸೂಕ್ತ ನಿರ್ದೇಶನ ನೀಡಬೇಕು. ಕುಡಿಯುವ ನೀರಿನ ವಿತರಣೆಯಲ್ಲೂ ವಿಳಂಬವಾಗುತ್ತಿದ್ದು, ಮಳೆಗಾಲದಲ್ಲೂ ನೀರನ್ನು ವಿತರಿಸುವಲ್ಲಿ ವಿಫಲವಾಗಿದೆ ಎಂದು ದೂರಿದರು.

ಮೂರು ದಿನಗಳಿಗೊಮ್ಮೆ ನೀರು ಸರಬರಾಜು ಮಾಡುಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಿಯೋಗದ ಸದಸ್ಯರು ಒತ್ತಾಯಿಸಿದರು.

ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಮುಂದಿನ ದಿನಗಳಲ್ಲಿ ಈ ಎಲ್ಲಾ ವಿಭಾಗವಾರು ಮತ್ತು ಪಾಲಿಕೆಯ ಎಲ್ಲಾ ಅನುಷ್ಠಾನ ಹಂತದಲ್ಲಿ ಇರುವ ಮತ್ತು ಅನುಷ್ಠಾನಗೊಳಿಸಬೇಕಾಗಿರುವ ಕಾಮಗಾರಿಗಳು ಹಾಗೂ ಅಭಿವೃದ್ಧಿ ದೃಷ್ಟಿಯಿಂದ ಆಗಬೇಕಾದ ಯೋಜನೆಗಳ ಕುರಿತು ವಿಭಾಗವಾರು ಸಭೆ ಕರೆಯುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಉಪ ಮೇಯರ್ ಯಶೋಧ ಹೆಗ್ಗಪ್ಪ, ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಗಾಯತ್ರಿ ಬಾಯಿ ಖಂಡೋಜಿರಾವ್, ಗೌರಮ್ಮ ಗಿರೀಶ್, ಕೆ.ಎಂ. ವೀರೇಶ್, ಮುಖಂಡರಾದ ಸುರೇಶ್, ಜಯಪ್ರಕಾಶ್ ಇದ್ದರು.



ಭರ್ತಿಯಾಗಿರುವ ದೇವರಬೆಳಕೆರೆ ಪಿಕಪ್ ಡ್ಯಾಮ್‌ಗೆ ಮುಸ್ಸಂಜೆಯ ಸ್ಪರ್ಶ...

## ಮಹಿಳೆ, ಮಕ್ಕಳ ಯೋಜನೆಗಳಿಗೆ 3 ಲಕ್ಷ ಕೋಟಿ ರೂ.

ನವದೆಹಲಿ, ಜು. 23 - ಮಹಿಳೆಯರು ಹಾಗೂ ಮಕ್ಕಳ ನೆರವಿನ ಯೋಜನೆಗಳಿಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಮೂರು ಲಕ್ಷ ಕೋಟಿ ರೂ. ಒದಗಿಸಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಬಜೆಟ್ ಮಂಡನೆ ವೇಳೆ ಮಾತನಾಡಿದ ಸೀತಾರಾಮನ್, ಮಹಿಳಾ ಕೇಂದ್ರಿತ ಅಭಿವೃದ್ಧಿ ಯೋಜನೆಗಳಿಗೆ ಮೂರು ಲಕ್ಷ ಕೋಟಿ ರೂ. ಒದಗಿಸಲಾಗಿದೆ ಎಂದು ಹೇಳಿದರು.

# ವಾಲ್ಮೀಕಿ ನಿಗಮ ಹಗರಣ ಸಿಬಿಐಗೆ ವರ್ಗಾಯಿಸಿ

### ಹೈಕೋರ್ಟ್ ಮೆಟ್ಟಿಲೇರಿದ ಯೂನಿಯನ್ ಬ್ಯಾಂಕ್

ಬೆಂಗಳೂರು, ಜು. 23- ವಾಲ್ಮೀಕಿ ನಿಗಮದ ಹಗರಣದ ತನಿಖೆ ಯನ್ನು ಎಸ್ಐಟಿಯಿಂದ ಸಿಬಿಐಗೆ ವರ್ಗಾವಣೆ ಮಾಡುವಂತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದೆ.

ಪ್ರಕರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರ ಎಫ್ಐಆರ್ ದಾಖಲು ಮಾಡಿದ ಬೆನ್ನಲ್ಲೇ ಕೇಂದ್ರ ಸರ್ಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತಿರುಗಿಬಿದ್ದಿದೆ.

ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬಹುಕೋಟಿ ಮೊತ್ತದ ಹಗರಣವನ್ನು ಸಿಬಿಐಗೆ ವರ್ಗಾವಣೆ ಮಾಡುವಂತೆ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯ ಸಿಬಿಐಗೆ ನೋಟಿಸ್ ಜಾರಿ ನೀಡಿದೆ.

ಬ್ಯಾಂಕ್ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠದ ಮುಂದೆ ಯೂನಿಯನ್ ಬ್ಯಾಂಕ್ ಪರ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹಾಜರಾಗಿ, ಯಾವುದೇ ಪ್ರಕರಣದಲ್ಲಿ 50 ಕೋಟಿ ರೂ.ಗಿಂತಲೂ ಹೆಚ್ಚಿನ ಮೊತ್ತದ ಹಗರಣ ಕಂಡುಬಂದರೆ, ಅದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಸ್ಥಳೀಯ ಪೊಲೀಸರೇ ತನಿಖೆ ನಡೆಸುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಈ ಹಗರಣದ ತನಿಖೆಗೆ ಅಂತರರಾಷ್ಟ್ರೀಯ ಪ್ರಾಮುಖ್ಯತೆ ಇದೆ. ಸ್ಥಳೀಯ ಪೊಲೀಸರು ಇಂತಹ ಪ್ರಕರಣಗಳ ತನಿಖೆ ನಡೆಸಬಾರದು ಎಂದು ಕೆಲವು ದಾಖಲೆಗಳನ್ನು ಪೀಠದ ಮುಂದೆ ಮಂಡಿಸಿ ಸಿಬಿಐಗೆ ವಹಿಸುವಂತೆ ಮನವಿ ಮಾಡಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳು ಸಿಬಿಐ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಆಗಸ್ಟ್ 7ಕ್ಕೆ ಮುಂದೂಡಿದರು.

ಈ ನಡುವೆ, ರಾಜ್ಯ ಪೊಲೀಸರು ಇ.ಡಿ. ಅಧಿಕಾರಿಗಳ ವಿರುದ್ಧ ಮಾಡಿರುವ ಎಫ್ಐಆರ್ ರದ್ದುಪಡಿಸುವಂತೆ ಕೋರಿ ಜಾರಿ ನಿರ್ದೇಶನಾಲಯ ಹೈಕೋರ್ಟ್ ಮೆಟ್ಟಿಲೇರಿದೆ.

ನಿಗಮದಲ್ಲಿ ನಡೆದಿರುವ 94.73 ಕೋಟಿ ರೂ. ಅಕ್ರಮ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆರೋಪಿಯನ್ನಾಗಿಸಲು ಒತ್ತಡ ಹೇರುತ್ತಿರುವ ಆರೋಪದಡಿ ಇ.ಡಿ. ಅಧಿಕಾರಿಗಳ ವಿರುದ್ಧ ನಿನ್ನೆ ನಗರದ ಪೊಲೀಸ್ ಠಾಣೆಯೊಂದರಲ್ಲಿ ದೂರು ದಾಖಲಾಗಿತ್ತು. ಈ ಸಂಬಂಧ ಜಾರಿ ನಿರ್ದೇಶನಾಲಯದ ಪರ ವಕೀಲ ಮಧುಕರ್ ದೇಶಪಾಂಡೆ, ಅರ್ಜಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳುವಂತೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಮನವಿ ಸಲ್ಲಿಸಿದರು.

## ರಸಗೊಬ್ಬರ ಸಬ್ಸಿಡಿಯಲ್ಲಿ ಶೇ.7.8ರ ಇಳಿಕೆ

ನವದೆಹಲಿ, ಜು. 23 – ಆಹಾರ, ರಸಗೊಬ್ಬರ ಹಾಗೂ ಇಂಧನಕ್ಕೆ ನೀಡುವ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಶೇ. 7.8 ರಷ್ಟು ಕಡಿತಗೊಳಿಸಿದೆ.

ಈ ಮೂರು ವಲಯಗಳಿಗೆ 2024 - 25ರ ಸಾಲಿನಲ್ಲಿ 3.81 ಲಕ್ಷ ಕೋಟಿ ರೂ. ಸಬ್ಸಿಡಿ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ತಿಳಿಸಿದ್ದಾರೆ. ಕಳೆದ ವರ್ಷ ಸಬ್ಸಿಡಿಗೆ 4.13 ಲಕ್ಷ ಕೋಟಿ ರೂ. ನೀಡಲಾಗಿತ್ತು. ಈ ಇಳಿಕೆ ಕಳೆದ ಫೆಬ್ರವರಿಯಲ್ಲಿ ಮಂಡಿಸಲಾದ ಹಂಗಾಮಿ ಬಜೆಟ್ ಅಂದಾಜಿನ ಹಂತದಲ್ಲೇ ಇದೆ.

ಆಹಾರ ಸಬ್ಸಿಡಿಯನ್ನು 2.12 ಲಕ್ಷ ಕೋಟಿ ರೂ.ಗಳಿಂದ 2.05 ಲಕ್ಷ ಕೋಟಿ ರೂ.ಗಳಿಗೆ ಇಳಿಕೆ ಮಾಡಲಾಗಿದೆ. ರಸಗೊಬ್ಬರ ಸಬ್ಸಿಡಿಯಲ್ಲಿ ಗಮನಾರ್ಹ ಇಳಿಕೆಯಾಗಿದೆ. ಕಳೆದ ವರ್ಷ 1.88 ಲಕ್ಷ ಕೋಟಿ ರೂ. ಅನುದಾನ ನೀಡಿದ್ದರೆ ಈ ಬಾರಿ 1.64 ಲಕ್ಷ ಕೋಟಿ ರೂ. ನೀಡಲಾಗಿದೆ

ಪೆಟ್ರೋಲಿಯಂ ವಲಯಕ್ಕೆ ನೀಡಲಾಗುವ ಸಬ್ಸಿಡಿಯನ್ನು 12,240 ಕೋಟಿ ರೂ.ಗಳಿಂದ 11,925 ಕೋಟಿ ರೂ.ಗಳಿಗೆ ಇಳಿಕೆ ಮಾಡಲಾಗಿದೆ. ಸರ್ಕಾರ ಅಡುಗೆ ಅನಿಲಕ್ಕೆ ಪ್ರಮುಖವಾಗಿ ಸಬ್ಸಿಡಿ ನೀಡುತ್ತಿದೆ.

## ಕೇಂದ್ರದ ಬಜೆಟ್ ; ಕನ್ನಡಿಗರ ಪಾಲಿಗೆ ಕರಾಳ ದಿನ : ಹೆಚ್. ಆಂಜನೇಯ ಕಿಡಿ



ಚಿತ್ರದುರ್ಗ, ಜು. 23 - ಈ ಹಿಂದೆ ಎಲ್ಲ ಬಜೆಟ್‌ಗಳಲ್ಲಿ ಕರ್ನಾಟಕದ ಹಿತಾಸಕ್ತಿಗೆ ಪೂರಕವಾಗಿ ಬೆರಳೆಣಿಕೆಯಷ್ಟು ಅಂಶಗಳಾದರೂ ಇರುತ್ತಿದ್ದವು. ಆದರೆ, ಈ ಬಾರಿಯ ಬಜೆಟ್ ಕನ್ನಡಿಗರ ಪಾಲಿಗೆ ಕರಾಳ ದಿನವಾಗಿದೆ ಎಂದು ಮಾಜಿ ಸಚಿವ ಹೆಚ್ ಆಂಜನೇಯ ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳ ಮೂಲಕ ಉತ್ತಮ ಆಡಳಿತ ನೀಡುತ್ತಿರುವ ಕಾರಣಕ್ಕೆ ಅಸೂಯೆಗೊಂಡಿರುವ ಕೇಂದ್ರದ ಬಿಜೆಪಿ ಸರ್ಕಾರ, ರಾಜ್ಯದಲ್ಲಿನ ಅಭಿವೃದ್ಧಿ ಕಾರ್ಯಗಳ ಸ್ಥಗಿತಕ್ಕೆ ಮುಂದಾಗಿದೆ. ದ್ವೇಷದ ರಾಜಕಾರಣಕ್ಕೆ ಬಜೆಟ್ ಬಳಸಿಕೊಂಡಿದೆ ಎಂದು ಅವರು ಕಿಡಿಕಾರಿದ್ದಾರೆ.

ವಿಧಾನಸಭಾ ಚುನಾವಣೆ ಮುನ್ನ ನಿರ್ಮಲಾ ಸೀತಾರಾಮನ್ ಮಂಡಿಸಿದ್ದ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿಸಿದ್ದ 5300 ಕೋಟಿ ಬಿಡುಗಡೆಗೆ ಯಾವುದೇ ರೀತಿ ಆಶಾಭಾವನೆ ಮೂಡಿಸದಿರುವುದು ವಂಚನೆ ನಡೆ ಆಗಿದೆ. ದಾವಣಗೆರೆ ಟು ತುಮಕೂರು ರೈಲು ಮಾರ್ಗ, ಕೈಗಾರಿಕೆಗಳ ಸ್ಥಾಪನೆ, ಭದ್ರಾ ಮೇಲ್ದಂಡೆ ಯೋಜನೆ ಹೀಗೆ ಅನೇಕ ಯೋಜನೆಗಳಿಗೆ ಈ ಬಜೆಟ್ ಉತ್ತರ ಕೊಡಲಿದೆ ಎಂಬ ನಿರೀಕ್ಷೆ ಹುಸಿ ಆಗಿದೆ. ಒಟ್ಟಾರೆ ರಾಜ್ಯದ ಪಾಲಿಗೆ ಸಣ್ಣ ಬೆಳಕು ಕೂಡ ಆಗದ ಈ ಬಜೆಟ್ ಕತ್ತಲಿಗೆ ದೂಡಿದೆ ಎಂದು ಅವರು ಹೇಳಿದ್ದಾರೆ.

ಚುನಾವಣೆ ಸಂದರ್ಭ ಚಂದ್ರಲೋಕವನ್ನೇ ತರುತ್ತೇವೆ ಎಂದು ಹೇಳುವ ಬಿಜೆಪಿ ನಾಯಕರ ಮಾತು ಜನರನ್ನು ಮೋಸದ ಜಾಲಕ್ಕೆ ತಳ್ಳುವ ಕುತಂತ್ರವಾಗಿದೆ ಎಂದು ಆಂಜನೇಯ ಹೇಳಿದ್ದಾರೆ.


## ಮುದ್ರಾ ಸಾಲದ ಮಿತಿ 20 ಲಕ್ಷ ರೂ.ಗಳಿಗೆ ಹೆಚ್ಚಳ

ನವದೆಹಲಿ, ಜು. 23 - ಮುದ್ರಾ ಸಾಲದ ಮಿತಿಯನ್ನು 20 ಲಕ್ಷ ರೂಪಾಯಿಗೆ ಹೆಚ್ಚಿಸುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಬಜೆಟ್ ಮಂಡನೆ ವೇಳೆ ಮಾತನಾಡಿದ ಅವರು, ಮುದ್ರಾ ಸಾಲದ ಮಿತಿಯನ್ನು ಈಗಿರುವ 10 ಲಕ್ಷ ರೂ.ಗಳಿಂದ 20 ಲಕ್ಷ ರೂ.ಗಳಿಗೆ ಹೆಚ್ಚಿಸುವುದಾಗಿ ಹೇಳಿದರು.

ಮುದ್ರಾ ಯೋಜನೆಯ ತರುಣ್ ವರ್ಗದಲ್ಲಿ ಬರುವವರು ಸಾಲ ಸರಿಯಾಗಿ ಮರುಪಾವತಿ ಮಾಡಿದ ನಂತರ ಈ ಸಾಲ ಪಡೆಯಬಹುದು ಎಂದು ಹೇಳಿದರು.

### ಭದ್ರಾ ಜಲಾಶಯ



ನೀರಿನ ಮಟ್ಟ : 168'2 ಅಡಿ
ಒಳ ಹರಿವು : 20045 ಕ್ಯೂಸೆಕ್ಸ್
ಹೊರ ಹರಿವು : 196 ಕ್ಯೂಸೆಕ್ಸ್
ಕಳೆದ ವರ್ಷ : 145'0 ಅಡಿ


॥ ಶ್ರೀ ಗಣೇಶಾಯ ನಮಃ ॥
ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,
ಸಿಲ್ವರ್ ಜುಬಿಲಿ ಟವರ್, ವಸಂತ ರಸ್ತೆ, ದಾವಣಗೆರೆ.
27ನೇ ವಾರ್ಷಿಕ ಮಹಾಸಭೆಯ ನೋಟೀಸು
ಸನ್ಮಾನ್ಯ ಸಂಘದ ಸದಸ್ಯರುಗಳೇ,
ಸೊಸೈಟಿಯ 2023-2024ನೇ ಸಾಲಿನ 27ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 10-08-2024ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ದಾವಣಗೆರೆ ವಿನೋಬ ನಗರ, 1ನೇ ಮುಖ್ಯರಸ್ತೆಯಲ್ಲಿರುವ ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಪ್ರಶಾಂತ ವಿ. ವೆರ್ಣೇಕರ್ (ಹೆಗಡೆ) ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ. ತಾವೆಲ್ಲರೂ ಸರಿಯಾದ ಸಮಯಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.
ಆಡಳಿತ ಮಂಡಳಿ





### ಪ್ರಥಮ ವರ್ಷದ ಪುಣ್ಯ ಸ್ಮರಣೆ



ಲಿಂ. ವೇ.ಮೂ. ಶ್ರೀ ಕೆ. ಸಿದ್ದಯ್ಯ ಮುತ್ತಿಗಿ ಹಿರೇಮಠ
ಜನನ : 06/12/1952 ನಿಧನ :24/07/2023

ಇಂದಿಗೆ ನೀವು ನಮ್ಮನ್ನು ಅಗಲಿ ಒಂದು ವರ್ಷವಾಯಿತು.
ನಿಮ್ಮ ಪ್ರೀತಿ, ಸ್ನೇಹ, ಶಿಸ್ತು, ಆ ಹಸನ್ಮುಖಿತನ,
ನಿಮ್ಮ ಮಾರ್ಗದರ್ಶನ ಹಚ್ಚ ಹಸಿರಾಗಿರಲಿ ಜೀವನದಲ್ಲಿ,
ಮತ್ತೊಮ್ಮೆ ಹುಟ್ಟಿಬನ್ನಿ, ನೀವು ನಮ್ಮ ಕುಟುಂಬದಲ್ಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀಮತಿ ಉಮಾದೇವಿ ಹಾಗೂ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು.


Shree Enterprises
Shamanur Road, Opp. Ashraya Hospital Davangere - 4.
STOCK CLEARANCE SALE
Till stocks last....
✦ Pressure cooker
✦ Cookware
✦ Gas Stove
✦ Kitchen Appliances
Ph : 70266 20019



ಗ್ರಾಹಕರ ಒತ್ತಾಯದ ಮೇರೆಗೆ ಸೇಲ್‌ನ್ನು 5 ದಿನಗಳು ವಿಸ್ತರಿಸಲಾಗಿದೆ
Davangere Biggest Life Style Fashion Expo
Branded Readymade Garments Gents, Ladies & Kids
Upto 80% Discount Sale
24th to 28th July 2024
(5 Days only)
Timing 10AM to 10 PM
HIGHLANDER DANIEL HECHTER BEAT IZOD INDIGO NATION Disney Pepe Jeans INDIAN TERRAIN BARE SCULLERS JACK&JONES
ಪ್ರವೇಶ / ಪಾರ್ಕಿಂಗ್ ಉಚಿತ
All Major Debit / Credit Cards. Google Pay, PhonePe Accepted
ರೆಡಿಮೆಡ್ ಗಾರ್ಮೆಂಟ್ಸ್
ರೂ. 149/- ರಿಂದ ಪ್ರಾರಂಭ
MONSOON DISCOUNT SALE
ಜೆಂಟ್ಸ್, ಲೇಡೀಸ್ ಮತ್ತು ಮಕ್ಕಳಿಗೆ ಅಧಿಕ ಹೊಸ ಸ್ಟಾಕಿನೊಂದಿಗೆ ಬ್ರಾಂಡೆಡ್ ಗಾರ್ಮೆಂಟ್ಸ್
upto 80% ಭಾರಿ ರಿಯಾಯಿತಿ ಮಾರಾಟ
ಜೆಂಟ್ಸ್ ರೆಡಿಮೇಡ್ ಗಾರ್ಮೆಂಟ್ಸ್
ಶರ್ಟ್, ಪ್ಯಾಂಟ್, ಟೀ-ಶರ್ಟ್, ಬರ್ಮುಡಾ, ಜಾಕೆಟ್, ಟ್ರಾಕ್‌ಪ್ಯಾಂಟ್, ಪುಲೋವರ್, ಫಾರ್ಮಲ್ ಶರ್ಟ್, ಕಾಟನ್ ಶರ್ಟ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ ಇತ್ಯಾದಿ
ಲೇಡೀಸ್ ಗಾರ್ಮೆಂಟ್ಸ್
ಕುರ್ತಿಸ್, ಟಾಪ್ಸ್, ಪ್ಲಾಜೋ, ವೆಸ್ಟರ್ನ್ ಔಟ್‌ಫಿಟ್ಸ್, ಪೈಜಾಮ, ಲೇಡಿಸ್ ಜೀನ್ಸ್ ಪ್ಯಾಂಟ್, ಲೆಗ್ಗಿಂಗ್ಸ್, ಕ್ಯಾಪ್ರಿ, ಜಾಕೆಟ್, ಲೋವರ್, ಇತ್ಯಾದಿ
ಬಾಯ್ಸ್, ಗರ್ಲ್ಸ್, ಕಿಡ್ಸ್ ರೆಡಿಮೇಡ್ ಗಾರ್ಮೆಂಟ್ಸ್
ಕಿಡ್ಸ್ ಶರ್ಟ್, ಕಿಡ್ಸ್ ಪ್ಯಾಂಟ್, ಫ್ರಾಕ್, ಕ್ಯಾಪ್ರಿ, ಟೀ-ಶರ್ಟ್, ಲೋವರ್, ಶರ್ಟ್, ಪ್ಯಾಂಟ್ ಇತ್ಯಾದಿ
HANDLOOM SPECIAL COUNTER
ಭಾರಿ ಆಫರ್ : ರಾಜಸ್ಥಾನಿ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್ಸ್, ಪಿಲ್ಲೋ ಕವರ್ಸ್, ಸೋಫಾ ಕವರ್ಸ್, ಕಾರ್ಪೆಟ್ಸ್‌ಗಳು ಇತ್ಯಾದಿ
SARKARI NAUKARA BHAVAN
S. Nijalingappa Layout Ring Road Clock Circle, Davangere
ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ
ಶ್ರೀಬಕ್ಕೇಶ್ವರ ಕಲ್ಯಾಣ ಮಂಟಪ ಹತ್ತಿರ, ರಿಂಗ್ ರಸ್ತೆ, ಕ್ಲಾಕ್ ಸರ್ಕಲ್ ಬಳಿ, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas